بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 05

ಸಂಚಿಕೆ: 07–08

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

15, 22 ಫೆಬ್ರವರಿ 2024, 15, 22 ತಬ್ಲೀಗ್ 1403 ಹಿಜರಿ ಶಮ್‌ಸಿ, 04, 11 ಶಾಬಾನ್ 1445 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

هُوَ الَّذِیۡۤ اَرۡسَلَ رَسُوۡلَہٗ بِالۡہُدٰی وَدِیۡنِ الۡحَقِّ لِیُظۡہِرَہٗ عَلَی الدِّیۡنِ کُلِّہٖ ۙ وَلَوۡ کَرِہَ الۡمُشۡرِکُوۡنَ

(ಸೂರತುತ್ತೌಬ: 33)

ಅಂದರೆ: ಸತ್ಪಥ ಮತ್ತು ಸತ್ಯ ಧರ್ಮ ಸಹಿತ ತನ್ನ ಸಂದೇಶವಾಹಕನನ್ನು ಕಳುಹಿಸಿದವನು ಅವನೇ ಆ ಧರ್ಮವು ಇತರ ಎಲ್ಲ ಧರ್ಮಗಳ ಮೇಲೆ ವಿಜಯ ಸಾಧಿಸಲಿಕ್ಕಾಗಿ ಬಹುದೇವಾರಾಧಕರು ಅದನ್ನು ಇಷ್ಟಪಡದಿದ್ದರೂ ಸರಿ.

# “ನಿಮ್ಮ ಅನುಗ್ರಹಗಳ ದಿವ್ಯಪ್ರಕಾಶವನ್ನು ಮತ್ತೆ ವ್ಯಕ್ತಪಡಿಸಲು ನಿಮ್ಮಿಂದಲೇ ಮತ್ತು ನಿಮ್ಮ ಸ್ವಂತ ಸಂತತಿಯಿಂದಲೇ ಒಬ್ಬ ವ್ಯಕ್ತಿಯನ್ನು ನಿಲ್ಲಿಸಲಾಗುವುದು”

**ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರಿಂದ ಹಝ್ರತ್ ಮಸೀಹ್ ಮೌಊದ್(ಅ) ಅವರ ಅನುಗ್ರಹಗಳ ಅಭಿವ್ಯಕ್ತಿ**

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

“ದೇವರು ನನ್ನೊಂದಿಗೆ ವಾಗ್ದಾನ ಮಾಡಿರುವುದೇನೆಂದರೆ ನಿಮ್ಮ ಅನುಗ್ರಹದ ದಿವ್ಯಪ್ರಕಾಶವನ್ನು ಮತ್ತೊಮ್ಮೆ ವ್ಯಕ್ತಪಡಿಸಲು ನಿಮ್ಮಿಂದಲೇ ಮತ್ತು ನಿಮ್ಮ ಸ್ವಂತ ಸಂತತಿಯಿಂದಲೇ ಒಬ್ಬ ವ್ಯಕ್ತಿಯನ್ನು ನಿಲ್ಲಿಸಲಾಗುವುದು ಅವನಲ್ಲಿ ನಾನು ಪವಿತ್ರಾತ್ಮದ ಅನುಗ್ರಹಗಳನ್ನು ಊದುವೆನು. ಅವನು ಆಂತರಿಕವಾಗಿ ಪರಿಶುದ್ಧನಾಗಿರುವನು ಮತ್ತು ದೇವರೊಂದಿಗೆ ಅತ್ಯಂತ ಪರಿಶುದ್ಧ ಸಂಬಂಧವನ್ನು ಹೊಂದಿರುತ್ತಾನೆ ಮತ್ತು **ಮಝ್‌ಹರುಲ್ ಹಖ್ಖಿ ವಲ್‌ಅಲಾಇ** ಆಗಿರುವನು ದೇವರು ಆಕಾಶದಿಂದ ಇಳಿದಂತೆ ಭಾಸವಾಗುವುದು.”

(ತೊಹ್‌ಫ ಗೊಲಡ್ವಿಯಾ, ರೂಹಾನಿ ಖಝಾಇನ್, ಸಂಪುಟ–17, ಪುಟ–181)

---

“ಸರ್ವಶಕ್ತನಾದ ಅಲ್ಲಾಹನು ನನ್ನ ಸಂತತಿಯಿಂದ ಅನೇಕ ವಿಧಗಳಲ್ಲಿ ಮಸೀಹರನ್ನು ಹೋಲುವ ವ್ಯಕ್ತಿ ಜನಿಸುತ್ತಾನೆ ಎಂದು ಸ್ಪಷ್ಟವಾದ ಮತ್ತು ಖಚಿತವಾದ ಭವಿಷ್ಯವಾಣಿಯಲ್ಲಿ ನನಗೆ ಬಹಿರಂಗಪಡಿಸಿದ್ದಾನೆ. ಆತನು ಆಕಾಶದಿಂದ ಇಳಿದು ಭೂಲೋಕದ ಜನರ ಮಾರ್ಗವನ್ನು ನೇರಗೊಳಿಸುವರು ಮತ್ತು ಸೆರೆಯಾಳುಗಳಿಗೆ ವಿಮೋಚನೆಯನ್ನು ನೀಡುವರು ಮತ್ತು ಅನುಮಾನಗಳ ಸರಪಳಿಯಲ್ಲಿ ಬಂಧಿಸಲ್ಪಟ್ಟವರನ್ನು ಬಿಡುಗಡೆ ಗೊಳಿಸುವರು. ಆತ್ಮೀಯ ಮಗು ಪ್ರೀತಿಯ ಮಗು, **ಮಝ್‌ಹರುಲ್ ಹಖ್ಖಿ ವಲ್‌ಅಲಾಇ–ಕಅನ್ನಲ್ಲಾಹ ನಝಲ ಮಿನಸ್ಸಮಾಇ.**”

(ಇಝಾಲ ಔಹಾಮ್, ರೂಹಾನಿ ಖಝಾಇನ್, ಸಂಪುಟ–3, ಪುಟ–180)

---

“ನನಗೆ ಅಲ್ಲಾಹನು ಹೀಗೆ ತಿಳಿಸಿರುವನು: ನಾನು ನಿನ್ನ ಜಮಾಅತಿಗಾಗಿ ನಿನ್ನ ಸಂತಾನದಿಂದಲೇ ಒಬ್ಬನ್ನನ್ನು ನಿಲ್ಲಿಸುವೆನು. ಅವನಿಗೆ ನನ್ನ ಸಾಮೀಪ್ಯ ಮತ್ತು ಸಂದೇಶವಾಣಿ ದಯಪಾಲಿಸಿ ಇತರಿಗಿಂತ ವಿಶಿಷ್ಟತೆ ನೀಡುವೆನು. ಅವನ ಬಲಿಕ ಸತ್ಯವು ಅಭಿವೃದ್ಧಿ ಹೊಂದುವುದು. ಅವನ ಬಲಿಕ ಅನೇಕರು ಸತ್ಯವನ್ನು ಸ್ವೀಕರಿಸುವರು. ನೀವು ಆ ದಿನವನ್ನು ಪ್ರತೀಕ್ಷಿಸುತ್ತಾ ಇರಿ. ಪ್ರತಿಯೊಬ್ಬ ವ್ಯಕ್ತಿಯು ಅವನಿಗೆ ನಿಗದಿಪಡಿಸಲಾದ ಸಮಯದಲ್ಲಿ ಗುರತಿಸಲ್ಪಡುತ್ತಾನೆ ಎಂದು ನೆನಪಿಡಿರಿ. ಅದಕ್ಕೆ ಮೊದಲು ಆ ವ್ಯಕ್ತಿ ಸಾಮಾನ್ಯವಾಗಿ ತೋರಬಹುದು ಅಥವಾ ಕೆಲವು ಮೋಸಗೊಳಿಸುವ ಯೋಚನೆಗಳ ಕಾರಣದಿಂದ ಅವನ ಆರೋಪ ಹೊರಿಸಲ್ಪಟ್ಟವನೂ ಆಗಬಹುದು–ಒಬ್ಬ ಪರಿಪೂರ್ಣ ಮನುಷ್ಯನಾಗುವವನು ಅದಕ್ಕೆ ಮೊದಲು ಗರ್ಭಕೋಶದಲ್ಲಿ ಒಂದು ವೀರ್ಯ ಬಿಂದುವಾಗಿ ಅಥವಾ ಅಂಟಿಕೊಳ್ಳುವ ವಸ್ತುವಾಗಿರುವ ಹಾಗೆ.”

(ಅಲ್‌ವಸಿಯ್ಯತ್, ರೂಹಾನಿ ಖಝಾಇನ್, ಸಂಪುಟ–20, ಪುಟ–306 ಅಡಿಟಿಪ್ಪಣಿ)

## ಕನ್ನಡ ವಾರಪತ್ರಿಕೆ ಬದರ್ "ಮುಸ್ಲೆಹ್ ಮೌಊದ್(ರ) ವಿಶೇಶ ಸಂಚಿಕೆ"

### ವಿಷಯ ಸೂಚಿಕೆ


| | ವಿಷಯ ಸೂಚಿಕೆ | ಪುಟ |
|---|---|---|
| * | ಹಝ್ರತ್ ಮುಸೀಹ್ ಮೌಊದ(ಅ) ರ ಅಧ್ಯಾಪನೆಗಳು | 1 |
| * | ವಿಷಯ ಸೂಚಿಕೆ ಮತ್ತು ಸಂಪಾದಕೀಯ | 2 |
| * | ಹಝ್ರತ್ ಮಿರ್ಝ ಮಸ್ರೂರ್ ಅಹ್ಮದ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್(ಅತಬಅ)ರವರ ಖುತ್‌ಬ ಜುಮುಅ | 3 |
| * | ಮುಸ್ಲಿಹ್ ಮೌಊದ್ ಅವರ ಹೆಸರು ಫಝ್ಲೆ ಉಮರ್ ಎಂದು ಏಕೆ ಇಡಲಾಯಿತು? | 10 |
| * | ಹಝ್ರತ್ ಮುಸ್ಲಿಹ್ ಮೌಊದ್(ರ) ಅವರ ಮಹಿಮೆ | 13 |
| * | ಸಮಾಧಿಗಳ ಮೇಲೆ ಹೂವುಗಳನ್ನು ಹಾಕುವುದು – ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ರವರ ಉಪದೇಶ ಮತ್ತು ಆ ಉಪದೇಶದ ಬುದ್ಧಿವಂತಿಕೆ | 15 |
| * | ತನಿಖಾ ನ್ಯಾಯಾಲಯದಲ್ಲಿ ಸಯ್ಯಿದುನಾ ಹಝ್ರತ್ ಮುಸ್ಲಿಹ್ ಮೌಊದ್ ಖಲೀಫತುಲ್ ಮಸೀಹ್ ಸಾನಿ(ರ)ರವರ ಹೇಳಿಕೆ | 17 |
| * | ಹಝ್ರತ್ ಮುಸ್ಲಿಹ್ ಮೌಊದ(ರಝಿಯಲ್ಲಾಹು ಅನ್‌ಹು) ರವರ ಬಗ್ಗೆ ಭವಿಷ್ಯವಾಣಿ | 24 |


# ಹಝ್ರತ್ ಮುಸ್ಲೆಹ್ ಮೌಊದ್(ರ) ರವರ ಶ್ರೇಷ್ಠ ಸ್ಥಾನ

ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ ಅಲೈಹಿಸ್ಸಲಾಮ್ ಅವರ ಮನೆಯಲ್ಲಿ ಜನವರಿ 12, 1889 ರಂದು ಸರ್ವಶಕ್ತನಾದ ಅಲ್ಲಾಹನ ಮಹಾನ್ ಘೋಷಣೆಯಡಿಯಲ್ಲಿ ಜನಿಸಿದರು. ಅವರ ಖಿಲಾಫತ್ ಬಗ್ಗೆ ಭವಿಷ್ಯವಾಣಿಗಳು ಶತಮಾನಗಳಿಂದ ನಡೆಯುತ್ತಿದ್ದವು. ಹಝ್ರತ್ ಪೈಗಂಬರ್(ಸ) ರವರು ಮುಸ್ಲೆಹ್ ಮೌದ್(ರ) ಬಗ್ಗೆ ಮಸೀಹ್ ಮೌಊದರಿಗೆ ಓರ್ವ ಪುತ್ರ ಜನಿಸುವನು ಆತನು ವಿಶೇಷ ಹಿರಿಮೆ ಮತ್ತು ವೈಭವವನ್ನು ಹೊಂದಿರುವನು ಎಂದು ಭವಿಷ್ಯ ನುಡಿದಿದ್ದರು. ಹಝ್ರತ್ ಪೈಗಂಬರ್(ಸ) ಅವರ ಮೊದಲು ಮತ್ತು ನಂತರದ ಹಿರಿಯರ ಭವಿಷ್ಯವಾಣಿಗಳು ಅವರ ಬಗ್ಗೆಯೂ ಕಂಡುಬರುತ್ತವೆ. ಈ ಎಲ್ಲಾ ಭವಿಷ್ಯವಾಣಿಗಳನ್ನು ಒಂದೇ ದೃಷ್ಟಿಕೋನದಿಂದ ನೋಡಿದಾಗ, ಹಝ್ರತ್ ಮಸೀಹ್ ಮೌಊದ್(ಅ) ಅವರ ಪುತ್ರ ಖಂಡಿತವಾಗಿಯೂ ವಿಶೇಷ ಹಿರಿಮೆ ಮತ್ತು ವೈಭವವನ್ನು ಹೊಂದಿದ್ದಾರೆ ಎಂದು ತಿಳಿಯುತ್ತದೆ, ಆದರೆ ಅದರ ಸರಿಯಾದ ಕಲ್ಪನೆ ಮತ್ತು ಅದರ ವಿವರಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ಸರ್ವಶಕ್ತನಾದ ಅಲ್ಲಾಹನು ನೀಡಿದ ಆ ಭವಿಷ್ಯವಾಣಿಗಳಿಂದ ತಿಳಿಯುತ್ತದೆ. ಇದು ಜಮಾಅತ್ತಿನಲ್ಲಿ "ಪೇಶ್ಗೋಯಿ ಮುಸ್ಲೆಹ್ ಮೌಊದ್" ಎಂದು ಪ್ರಸಿದ್ಧಿ ಹೊಂದಿದೆ. ಮುಸ್ಲೆಹ್ ಮೌಊದ್ ಭವಿಷ್ಯವಾಣಿಯಲ್ಲಿ 50 ಕ್ಕೂ ಹೆಚ್ಚು ಗುಣಲಕ್ಷಣಗಳನ್ನು ವಿವರಿಸಲಾಗಿದೆ, ಆದರೆ ವಿಶೇಷವಾಗಿ ಹೃದಯ ಮತ್ತು ಮನಸ್ಸಿನ ಮೇಲೆ ಪರಿಣಾಮ ಬೀರುವ ಒಂದು ವಿಷಯವೆಂದರೆ ಅಲ್ಲಾಹನ ಈ ಮಾತಾಗಿದೆ: **"ಕಅನ್ನಲ್ಲಾಹ ನಝಲ ಮಿನಸ್ಸಮಾಇ"** ಎಂದಾಗಿದೆ ಅಂದರೆ ಅವರ ಬರುವಿಕೆಯು ದೇವರು ಸ್ವತಃ ಆಕಾಶದಿಂದ ಇಳಿದಂತೆಯೇ ಇದೆ. ಇದು ಸರ್ವಶಕ್ತನಾದ ಅಲ್ಲಾಹನ ಮಹತ್ತರವಾದ ಸಹಾಯ ಮತ್ತು ಬೆಂಬಲದ ಸೂಚನೆಯಾಗಿತ್ತು. ಈ ಸ್ಥಳದಲ್ಲಿ ನಿಂತು ಗಾಂಭೀರ್ಯದಿಂದ ಆಲೋಚಿಸುವುದು ಯೋಗ್ಯವಾಗಿದೆ ಅಂದರೆ ಯಾರ ಆಗಮನವನ್ನು ಅಲ್ಲಾಹನು ತನ್ನ ಆಗಮನವೆಂದು ಘೋಷಿಸಿದ್ದಾನೊ ಆ ವ್ಯಕ್ತಿಯ ಘನತೆ ಹಾಗೂ ಆ ವ್ಯಕ್ತಿಯು ಎಂತಹ ಸ್ಥಾನಮಾನದ ವ್ಯಕ್ತಿಯಾಗಿರುತ್ತಾನೆ ಎಂದು ಪರಿಗಣಿಸಲಾಗುತ್ತದೆ. ನಿಸ್ಸಂದೇಹವಾಗಿ, ಅವರ ಅಸ್ತಿತ್ವವು ಸಾಮಾನ್ಯ ಅಸ್ತಿತ್ವವಾಗಿರಲಿಲ್ಲ ಬದಲಿಗೆ "ತಾವು ಶತಮಾನಗಳಲ್ಲಿ ಒಮ್ಮೆ ಮಾತ್ರವಲ್ಲದೆ ಸಾವಿರಾರು ವರ್ಷಗಳಲ್ಲಿ ಒಮ್ಮೆ ಮಾನವೀಯತೆಯ ದಿಗಂತದ ಮೇಲೆ ಏರುತ್ತಿರುವ ಆದಮ್‌ರ ಪ್ರಖ್ಯಾತ ಸಂತತಿಗಳಲ್ಲಿ ಒಬ್ಬರಾಗಿದ್ದಿರಿ ಮತ್ತು ಅವರ ದಿವ್ಯಪ್ರಕಾಶವು ಒಂದು ಪೀಳಿಗೆಯ ಮೇಲೆ ಮಾತ್ರವಲ್ಲದೆ ಇಪ್ಪತ್ತು ಮಾನವ ತಲೆಮಾರುಗಳ ಮೇಲೆ ಪ್ರಕಾಶಮಯವಾಗುತ್ತಲೇ ಇರುತ್ತದೆ."

ನಿಮಗೆ ಸರ್ವಶಕ್ತನಾದ ಅಲ್ಲಾಹನ ಕಡೆಯಿಂದ **"ಕಅನ್ನಲ್ಲಾಹ ನಝಲ ಮಿನಸ್ಸಮಾಇ"** ಎಂಬ ಗೌರವವು ಎಷ್ಟು ವೈಭವಯುತವಾಗಿದೆ ಎಂದರೆ ಅದನ್ನು ಹೆಚ್ಚು ವ್ಯಕ್ತಪಡಿಸಲು ಸಾಧ್ಯವಿಲ್ಲ. ಇದು ಸರ್ವಶಕ್ತನಾದ ಅಲ್ಲಾಹನ ಕಡೆಯಿಂದ ಉಪನಾಮ ಮತ್ತು ಬಿರುದಾಗಿದೆ. ಇದರಿಂದ ನಮಗೆ ಅವರು ತುಂಬಾ ಶ್ರೇಷ್ಠರಾಗಿದ್ದರು ಎಂದು ತಿಳಿದು ಬರುತ್ತದೆ. ಅವರು ಐವತ್ತೆರಡು ವರ್ಷಗಳ ಕಾಲ ಖಿಲಾಫತ್‌ನ ಶ್ರೇಷ್ಠ ಪದವಿಯಲ್ಲಿದ್ದರು,

لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

ಈ ಅವಧಿಯಲ್ಲಿ ಇಸ್ಲಾಮ್ ಅಹ್ಮದಿಯ್ಯತ್‌ಗೆ ಬಹಳ ಗೌರವದಿಂದ ಸೇವೆ ಸಲ್ಲಿಸಿದರು ಮತ್ತು ಕೇವಲ ಪ್ರವಾದಿಯ ವಿಶಿಷ್ಟವಾದಂತಹ ಮಹೋನ್ನತ ಕಾರ್ಯಗಳನ್ನು ಮಾಡಿದರು. ಸರ್ವಶಕ್ತನಾದ ಅಲ್ಲಾಹನು ತಮ್ಮನ್ನು ಪ್ರವಾದಿ ಎಂದು ಕರೆಯಲಿಲ್ಲ, ಆದರೆ ಅಲ್ಲಾಹನು ತಮ್ಮಿಂದ ಪ್ರವಾದಿಗಳ ಕಾರ್ಯಗಳನ್ನು ಮಾಡಿಸಿಕೊಂಡನು ಹಝ್ರತ್ ಮುಸ್ಲೆಹ್ ಮೌಊದ್(ರ) ಸ್ವತಃ ಹೇಳುತ್ತಾರೆ: ನಾನು ನಿಯೋಜಿತನಲ್ಲ ಆದರೆ ನನ್ನ ಧ್ವನಿಯು ಸರ್ವಶಕ್ತನಾದ ಅಲ್ಲಾಹನ ಧ್ವನಿಯಾಗಿದೆ ಮತ್ತು ನನ್ನ ಸ್ಥಾನವು ಖಿಲಾಫತ್ ಮತ್ತು ಮಾಮೂರಿಯತ್ ನಡುವೆ ಇದೆ. 1936 ರಲ್ಲಿ ಶೂರಾ ಸಂದರ್ಭದಲ್ಲಿ ಅವರು(ರ) ಹೇಳಿದರು:

"ಒಂದು ಖಿಲಾಫತ್ ಎಂದರೆ ಸರ್ವಶಕ್ತನಾದ ಅಲ್ಲಾಹನು ಜನರಿಂದ ಖಲೀಫನನ್ನು ಆರಿಸುತ್ತಾನೆ ಮತ್ತು ನಂತರ ಅವನನ್ನು ಸ್ವೀಕರಿಸುತ್ತಾನೆ, ಆದರೆ ಇದು ಅಂತಹ ಖಿಲಾಫತ್ ಅಲ್ಲ. ಅಂದರೆ, ನಾನು ಖಲೀಫ ಈ ಅರ್ಥದಲ್ಲಿ ಅಲ್ಲ ಅಂದರೆ ಖಲೀಫ ಅವ್ವಲ್ (ಮೊದಲ ಖಲೀಫರ) ನಿಧನದ ಎರಡನೇ ದಿನ, ಅಹ್ಮದಿಯಾ ಜಮಾಅತ್‌ನ ಜನರು ಒಟ್ಟುಗೂಡಿ ನನ್ನನ್ನು, ನನ್ನ ಖಿಲಾಫತ್ ಅನ್ನು ಒಪ್ಪಿಕೊಂಡರು, ಆದರೆ ನಾನು ಖಲೀಫನಾಗಿದ್ದೇನೆ ಏಕೆಂದರೆ ಮೊದಲ ಖಲೀಫರ ಖಿಲಾಫತ್ತಿನ ಮುಂಚೆಯೇ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಸರ್ವಶಕ್ತನಾದ ಅಲ್ಲಾಹನ ದೈವವಾಣಿಯ ಮೂಲಕ ನಾನು ಖಲೀಫನಾಗಿರುವೆನು ಎಂದು ತಿಳಿಸಿದ್ದರು. ಹಾಗಾಗಿ ನಾನು ಖಲೀಫ ಅಲ್ಲ ಬದಲಿಗೆ ವಾಗ್ದಾತ್ತ ಖಲೀಫನಾಗಿದ್ದೇನೆ. ನಾನು ನಿಯೋಜಿತನಲ್ಲ ಆದರೆ ನನ್ನ ಧ್ವನಿಯು ಸರ್ವಶಕ್ತನಾದ ಅಲ್ಲಾಹನ ಧ್ವನಿಯಾಗಿದ್ದು, ಸರ್ವಶಕ್ತನಾದ ಅಲ್ಲಾಹನು ಈ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಮೂಲಕ ತಿಳಿಸಿದ್ದಾನೆ. ಈ ಖಲೀಫತ್‌ನ ಸ್ಥಾನವು ಮಾಮುರಿಯತ್ (ನಿಯೋಜಿತ) ಮತ್ತು ಖಿಲಾಫತ್ ನಡುವೆ ಇದೆ ಮತ್ತು ಈ ಅವಕಾಶವು ಅಹ್ಮದಿಯಾ ಜಮಾಅತ್ ವ್ಯರ್ಥವಾಗಿ ಹೋಗಲು ಅವಕಾಶ ನೀಡುವುದಿಲ್ಲ ಮತ್ತು ನಂತರ ಸರ್ವಶಕ್ತನಾದ ಅಲ್ಲಾಹನ ಸನ್ನಿಧಿಯಲ್ಲಿ ಸಫಲವಾಗಿ ತಿರುಗುತ್ತದೆ. ಪ್ರವಾದಿಯವರು ಪ್ರತಿದಿನ ಬರುವುದಿಲ್ಲ ಎಂಬುದು ಎಷ್ಟು ಸತ್ಯವೋ, ಅದೇ ರೀತಿ ವಾಗ್ದಾತ್ತ ಖಲೀಫರು ಪ್ರತಿದಿನ ಬರುವುದಿಲ್ಲ ಎಂಬುದೂ ಸತ್ಯವಾಗಿದೆ. (ಸವಾನೆಹ್ ಫಝ್ಲೆ ಉಮರ್ ಸಂಪುಟ–4, ಪುಟ–508, ಫಝ್ಲೆ ಉಮರ್ ಫೌಂಡೇಷನ್)

ನಾವು ಕೆಲವು ಉಲ್ಲೇಖಗಳನ್ನು ಪ್ರಸ್ತುತಪಡಿಸುತ್ತೇವೆ ಅದರಿಂದ ನಮಗೆ ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಶ್ರೇಷ್ಠ ಸ್ಥಾನ, ಮಹಾನ್ ಸಾಧನೆಗಳು, ಜ್ಞಾನ ಮತ್ತು ದೇವರೊಂದಿಗಿನ ಅವರ ಸಂಬಂಧದ ಕುರಿತು ತಿಳಿದು ಬರುತ್ತದೆ. ಇದರಿಂದ ನಮಗೆ ತಿಳಿಯುವುದೇನೆಂದರೆ "ಜರಿಯುಲ್ಲಾಹು ಫೀ ಹಿಲಲಿಲ್ ಅಂಬಿಯಾ" ಮಸೀಹರ ಸುಪುತ್ರ ಅವರ ಸಾದೃಶರೂಪವು ಅವರ ಹಾಗೆಯೇ ಇಸ್ಲಾಮಿನ ಒಬ್ಬ ಮಹಾನ್ ಪೈಲ್ವಾನನಾಗಿದ್ದರು. ಅವರ ಮುಂದೆ ಯಾರೂ ತಮ್ಮ ನಾಲಿಗೆಯನ್ನು ತೆರೆಯುವ ಧೈರ್ಯ ಮಾಡಲಿಲ್ಲ. ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ:

"ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ನಂತರ ನಾನು ಇಡೀ ಜಗತ್ತಿಗೆ ಚಾಲೆಂಜ್ ನೀಡುತ್ತೇನೆ, ಇಸ್ಲಾಮ್ ಧರ್ಮದ ಮುಂದೆ ಯಾರಾದರು ತಮ್ಮ ಧರ್ಮವು ಸತ್ಯವೆಂದು ನಂಬಿದ್ದರೆ ಅಂತಹ ವ್ಯಕ್ತಿ ನನ್ನ ಮುಂದೆ ಬಂದು ಸ್ಪರ್ಧಿಸಲಿ. ಇಸ್ಲಾಂ ಧರ್ಮವು ಜೀವಂತ ಧರ್ಮವಾಗಿದೆ ಮತ್ತು ಯಾವುದೇ ಧರ್ಮವು ಅದರ ವಿರುದ್ಧ ನಿಲ್ಲಲು ಸಾಧ್ಯವಿಲ್ಲ ಎಂದು ನನಗೆ ಅನುಭವದಿಂದ ಸಾಬೀತಾಗಿದೆ ಏಕೆಂದರೆ ಸರ್ವಶಕ್ತನಾದ ಅಲ್ಲಾಹನು ನಮ್ಮ ಪ್ರಾರ್ಥನೆಗಳನ್ನು ಕೇಳುತ್ತಾನೆ ಮತ್ತು ಸ್ವೀಕರಿಸುತ್ತಾನೆ ಮತ್ತು ಬಾಹ್ಯವಾಗಿ ವಿಷಯಗಳು ಸಂಪೂರ್ಣವಾಗಿ ವಿರುದ್ಧವಾಗಿರುವ ಸಂದರ್ಭಗಳಲ್ಲಿ ದುಆವನ್ನು ಸ್ವೀಕರಿಸುತ್ತಾನೆ ಮತ್ತು ಇದು ಇಸ್ಲಾಮ್ ಧರ್ಮವು ಜೀವಂತ ಧರ್ಮ ಎಂಬುದಕ್ಕೆ ದೊಡ್ಡ ಸಂಕೇತವಾಗಿದೆ. ಯಾರಿಗಾದರೂ ಸಂದೇಹವಿದ್ದರೆ, ಬಂದು ಪ್ರಯತ್ನಿಸಬಹುದು. ನಮ್ಮ ಧರ್ಮ ಜೀವಂತ ಧರ್ಮವಾಗಿದೆ ಎಂದು ನಂಬುವವರಿದ್ದರೆ ಬನ್ನಿ, ಅವರೊಂದಿಗಿನ ದೇವರ ಸಂಬಂಧ ಮತ್ತು ಪ್ರೀತಿಯ ಬಗ್ಗೆ ಪುರಾವೆ ನೀಡಿ. ದೇವರು ಅವರನ್ನು ಪ್ರೀತಿಸಿದರೆ, ಅವರು ಸ್ಪರ್ಧೆಯಲ್ಲಿ ಖಂಡಿತವಾಗಿಯೂ ಸಹಾಯ ಮಾಡುತ್ತಾನೆ ಮತ್ತು ಬೆಂಬಲಿಸುತ್ತಾನೆ... ದೇವರು ಯಾರಿಗೆ ಸಹಾಯ ಮಾಡುತ್ತಾನೆ ಮತ್ತು ಯಾರ ಪ್ರಾರ್ಥನೆಯನ್ನು ಕೇಳುತ್ತಾನೆ ಎಂಬುದನ್ನು ಸಾಬೀತುಪಡಿಸಲು

*(ಪುಟ 23 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

"ಹಝ್ರತ್ ಪೈಗಂಬರ್(ಸ)ರ ಸಮೀಪದಲ್ಲಿ ಇರುವವರನ್ನು ಯುದ್ಧದಲ್ಲಿ ಅತ್ಯಂತ ಧೀರರೆಂದು ತಿಳಿಯಲಾಗುತ್ತದೆ. ಏಕೆಂದರೆ ಹಝ್ರತ್ ಪೈಗಂಬರ್(ಸ) ಅತ್ಯಂತ ಅಪಾಯಕರವಾದ ಸ್ಥಳಗಳಲ್ಲಿ ಇರುತ್ತಿದ್ದರು. ಸುಬ್‌ಹಾನಲ್ಲಾಹ್. ಎಂತಹ ವೈಭವ!" (ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್)

ಇಬ್ನ್ ಇಸ್‌ಹಾಕ್ ಬರೆಯುತ್ತಾರೆ ಹಝ್ರತ್ ಪೈಗಂಬರ್(ಸ) ಅವರನ್ನು ಮಕ್ಕಾದ ಅವಿಶ್ವಾಸಿಗಳು ಸುತ್ತುವರೆದಿರುವಾಗ ಅವರು(ಸ) ಹೇಳಿದರು, **ಮನ್ ರಜುಲುನ್ ಯಶ್ರೀ ಲನಾ ನಫ್ಸಹೂ?** ನಮಗಾಗಿ ಯಾರು ತನ್ನನ್ನು ಮಾರಿಕೊಳ್ಳುವ ವ್ಯಕ್ತಿ ಇದ್ದಾರೆ. ಆಗ ಝಿಯಾದ್ ಬಿನ್ ಸಕ್ಕಾನ್(ರ) ಐದು ಅನ್ಸಾರಿ ಸಹಾಬಿಯರೊಂದಿಗೆ ನಿಂತರು ಮತ್ತು ಕೆಲವರು ಉಮಾರಾ ಬಿನ್ ಯಾಝೀದ್ ಬಿನ್ ಸಕ್ಕಾನ್ ಎಂದು ಹೇಳುತ್ತಾರೆ.

ಹಝ್ರತ್ ಝಿಯಾದ್(ರ) ಅವರು ತಮ್ಮ ಮರಣಾಸ್ಥಿತಿಯಲ್ಲಿದ್ದರು. ಈ ಸ್ಥಿತಿಯಲ್ಲಿ, ಅವರು ಬಹಳ ಪ್ರಯಾಸದಿಂದ ತಮ್ಮ ತಲೆ ಎತ್ತಿ ತಮ್ಮ ಮುಖವನ್ನು ಹಝ್ರತ್ ಪೈಗಂಬರ್(ಸ) ಅವರ ಪಾದಗಳ ಮೇಲೆ ಇರಿಸಿದರು ಮತ್ತು ಅದೇ ಸ್ಥಿತಿಯಲ್ಲಿ ನಿಧನರಾದರು.

ಪ್ರಸ್ತಾಪಿಸಲಾದಂತೆ ಉಹುದ್ ಮೈದಾನದಲ್ಲಿ ಕೆಲವು ಕ್ಷಣಗಳ ಅಸಡ್ಡೆಯು ಇಸ್ಲಾಮೀ ಸೇನೆಯ ವಿಜಯವನ್ನು ತಾತ್ಕಾಲಿಕ ಪರಾಜಯವಾಗಿ ಬದಲಾಯಿಸಿತು. ಆದರೂ ಹಝ್ರತ್ ಪೈಗಂಬರ್(ಸ)ರನ್ನು ಲೋಕದ ಯುದ್ಧ ಚರಿತ್ರೆಯಲ್ಲಿ ಅತ್ಯುತ್ತಮ ಸೇನಾಧಿಪತಿ ಮತ್ತು ವಿವೇಕಯುತ ಹಾಗೂ ಕ್ಷಿಪ್ರಗತಿಯಲ್ಲಿ ತೀರ್ಮಾನ ಮಾಡುವ ವ್ಯಕ್ತಿಯಾಗಿ ಒಪ್ಪಲಾಗುತ್ತದೆ.

**ಉಹದ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ) ರವರ ಪರಿಶುದ್ಧ ಜೀವನ ಚರಿತ್ರೆಯ ಪ್ರಸ್ತಾವನೆ**

ಇಸ್ರೇಲ್ ಈಗ ಲೆಬನಾನಿನ ಗಡಿ ಪ್ರದೇಶದಲ್ಲೂ ಹಿಝ್ಬುಲ್ಲಾಹ್‌ದ ವಿರುದ್ಧವೂ ಯುದ್ಧದಲ್ಲಿ ತೊಡಗಿದೆ. ಇದರಿಂದ ಸ್ಥಿತಿ ಇನ್ನಷ್ಟು ಹಾಳಾಗುವುದು. ಅದೇ ರೀತಿಯಲ್ಲಿ ಅಮೇರಿಕ ಮತ್ತು ಬ್ರಿಟನ್ ಹೌಸಿ ಯಮನಿ ಗೋತ್ರಗಳ ವಿರುದ್ಧ ಯುದ್ಧದಲ್ಲಿ ತೊಡಗಿಕೊಂಡಿವೆ. ಈ ಎಲ್ಲ ಸಂಗತಿಗಳು ಯುದ್ಧವನ್ನು ಇನ್ನಷ್ಟು ವಿಸ್ತಾರಗೊಳಿಸುತ್ತಿವೆ. ಜಾಗತಿಕ ಯುದ್ಧದ ಲಕ್ಷಣಗಳು ಬಹಳ ಸಮೀಪವಾಗಿ ಕಾಣುತ್ತಿವೆ ಎಂದು ಈಗ ಅನೇಕ ಅಂಕಣಗಾರರು ಬರೆದಿರುವರು ಮತ್ತು ಬರೆಯುತ್ತಿದ್ದಾರೆ. ಆದ್ದರಿಂದ ದುಆಗಳ ಬಹಳ ಅಗತ್ಯವಿದೆ. ಅಲ್ಲಾಹನು ಮನುಷ್ಯರಿಗೆ ಬುದ್ಧಿ ಮತ್ತು ವಿವೇಕವನ್ನು ದಯಪಾಲಿಸಲಿ.

ಫಲಸ್ತೀನಿನ ಮುಕರ್‌ರಮ್ ಅಬೂ ಹಲ್ಮೀ ಮುಹಮ್ಮದ್ ಉಕಾಶ ಸಾಹಿಬ್, ಮುಕರ್‌ರಮ ಅಮತುನ್ನಸೀರ್ ಝಫರ್ ಸಾಹಿಬಾ, ಮುಕರ್‌ರಮ ನಸೀಮ್ ಅಖ್ತರ್ ಸಾಹಿಬಾ ಮತ್ತು ಮುಕರ್‌ರಮ ಮುಬಾರಕಾ ಬೇಗಮ್ ಸಾಹಿಬಾರವರ ಸದ್ಗುಣಗಳ ಪ್ರಸ್ತಾವನೆ ಮತ್ತು ನಮಾಝೆ ಜನಾಝ ಗ್ಹಾಯಿಬ್ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **12-01-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ

إِيَّاكَ نَعْبُدُ وَإِيَّاكَ نَسْتَعِيْنُ ـ اِهْدِنَا الصِّرَاطَ الْمُسْتَقِيْمَ ـ

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

ಹಝ್ರತ್ ಪೈಗಂಬರ್(ಸ)ರ ಜೀವನಚರಿತ್ರೆಗೆ ಸಂಬಂಧಪಟ್ಟು ಉಹುದ್ ಯುದ್ಧದ ಪ್ರಸ್ತಾಪ ನಡೆಯುತ್ತಿತ್ತು. ಈ ಸಂಬಂಧವಾಗಿ ಇನ್ನಷ್ಟು ವಿವರಣೆ ಹೀಗಿದೆ: ಜನರಲ್ಲಿ ಶತ್ರುಗಳಿಂದ ಅತ್ಯಂತ ಸಮೀಪವಾಗಿ ಹಝ್ರತ್ ಪೈಗಂಬರ್(ಸ) ಇದ್ದರು. ಅವರ ಜೊತೆಗೆ 15 ವ್ಯಕ್ತಿಗಳು ಸ್ಥೈರ್ಯದಿಂದ ಇದ್ದರು. ಮುಹಾಜಿರರಲ್ಲಿ ಎಂಟು ಜನರಿದ್ದರು ಅವರಲ್ಲಿ ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ), ಹಝ್ರತ್ ತಲ್‌ಹ(ರ), ಝುಬೈರ್(ರ), ಅಬ್ದುರ್ರಹ್ಮಾನ್ ಬಿನ್ ಔಫ್(ರ), ಸಾಅದ್ ಬಿನ್ ಅಬೀ ವಖಾಸ್(ರ), ಅಬೂ ಉಬೈದಹ್ ಬಿನ್ ಜರಾಹ್(ರ) ಮತ್ತು ಅನ್ಸಾರರಲ್ಲಿ ಏಳು ವ್ಯಕ್ತಿಗಳಲ್ಲಿ ಹಝ್ರತ್ ಹಬ್ಬಾಬ್ ಬಿನ್ ಮುನ್‌ಝಿರ್(ರ), ಹಝ್ರತ್ ಅಬೂ ದಜಾನ(ರ), ಆಸಿಮ್ ಬಿನ್ ಸಾಬಿತ್(ರ), ಹಾರಿಸ್ ಬಿನ್ ಸಿಮ್ಮ(ರ), ಸಹಲ್ ಬಿನ್ ಹನೀಫ್(ರ), ಮತ್ತು ಸಾಅದ್ ಬಿನ್ ಮುಆಝ್(ರ) ಕೆಲವರ ಪ್ರಕಾರ ಸಾಅದ್ ಬಿನ್ ಉಬಾದ(ರ) ಮತ್ತು ಮುಹಮ್ಮದ್ ಬಿನ್ ಮುಸಲ್ಲಮ(ರ) ಸಹ ಇದ್ದರು ಎಂದು ಹೇಳುತ್ತಾರೆ. ಹಝ್ರತ್ ಪೈಗಂಬರ್(ಸ)ರ ಮುಂದೆ 30 ವ್ಯಕ್ತಿಗಳು ಸ್ಥಿರಚಿತ್ತರಾಗಿ ಇದ್ದರು ಎಂದು ಕೆಲವರು ಹೇಳಿರುವರು. ಅವರ ಸ್ಥಿತಿ ಏನಾಗಿತ್ತು ಎಂದರೆ, ಎಲ್ಲರೂ ಹೀಗೆ ಹೇಳುತ್ತಿದ್ದರು: 'ನನ್ನ ಮುಖ ಹಝ್ರತ್ ಪೈಗಂಬರ್(ಸ)ರ ಮುಖದ ಮುಂದೆ ಇತ್ತು ಮತ್ತು ನನ್ನ ಜೀವ ಹಝ್ರತ್ ಪೈಗಂಬರ್(ಸ)ರ ಜೀವದ ಮುಂದೆ ಇದೆ ಹಾಗೂ ಹಝ್ರತ್ ಪೈಗಂಬರ್(ಸ) ಸುರಕ್ಷಿತವಾಗಿರಲಿ ಮತ್ತು ನನ್ನ ಜೀವ ತ್ಯಾಗವಾಗಲಿ.' (ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ-4, ಪುಟ-196-197, ದಾರುಲ್ ಕುತುಬ್ ಇಲ್‌ಮಿಯ ಬೈರುತ್)

ಒಂದು ವರದಿಯಲ್ಲಿ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಹನ್ನೊಂದು ಜನರು ಮತ್ತು ತಲ್ಹಾ ಬಿನ್ ಉಬೈದುಲ್ಲಾ ಉಳಿದಿದ್ದರು ಎಂಬ ಉಲ್ಲೇಖವಿದೆ. ಮುಶ್ರಿಕೀನರು ಹಝ್ರತ್ ಪೈಗಂಬರ್(ಸ) ಅವರನ್ನು ಸುತ್ತುವರೆದಿರುವಾಗ, ಹಝ್ರತ್ ಪೈಗಂಬರ್(ಸ) ಅವರು ಏಳು ಅನ್ಸಾರಿ ಸಹಾಬರವರು ಮತ್ತು ಒಬ್ಬ ಖುರೈಷಿ ಸಹಾಬಯರ ನಡುವೆ ಇದ್ದರು ಎಂದು ಹದೀಸ್ ಇದೆ. ಅಂತೆಯೇ, ಮತ್ತೊಂದು ಹದೀಸ್‌ನಲ್ಲಿ, ಹಝ್ರತ್ ಪೈಗಂಬರ್(ಸ) ಒಂಬತ್ತು ಜನರ ನಡುವೆ ಏಕಾಂಗಿಯಾಗಿದ್ದರು. ಅನ್ಸಾರರಲ್ಲಿ ಏಳು ಮಂದಿ ಮತ್ತು ಖುರೈಷಿಗಳಲ್ಲಿ ಇಬ್ಬರು ಮತ್ತು ಅವರು ಹತ್ತನೆಯವರಾಗಿದ್ದರು. (ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ-4, ಪುಟಗಳು 203-202, ಮುದ್ರಿತ ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ವಿವಿಧ ವರದಿಗಳಲ್ಲಿ, ಹಝ್ರತ್ ಪೈಗಂಬರ್(ಸ) ರೊಂದಿಗೆ ಸ್ಥಿರಚಿತ್ತತೆಯಿಂದ ಉಳಿದಿರುವ ಸಹಾಬರವರ ಸಂಖ್ಯೆಯನ್ನು ವಿಭಿನ್ನವಾಗಿ ವಿವರಿಸಲಾಗಿದೆ. ರಿಸರ್ಚ್ ಸೆಲ್ ನೀಡಿರುವ ಟಿಪ್ಪಣಿಯಲ್ಲಿ ಮೂವತ್ತು ಎಂದು ನಮೂದಿಸಲಾಗಿದೆ ಎನ್ನುತ್ತಾರೆ. ಇದರ ಒಂದು ಸಮರ್ಥನೆ ಹೀಗಿದೆ: ಸಹಾಬಿಯರ ಸಂಖ್ಯೆ ಬೇರೆ ಬೇರೆ ಸಮಯಗಳಲ್ಲಿ ಬದಲಾಗುತ್ತಾ ಇದ್ದಿರಬಹುದು. 15 ವ್ಯಕ್ತಿಗಳನ್ನು ನೋಡಿದವರು, 15 ಎಂದು ಹೇಳಿದರು. ಪ್ರತಿಯೊಬ್ಬರು ನೋಡಿದ್ದಷ್ಟು ಸಂಖ್ಯೆಯನ್ನು ಹೇಳಿಕೊಂಡರು.

ಆದಾಗ್ಯೂ, ಇದು ಸರಿ ಎಂದು ತೋರುತ್ತದೆ ಏಕೆಂದರೆ ಹಿಂದಿನ ಖುತ್‌ಬ ಜುಮುಅಗಳಲ್ಲಿ ಈಗಾಗಲೇ ವಿವರಿಸಿದ ವಿವರವಾಗಿ ಸಹಾಬಿಯರು ಹಝ್ರತ್ ಪೈಗಂಬರ್(ಸ)ರ ಸುತ್ತ ಬರುತ್ತಿದ್ದರು. ಅನಂತರ ಶತ್ರುಗಳ ದಾಳಿಯಿಂದ ಅವರ ಕೂಟ ಚದುರಿ ಹೋಗುತ್ತಿತ್ತು. ಅನಂತರ ಪುನಃ ಅವರು ಒಟ್ಟು ಸೇರುತ್ತಿದ್ದರು.

ಹೇಗಿದ್ದರೂ ಸಂಗತಿ ಏನೆಂದರೆ, ಸಹಾಬಿಯರು ಸ್ಥಿರಚಿತ್ತತೆಯ ಮಾದರಿ ತೋರಿಸುತ್ತಾ ಇದ್ದರು ಮತ್ತು ಯಾರಿಗೂ ಯಾವುದೇ ರೀತಿಯ ಮರಣ ಭಯ ಇದ್ದಿರಲಿಲ್ಲ. ಸಾಯಲು ತಯಾರಾಗಿದ್ದೇವೆ ಎಂಬ ಬೈಅತ್ ಪ್ರತಿಜ್ಞೆಯನ್ನು ಸಹಾಬಿಯರ ಒಂದು ಸಂಘದಿಂದ ಹಝ್ರತ್ ಪೈಗಂಬರ್(ಸ) ಪಡೆದಿದ್ದರು ಎಂಬ ಪ್ರಸ್ತಾಪವೂ ಇದೆ. ಮುಸ್ಲಿಮರು ಸ್ಪಷ್ಟವಾಗಿ ಹಿಮ್ಮೆಟ್ಟಿದಾಗ, ಅವರಲ್ಲಿ ಕೆಲವರು ಹುತಾತ್ಮರಾಗುವವರೆಗೂ ಹಝ್ರತ್ ಪೈಗಂಬರ್(ಸ) ರವರನ್ನು ರಕ್ಷಿಸಲು ಅವರು ತಮ್ಮ ಪ್ರಾಣವನ್ನು ಪಣಕ್ಕಿಟ್ಟರು.

ಬೈಅತ್ ಮಾಡಿದ ಸೌಭಾಗ್ಯಶಾಲಿಗಳ ಸಂಖ್ಯೆ ಎಂಟು ಎಂದು ವರದಿಯಾಗಿದೆ. ಆ ಬೈಅತ್ ಮಾಡಿದ ಸೌಭಾಗ್ಯಶಾಲಿಯರ ಹೆಸರುಗಳು ಹೀಗಿವೆ: ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ), ಹಝ್ರತ್ ಅಲೀ(ರ), ಹಝ್ರತ್ ತಲ್ಹಾ(ರ), ಹಝ್ರತ್ ಝುಬೈರ್(ರ), ಹಝ್ರತ್ ಸಾಅದ್(ರ), ಹಝ್ರತ್ ಸಹಲ್ ಬಿನ್ ಹನೀಫ್(ರ), ಹಝ್ರತ್ ಅಬೂ ದಜಾನ(ರ), ಹಝ್ರತ್ ಹಾರಿಸ್ ಬಿನ್ ಸಿಮ್ಮ(ರ), ಹಝ್ರತ್ ಹುಬ್ಬಾಬ್ ಬಿನ್ ಮುನ್‌ಝರ್(ರ) ಮತ್ತು ಹಝ್ರತ್ ಆಸಿಮ್ ಬಿನ್ ಸಾಬಿತ್(ರ). ಅವರಲ್ಲಿ ಯಾರೂ ಶಹೀದ್ ಆಗಲಿಲ್ಲ. (ಅಸಾಬ, ಭಾಗ-3, ಪುಟ-431, ದಾರುಲ್ ಕುತುಬ್ ಇಲ್ಮಿಯ ಬೈರುತ್ 1995) (ಸಬ್ಲುಲ್ ಹುದಾ ವರ್‌ರಶ್ಶಾದ್, ಸಂಪುಟ-4, ಪುಟ-198, ದಾರುಲ್ ಕುತುಬ್ ಇಲ್ಮಿಯ ಬೈರುತ್)

ಅಲ್ಲಾಮಾ ಝಿಮಖ್ಶರಿ ಅವರ ಪುಸ್ತಕ ಖಾಸಾಎಸ್-ಎ-ಅಶ್ರಫ್ ಹೇಳುವಂತೆ ಉಹುದ್ ದಿನದಂದು ಹಝ್ರತ್ ಝುಬೈರ್(ರ) ಅವರು ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಬಹಳ ಸ್ಥಿರಚಿತ್ತತೆಯೊಂದಿಗೆ ಇದ್ದರು ಮತ್ತು ಆ ಸಂದರ್ಭದಲ್ಲಿ ಅವರು ಹಝ್ರತ್ ಪೈಗಂಬರ್(ಸ.ಅ) ಅವರಿಗೆ ಸಾಯಲು ತಯಾರಾಗಿದ್ದೇವೆ ಎಂದು ಬೈಅತ್ ಮಾಡಿದರು. ಅಂದರೆ, ಅವರು ಹಝ್ರತ್ ಪೈಗಂಬರ್(ಸ) ಅವರ ರಕ್ಷಣೆಯಲ್ಲಿ ತಮ್ಮ ಪ್ರಾಣವನ್ನು ನೀಡುತ್ತಾರೆ ಆದರೆ ಹಝ್ರತ್ ಪೈಗಂಬರ್(ಸ) ಅವರ ಸಹವಾಸವನ್ನು ಬಿಡುವುದಿಲ್ಲ ಎಂಬ ವಾಗ್ದಾನ ಮಾಡಿದ್ದರು. (ಸೀರತುಲ್-ಹಲ್ಬಿಯಾಹ್, ಸಂಪುಟ-2, ಪುಟ-321, ದಾರುಲ್ ಕುತುಬ್ ಇಲ್ಮಿಯಾ ಬೈರುತ್)

ಉಹುದಿನ ದಿನದಂದು ಸಹಾಬಿಯರ ಸ್ಥೈರ್ಯ ಮತ್ತು ತ್ಯಾಗದ ಬಗ್ಗೆ ಹಝ್ರತ್ ಸಾಹಿಬ್‌ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೀಗೆ ಹೇಳುತ್ತಾರೆ: ಸಹಾಬಿಯರು ಹಝ್ರತ್ ಪೈಗಂಬರ್(ಸ)ರ ಸುತ್ತ ಒಟ್ಟುಗೂಡಿದ್ದರು. ಅವರು ತೋರಿಸಿದ ತ್ಯಾಗದ ಉದಾಹರಣೆಯನ್ನು ಲೋಕಕ್ಕೆ ತೋರಿಸಲು ಸಾಧ್ಯವಲ್ಲ. ಅವರು ಚಿಟ್ಟೆಗಳ ಹಾಗೆ ಹಝ್ರತ್ ಪೈಗಂಬರ್(ಸ)ರ ಸುತ್ತ ತಿರುಗುತ್ತಿದ್ದರು. ಹಝ್ರತ್ ಪೈಗಂಬರ್(ಸ)ರಿಗಾಗಿ ತಮ್ಮ ಜೀವದೊಂದಿಗೆ ಆಟವಾಡುತ್ತಿದ್ದರು. ಬರುತ್ತಿದ್ದ ಪ್ರತಿಯೊಂದು ಏಟನ್ನು ಸಹಾಬಿಯರು ತಮ್ಮ ಮೇಲೆ ತಾಗುವಂತೆ ಮಾಡಿಕೊಂಡು ಹಝ್ರತ್ ಪೈಗಂಬರ್(ಸ)ರನ್ನು ರಕ್ಷಿಸುತ್ತಿದ್ದರು. ಅದರ ಜೊತೆಗೆ ಶತ್ರುಗಳಿಗೆ ತಿರುಗೇಟು ಕೊಡುತ್ತಾ ಹೋಗುತ್ತಿದ್ದರು. (ಸೀರತ್ ಖಾತಮನ್ನಬೀಈನ್(ಸ), ಹಝ್ರತ್ ಸಾಹಿಬ್ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ-495)

ಮತ್ತೆ ಮುಂದೆ ಹೇಳುತ್ತಾರೆ: "ಈ ಬೆರಳೆಣಿಕೆಯ ತ್ಯಾಗಶೀಲರು ಮಹಾ ಪ್ರವಾಹದ ಮುಂದೆ ಎಷ್ಟರ ತನಕ ನಿಲ್ಲಬಹುದಾಗಿತ್ತು? ಅದು ಭಯಾನಕವಾದ ಅಲೆಗಳ ಹಾಗೆ ನಾಲ್ಕೂ ಕಡೆಯಿಂದ ಬರುತ್ತಾ ಇದ್ದುವು. ಶತ್ರುಗಳ ದಾಳಿಗಳ ಪ್ರತಿಯೊಂದು ಅಲೆ ಮುಸ್ಲಿಮರನ್ನು ಎಲ್ಲಿಂದ ಎಲ್ಲಿಗೋ ಕೊಂಡು ಹೋಗುತ್ತಿತ್ತು. ಆದರೆ ಸ್ವಲ್ಪವಾದರೂ ಅದರ ಶಕ್ತಿ ಕಡಿಮೆಯಾಗುವಾಗ ಮುಸ್ಲಿಮರು ಹೋರಾಡುತ್ತಾ ಪುನಃ ತಮ್ಮ ಪ್ರಿಯ ನೇತಾರರಾದ ಹಝ್ರತ್ ಪೈಗಂಬರ್(ಸ)ರ ಸುತ್ತ ಒಟ್ಟು ಸೇರುತ್ತಿದ್ದರು. ಕೆಲವೊಮ್ಮೆ ಎಂತಹ ಅಪಾಯಕಾರಿ ದಾಳಿ ಸಂಭವಿಸುತ್ತಿತ್ತು ಎಂದರೆ ಹಝ್ರತ್ ಪೈಗಂಬರ್(ಸ) ರವರು ಪ್ರಾಯೋಗಿಕವಾಗಿ ಏಕಾಂಗಿಯಾಗಿ ಉಳಿಯುತ್ತಿದ್ದರು. ಹೀಗೆ ಒಂದು ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಅವರ ಸುತ್ತಲು ಕೇವಲ ಹನ್ನೆರಡು ಜನರು ಮಾತ್ರ ಇದ್ದರು ಮತ್ತೊಂದು ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಕೇವಲ ಇಬ್ಬು ಜನರು ಮಾತ್ರ ಉಳಿದಿದ್ದರು. ಅವರಲ್ಲಿ ಹಝ್ರತ್ ಅಬೂಬಕರ್(ರ), ಅಲೀ(ರ), ತಲ್ಹಾ(ರ), ಝುಬೈರ್(ರ), ಸಾದ್ ಬಿನ್ ವಖಾಸ್(ರ), ಅಬೂ ದಜಾನ ಅನ್ಸಾರಿ(ರ), ಸಾದ್ ಬಿನ್ ಮುಆಝ್(ರ) ಮತ್ತು ತಲ್ಹಾ ಅನ್ಸಾರಿ(ರ) ರವರ ಹೆಸರುಗಳು ವಿಶೇಷವಾಗಿ ಉಲ್ಲೇಖಿಸಲಾಗುತ್ತದೆ." (ಸೀರತ್ ಖಾತಮನ್ನಬೀಈನ್(ಸ) ಹಝ್ರತ್ ಸಾಹಿಬ್ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-495-496) ಈ ಉಲ್ಲೇಖದೊಂದಿಗೆ ಸ್ಪಷ್ಟವಾಗಿ ತಿಳಿಯುವುದೇನೆಂದರೆ ಹಝ್ರತ್ ಪೈಗಂಬರ್(ಸ) ಅವರ ಸಹಾಬರವರ ಸಂಖ್ಯೆಯು ನಾನು ಈಗಾಗಲೇ ವಿವರಿಸಿದಂತೆ ಯುದ್ಧದ ಸಂದರ್ಭದಲ್ಲಿ ಕೆಲವೊಮ್ಮೆ ಕಡಿಮೆಯಾಗುತ್ತಿತ್ತು ಮತ್ತು ಕೆಲವೊಮ್ಮೆ ಹೆಚ್ಚಾಗುತ್ತಿತ್ತು.

ಸುಳ್ಳು ಹೇಳುವುದನ್ನು ಹಝ್ರತ್ ಪೈಗಂಬರ್(ಸ) ಧರ್ಮಬದ್ಧಗೊಳಿಸಿದ್ದಾರೆ ಎಂದು ಕ್ರೈಸ್ತರು ಆರೋಪಿಸುತ್ತಾರೆ. ಈ ಆಧಾರರಹಿತ ಆಕ್ಷೇಪಕ್ಕೆ ಉತ್ತರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಮ್ಮ ನೇತಾರ ಮತ್ತು ಪವಿತ್ರ ಪ್ರವಾದಿಯಾದ ಹಝ್ರತ್ ಪೈಗಂಬರ್(ಸ)ರ ಒಂದು ಉನ್ನತ ಮಾದರಿ ಇಲ್ಲಿ ಸಾಬೀತಾಗುತ್ತದೆ. ಅದೇನೆಂದರೆ, ಯಾವ "ತೌರಿಯ"ವನ್ನು ನಿಮ್ಮ ಏಸುಕ್ರಿಸ್ತ ತಾಯಿಹಾಲಿನ ಹಾಗೆ ಜೀವಿತಪೂರ್ತಿ ಉಪಯೋಗಿಸುತ್ತಿದ್ದರೋ ಅದರಿಂದ ಸಾಧ್ಯವಾದಷ್ಟು ಬಿಟ್ಟುನಿಲ್ಲಲು ಹಝ್ರತ್ ಪೈಗಂಬರ್(ಸ) ಆದೇಶ ನೀಡಿದ್ದರು. ತೌರಿಯಾದ ಅಕ್ಷರಶಃ ಅರ್ಥವೆಂದರೆ ನಾಲಗೆಯಿಂದ ಒಂದು ಮಾತು ಹೇಳುವುದು ಮತ್ತು ಮನಸ್ಸಿನಲ್ಲಿ ಬೇರೆ ಸಂಗತಿ ಇರುವುದನ್ನು "ತೌರಿಯ" ಎಂದು ಕರೆಯಲಾಗುತ್ತದೆ ಅಂದರೆ, ಎರಡು ಅರ್ಥಗಳನ್ನು ಹೊಂದಿರುವುದನ್ನು ಹೇಳುವುದು. ಇದನ್ನು ವಿವರಿಸುತ್ತಾ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತೌರಿಯಾ ಪದವನ್ನು ಹೆಚ್ಚು ವಿವರವಾಗಿ ವಿವರಿಸಿದ್ದಾರೆ. ನಾನು ಅಕ್ಷರಶಃ ಅರ್ಥವನ್ನು ವಿವರಿಸಿದೆ. ಮತ್ತು ಅದನ್ನು ಹೀಗೆ ವಿವರಿಸಿದರು: ಪ್ರಲೋಭನೆಯ ಸಮಯದಲ್ಲಿ ಭಯದಿಂದ ಒಂದು ವಿಷಯವನ್ನು ಮರೆಮಾಡಲು, ಬೇರೆ ಉದ್ದೇಶಕ್ಕಾಗಿ ಅಥವಾ ಇತರ ಉದ್ದೇಶಕ್ಕಾಗಿ ಒಂದು ರಹಸ್ಯವನ್ನು ಮರೆಮಾಡಲು, ಬುದ್ಧಿವಂತರು ಅರ್ಥಮಾಡಿಕೊಳ್ಳುವ ಮತ್ತು ಮೂರ್ಖರು ಅರ್ಥ ಮಾಡಿಕೊಳ್ಳದ ಉದಾಹರಣೆಗಳಲ್ಲಿ ವಿವರಿಸುವುದು. ಅಂದರೆ, ಸುಳ್ಳಿಲ್ಲದ ರೀತಿಯಲ್ಲಿ ಬುದ್ಧಿವಂತಿಕೆಯಿಂದ ಮಾತನಾಡುವುದು ಮತ್ತು ಅದರ ಅರ್ಥವನ್ನು ಬುದ್ಧಿವಂತ ವ್ಯಕ್ತಿಗೆ ನಿಜವಾದ ಸತ್ಯ ಏನೆಂದು ಅರ್ಥವಾಗುತ್ತದೆ ಮತ್ತು ಮೂರ್ಖನಿಗೆ ಅರ್ಥವಾಗುವುದಿಲ್ಲ. ಅವರ ಚಿಂತನೆಯು ಬೇರೆ ದಾರಿಯಲ್ಲಿ ಸಾಗಬೇಕು, ಆದರೆ ಇದು ಅತ್ಯುನ್ನತ ಮಟ್ಟದ ಧಾರ್ಮಿಕತೆಗೆ ವಿರುದ್ಧವಾಗಿದೆ ಎಂದು ಅವರು ಹೇಳಿದರು. ಇದು ಅತ್ಯುನ್ನತ ಮಟ್ಟದ ಧರ್ಮನಿಷ್ಠೆಗೆ ವಿರುದ್ಧವಾಗಿದೆ ಎಂದು ಹದೀಸ್‌ಗಳಿಂದ ಸಾಬೀತಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇದನ್ನು ಬಹಿರಂಗವಾಗಿ ವಿವರಿಸಿದರು. ಆದ್ದರಿಂದ ಇದನ್ನು ಹಝ್ರತ್ ಪೈಗಂಬರ್(ಸ) ಅವರಿಂದ ಎಂದಿಗೂ ಸಾಬೀತುಪಡಿಸಲಾಗುವುದಿಲ್ಲ, ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ. ಇದರ ಸಾರಾಂಶವೆಂದರೆ ಕ್ರಿಶ್ಚಿಯನ್ನರ ಪ್ರಕಾರ, ಅವರು ದೇವರೆಂದು ಕರೆಯುವ ವ್ಯಕ್ತಿಯ ಪರಿಸ್ಥಿತಿ ಹೇಗಿತ್ತು ಎಂದರೆ ಚಿಕ್ಕ ಚಿಕ್ಕ ವಿಷಯದಲ್ಲಿ ತಪ್ಪು ಹೇಳಿಕೆಗಳನ್ನು ನಿಡಿದ್ದಾನೆ.

ಆದಾಗ್ಯೂ, ಅದನ್ನು ವಿವರವಾಗಿ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಹಝ್ರತ್ ಪೈಗಂಬರ್(ಸ) ರವರು ಪದದ ಅರ್ಥವು ಅದರ ಬಾಹ್ಯ ರೂಪದಲ್ಲಿಯೂ ಸುಳ್ಳನ್ನು ಹೋಲದಂತೆ ಸಾಧ್ಯವಾದಷ್ಟು ದೂರವಿರಲು ಆದೇಶಿಸಿದ್ದಾರೆ. ಆದರೆ ನಿಮ್ಮ ಯೇಸು ಮಸೀಹ್ ಸಾಹೇಬರು ಸತ್ಯಕ್ಕೆ ಬದ್ಧರಾಗಿರಲು ಸಾಧ್ಯವಿಲ್ಲ. ದೇವರು ಎಂದು ಹೇಳಿಕೊಳ್ಳುವ ವ್ಯಕ್ತಿ ಸಿಂಹನಂತೆ ಜಗತ್ತಿಗೆ ಬರಬೇಕಾಗಿತ್ತೇ ಹೊರತು ತನ್ನ ಜೀವನದುದ್ದಕ್ಕೂ ತೌರಿಯಾವನ್ನು ತೆಗೆದುಕೊಂಡು ಸಾಯುವ ಬಗ್ಗೆ ಅಸಡ್ಡೆ ಹೊಂದಿ ತಮ್ಮ ಶತ್ರುಗಳ ವಿರುದ್ಧ ವ್ಯಕ್ತವಾಗಿ ಸರ್ವಶಕ್ತನಾದ ಅಲ್ಲಾಹನ ಮೇಲೆ ವಿಶ್ವಾಸವಿರುವ ಪರಿಪೂರ್ಣ ವ್ಯಕ್ತಿಗಳಲ್ಲಿ ಒಬ್ಬನಲ್ಲ ಎಂದು ಸಾಬೀತುಪಡಿಸಲು ಸುಳ್ಳನ್ನೆಲ್ಲಾ ಹೇಳುವುದರ ಮೂಲಕ ಅಲ್ಲ. (ನೀವು ದೇವರು ಎಂದು ಕರೆಯುವವನು, ಅವನು ತನ್ನ ಜೀವನದುದ್ದಕ್ಕೂ ತೌರಿಯಾದೊಂದಿಗೆ ಕೆಲಸ ಮಾಡುತ್ತಿದ್ದಾನೆ. ಅವನು ದೇವರು, ಆದರೆ ದೇವರ ಪ್ರವಾದಿಯೂ ಹೀಗೆ ಮಾಡುವುದಿಲ್ಲ) ಮತ್ತು ಅಲ್ಲಾಹನಲ್ಲಿ ಪರಿಪೂರ್ಣ ನಂಬಿಕೆ ಇಟ್ಟವರು ಯಾವುದೇ ಪರಿಸ್ಥಿತಿಯಲ್ಲೂ ಹೇಡಿತನವನ್ನು ತೋರಿಸುವುದಿಲ್ಲ. ಈ ವಿಷಯಗಳನ್ನು ನಾನು ನೆನಪಿಸಿಕೊಂಡರೆ ನನಗೆ ಅಳು ಬರುತ್ತದೆ, ಅಂತಹ ದುರ್ಬಲ ಹೃದಯವುಳ್ಳ ಯೇಸುವಿನ ಕಳಪೆ ಸ್ಥಿತಿಯನ್ನು ವಿರೋಧಿಸಿದರೆ ಮತ್ತು ಒಂದು ರೀತಿಯ ಸುಳ್ಳಾದ ತೌರಿಯಾದ ಬಗ್ಗೆ ಯಾರಾದರು ಆಕ್ಷೇಪಿಸಿದರೆ ನಾವು ಏನು ಉತ್ತರಿಸಬೇಕು? ಅದೇ ಸಂದರ್ಭದಲ್ಲಿ ನಾನು ಪ್ರವಾದಿಗಳ ಸರದಾರರಾದ ಹಝ್ರತ್ ಪೈಗಂಬರ್(ಸ) ಉಹುದ್ ಯುದ್ಧದಲ್ಲಿ ಒಬ್ಬಂಟಿಯಾದ ಸ್ಥಿತಿಯಲ್ಲೂ ತೆರೆದ ಖಡ್ಗಗಳ ಮುಂದೆ ಇದ್ದುಕೊಂಡು "ನಾನು ಮುಹಮ್ಮದ್, ನಾನು ಅಲ್ಲಾಹನ ಪ್ರವಾದಿ, ನಾನು ಅಬ್ದುಲ್ ಮುತ್ತಲಿಬನ ಪುತ್ರ" ಎಂದು ಹೇಳುತ್ತಿದ್ದರು. ಮತ್ತೊಂದೆಡೆ ನಿಮ್ಮ ಯೇಸುಕ್ರಿಸ್ತ ನಡುಗುತ್ತಾ ತಮ್ಮ ಶಿಷ್ಯರಿಗೆ ಸತ್ಯಕ್ಕೆ ವಿರುದ್ಧವಾಗಿ ಹೀಗೆ ಬೋಧನೆ ನೀಡುತ್ತಿದ್ದರು: ನಾನು ಏಸು ಮಸೀಹ ಎಂದು ಯಾರೊಡನೆಯೂ ಹೇಳಬೇಡಿರಿ. ಸತ್ಯದಲ್ಲಿ

ಹಾಗೆ ಹೇಳುವುದರಿಂದ ಯಾರೂ ಅವರನ್ನು ಕೊಲ್ಲಲು ಹೋಗುತ್ತಿರಲಿಲ್ಲ. ಎಂದು ಹೇಳಿದರೆ ನನಗೆ ಅಶ್ವರ್ಚರ್ಯವಾಗುತ್ತದೆ. ಅವರು ಹೇಳುತ್ತಾರೆ ನಾನು ಆಶ್ಚರ್ಯದ ನದಿಯಲ್ಲಿ ಮುಳುಗುತ್ತಿದ್ದೇನೆ. ಓ ದೇವರೇ, ಈ ವ್ಯಕ್ತಿಯನ್ನು ಪ್ರವಾದಿ ಎಂದೂ ಕರೆಯುತ್ತಾರೆ, ದೇವರ ಮಾರ್ಗದಲ್ಲಿ ಅವರ ಧೈರ್ಯವು ಹೀಗಿದೆ. (ನೂರುಲ್ ಖುರ್‌ಆನ್, ಸಂಖ್ಯೆ-2, ರೂಹಾನಿ ಖಝಾಈನ್, ಸಂಪುಟ-9, ಪುಟ-405-407) (ಉರ್ದು ದಾಎರಾ ಮುಆರಿಫ್, ಸಂಪುಟ-6, ಪುಟ-737, ಪದ "ತೌರಿಯಾ")

ಈ ಅಚ್ಚರಿಯನ್ನು ಹಝ್ರತ್ ಮಸೀಹ್ ಮವೌಊದ್ ಅಲೈಹಿಸ್ಸಲಾಮ್ ಅವರು ಹಝ್ರತ್ ಈಸಾ(ಅ) ಅವರ ಆರೋಪದ ಉತ್ತರವಾಗಿ ವ್ಯಕ್ತಪಡಿಸಿದ್ದಾರೆ. ಅವರು ಪ್ರವಾದಿಯಲ್ಲ ಎಂದು ನೀವು(ಅ) ಭಾವಿಸಿದ್ದಲ್ಲ, ಅಥವಾ ಯೇಸು ಮಸೀಹರು ಪ್ರವಾದಿಯಲ್ಲ ಎಂದು ನೀವು ಅರ್ಥಮಾಡಿಕೊಂಡಿಲ್ಲ, ಆದರೆ ನೀವು ಪ್ರಸ್ತುತಪಡಿಸುವ ಪ್ರವಾದಿಯನ್ನು ಅವರು ದೇವರ ಪುತ್ರ ಎಂದು ಕರೆಯುತ್ತಾರೆ ಎಂದು ಅವರು(ಅ) ಹೇಳುತ್ತಾರೆ, ನಿಮ್ಮ ಪುಸ್ತಕಗಳ ಪ್ರಕಾರ ಅವರ ಪರಿಸ್ಥಿತಿಯೇ ಹೀಗಿರುವಾಗ ನೀವು ಹಝ್ರತ್ ಪೈಗಂಬರ್(ಸ) ಅವರು ಸುಳ್ಳು ಹೇಳಲು ಅಥವಾ ಹೇಡಿತನವನ್ನು ತೋರಿಸಲು ಅನುಮತಿ ನೀಡಿದ್ದಾರೆ ಎಂದು ಆಕ್ಷೇಪಿಸುತ್ತೀರಿ.

ಇಬ್ನ್ ಇಸ್‌ಹಾಕ್ ಬರೆಯುತ್ತಾರೆ ಹಝ್ರತ್ ಪೈಗಂಬರ್(ಸ) ಅವರನ್ನು ಮಕ್ಕಾದ ಅವಿಶ್ವಾಸಿಗಳು ಸುತ್ತುವರೆದಿರುವಾಗ ಅವರು(ಸ) ಹೇಳಿದರು, **ಮನ್ ರಜುಲುನ್ ಯಶ್ರೀ ಲನಾ ನಫ್ಸಹೂ?** ನಮಗಾಗಿ ಯಾರು ತನ್ನನ್ನು ಮಾರಿಕೊಳ್ಳುವ ವ್ಯಕ್ತಿ ಇದ್ದಾರೆ. ಆಗ ಝಿಯಾದ್ ಬಿನ್ ಸಕ್ಕಾನ್(ರ) ಐದು ಅನ್ಸಾರಿ ಸಹಾಬಿಯರೊಂದಿಗೆ ನಿಂತರು ಮತ್ತು ಕೆಲವರು ಉಮಾರಾ ಬಿನ್ ಯಾಝೀದ್ ಬಿನ್ ಸಕ್ಕಾನ್ ಎಂದು ಹೇಳುತ್ತಾರೆ.

ಹೀಗೆ ಅವರು ಹಝ್ರತ್ ಪೈಗಂಬರ್(ಸ) ಅವರ ಮುಂದೆ ಶೌರ್ಯವನ್ನು ತೋರಿಸುತ್ತಲೇ ಒಂದೊಂದಾಗಿ ಹುತಾತ್ಮರಾಗುತ್ತಲೇ ಇದ್ದರು, ಅವರಲ್ಲಿ ಕೊನೆಯವರು ಝಿಯಾದ್ ಅಥವಾ ಉಮಾರಾ ಆಗುವವರೆಗೆ, ಅವರು ಅನೇಕ ಗಾಯಗಳನ್ನು ಪಡೆಯುವವರೆಗೂ ಯುದ್ಧವನ್ನು ಮುಂದುವರೆಸಿದರು. ನಂತರ ಮುಸಲ್ಮಾನರ ಗುಂಪು ಹಿಂತಿರುಗಿ ಮುಶ್ರಿಕೀನರನ್ನು ಹಝ್ರತ್ ಪೈಗಂಬರ್(ಸ) ಅವರಿಂದ ದೂರ ತಳ್ಳಿತು. ಆದ್ದರಿಂದ ಅದರ ನಂತರ, ಹಝ್ರತ್ ಪೈಗಂಬರ್(ಸ) ಹೇಳಿದರು ಝಿಯಾದ್ ಬಿನ್ ಸಕನ್ ಅವರನ್ನು ನನ್ನ ಬಳಿ ತನ್ನಿ. ಅವರನ್ನು ಕರೆತರುವಾಗ ಅವರು ಕೊನೆಯುಸಿರೆಳೆದಿದ್ದರು. ಹಝ್ರತ್ ಪೈಗಂಬರ್(ಸ)ರವು ಹೇಳಿದರು, ಅವರನ್ನು ನನ್ನ ಇನ್ನೂ ಹತ್ತಿರಕ್ಕೆ ತನ್ನಿ. ಅದಕ್ಕೆ ಹಝ್ರತ್ ಪೈಗಂಬರ್(ಸ)ರವರ ಸಹಾಬರವರು ಅವರನ್ನು ಇನ್ನೂ ಹತ್ತಿರ ತಂದಾಗ ಹಝ್ರತ್ ಪೈಗಂಬರ್(ಸ)ರವರು ತಮ್ಮ ಅನುಗ್ರಹದಾಯಕ ಪಾದವನ್ನು ಅವರ ಕಡೆಗೆ ಇರಿಸಿದಾಗ ಅವರು ಹಝ್ರತ್ ಪೈಗಂಬರ್(ಸ)ರವರ ಪವಿತ್ರ ಪಾದದ ಮೇಲೆ ತಮ್ಮ ಮುಖವನ್ನು ಇರಿಸಿದರು ಮತ್ತು ಹಝ್ರತ್ ಝ್ಯಿಯಾದ್ ಅವರ ಮುಖವು ಹುಝೂರ್(ಸ) ಅವರ ಅನುಗ್ರಹದಾಯಕ ಪಾದಗಳ ಮೇಲೆ ಇರುವ ಸ್ಥಿತಿಯಲ್ಲಿ ನಿಧನರಾದರು, ಅವರ ದೇಹದ ಮೇಲೆ ಹದಿನಾಲ್ಕು ಗಾಯಗಳು ಇದ್ದವು.

(ಸಬ್ಲುಲ್ ಕುದಾ ವರ್‍ರಶ್ಶಾದ್, ಸಂಪುಟ-4, ಪುಟ-203, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಅವರು ಹೇಳುತ್ತಾರೆ: "ಒಂದು ಸಂದರ್ಭದಲ್ಲಿ ಖುರೈಷರ ದಾಳಿಯ ಅಸಾಮಾನ್ಯ ಅಲೆ ಎದ್ದಾಗ, ಹಝ್ರತ್ ಪೈಗಂಬರ್(ಸ) ಅವರು ಹೇಳಿದರು, ಈ ಸಮಯದಲ್ಲಿ ದೈವ ಮಾರ್ಗದಲ್ಲಿ ತನ್ನ ಪ್ರಾಣವನ್ನು ತ್ಯಾಗ ಮಾಡುವವರು ಯಾರು? ಈ ಧ್ವನಿಯು ಅನ್ಸಾರಿಯ ಕಿವಿಯನ್ನು ತಲುಪಿದಾಗ, ಅವರು ಮತ್ತು ಆರು ಅನ್ಸಾರಿ ಸಹಾಬರವರು ಉತ್ಸಾಹಭರಿತರಾಗಿ ಮುಂದೆ ಧಾವಿಸಿದರು. ಮತ್ತು ಅವರಲ್ಲಿ ಒಬ್ಬೊಬ್ಬರಾಗಿ ಹಝ್ರತ್ ಪೈಗಂಬರ್(ಸ) ಅವರ ಸುತ್ತ ಹೋರಾಡುತ್ತಾ ಮೃತರಾದರು. ಈ ಪಕ್ಷದ ನಾಯಕ ಝಿಯಾದ್ ಬಿನ್ ಸಕನ್ ಆಗಿದ್ದರು. ಈ ದಾಳಿಯ ನಂತರ, ಹಝ್ರತ್ ಪೈಗಂಬರ್(ಸ) ಆದೇಶಿಸಿದರು." ಇದು ಅವಿಶ್ವಾಸಿಗಳ ದೊಡ್ಡ ದಾಳಿಯಾಗಿತ್ತು, ಅದು ಸ್ವಲ್ಪ ಕಡಿಮೆಯಾಯಿತು ಮತ್ತು ಇತರ ಸಹಾಬರವರು ಬಂದು ಸ್ಥಳವನ್ನು ತೆರವುಗೊಳಿಸಿದಾಗ, ಹಝ್ರತ್ ಪೈಗಂಬರ್(ಸ) ಝಿಯಾದ್ ಅವರನ್ನು ಎತ್ತಿಕೊಂಡು ನನ್ನ ಬಳಿಗೆ ತನ್ನಿ ಎಂದು ಆದೇಶಿಸಿದರು. ಅವರು ಗಾಯಗೊಂಡಿದ್ದರು. "ಜನರು ಅವರನ್ನು ಎತ್ತಿಕೊಂಡು ಹಝ್ರತ್ ಪೈಗಂಬರ್(ಸ) ಅವರ ಮುಂದೆ ಇಟ್ಟರು. ಆ ಸಮಯದಲ್ಲಿ ಝಿಯಾದ್‌ನಲ್ಲಿ ಸ್ವಲ್ಪ ಜೀವನವಿತ್ತು, ಆದರೆ ಅವರು ಮರಣಾಸ್ಥಿತಿಯಲ್ಲಿದ್ದರು. ಈ ಸ್ಥಿತಿಯಲ್ಲಿ, ಅವರು ಬಹಳ ಪ್ರಯಾಸದಿಂದ ತಮ್ಮ ತಲೆ ಎತ್ತಿ ತಮ್ಮ ಮುಖವನ್ನು ಹಝ್ರತ್ ಪೈಗಂಬರ್(ಸ) ಅವರ ಪಾದಗಳ ಮೇಲೆ ಇರಿಸಿದರು ಮತ್ತು ಅದೇ ಸ್ಥಿತಿಯಲ್ಲಿ ನಿಧನರಾದರು." (ಸೀರತ್ ಖಾತಮನ್ನಬೀಈನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-496)

ಹಝ್ರತ್ ಮುಸ್‌ಅಬ್ ಬಿನ್ ಉಮೈರ್(ರ) ಅವರ ಹುತಾತ್ಮತೆಯ ಬಗ್ಗೆಯೂ ಬರೆಯಲಾಗಿದೆ, ಹಝ್ರತ್ ಮುಸ್‌ಅಬ್ ಬಿನ್ ಉಮೈರ್ ಅವರು ಹಝ್ರತ್ ಪೈಗಂಬರ್(ಸ) ಅವರ ಮುಂದೆ ಯುದ್ಧಮಾಡುತ್ತಿದ್ದರು ಮತ್ತು ಅವರು ಯುದ್ಧ ಮಾಡುವಾಗ ಹುತಾತ್ಮರಾದರು. ಅವರು(ರ) ಇಬ್ನ್ ಕುಮಯ್ಯನಿಂದ ಹುತಾತ್ಮರಾದರು. (ಸೀರತ್ ಇಬ್ನ್ ಹಿಶಾಮ್, ಪುಟ-529, ದಾರುಲ್ ಕುತುಬ್ ಇಲ್‌ಮಿಯ ಬೈರುತ್ 2001)

ಉಹುದ್ ಯುದ್ಧದ ಧ್ವಜವಾಹಕರಾದ ಹಝ್ರತ್ ಮುಸ್‌ಅಬ್ ಬಿನ್ ಉಮೈರ್(ರ) ಧ್ವಜದ ಸಂರಕ್ಷಣೆಯ ಹಕ್ಕನ್ನು ಚೆನ್ನಾಗಿ ನೆರವೇರಿಸಿದರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಹಝ್ರತ್ ಮುಸ್‌ಅಬ್(ರ) ಧ್ವಜ ಹಿಡಿದಿದ್ದ ಕೈಯ ಮೇಲೆ ಇಬ್ನು ಖಮಿಯ ಹಲ್ಲೆ ಮಾಡಿಕೊಂಡು ಅವರ ಕೈಯನ್ನು ತುಂಡರಿಸಿದನು. ಹಝ್ರತ್ ಮುಸ್‌ಅಬ್(ರ) ಧ್ವಜವನ್ನು ತನ್ನ ಮತ್ತೊಂದು ಕೈಯಲ್ಲಿ ಹಿಡಿದುಕೊಂಡರು. ಇಬ್ನು ಕಮಿಯ ಆ ಕೈಯನ್ನು ಕೂಡ ಕತ್ತರಿಸಿದನು. ಆಗ ಹಝ್ರತ್ ಮುಸ್‌ಅಬ್(ರ) ತನ್ನ ಎರಡೂ ಮೊಣಕೈಗಳಿಂದ ಧ್ವಜವನ್ನು ತನ್ನ ಎದೆಯೊಂದಿಗೆ ಸೇರಿಸಿ ಹಿಡಿದರು. ಇಬ್ನು ಕಮಿಯ ಮೂರನೇ ಬಾರಿ ಹಲ್ಲೆ ನಡೆಸಿ ಈಟಿಯನ್ನು ಅವರ ಎದೆಗೆ ತಿವಿದನು. ಈಟಿ ತುಂಡಾಯಿತು ಮತ್ತು ಹಝ್ರತ್ ಮುಸ್‌ಅಬ್(ರ) ಕೆಳಗೆ ಬಿದ್ದರು. ನಂತರ ಬನು ಅಬ್ದ್ ಅಲ್-ದರ್‌ನ ಇಬ್ಬರು ಪುರುಷರು, ಸುಅಬಿತ್ ಬಿನ್ ಸಾದ್ ಬಿನ್ ಹರ್ಮಲಾ(ರ) ಮತ್ತು ಅಬು ರೂಮ್ ಬಿನ್ ಉಮೈರ್(ರ) ಮುನ್ನಡೆದರು ಮತ್ತು ಧ್ವಜವನ್ನು ಅಬು ರೂಮ್ ಬಿನ್ ಉಮೈರ್(ರ) ಹಿಡಿದುಕೊಂಡರು ಮತ್ತು ಮುಸ್ಲಿಮರು ಹಿಂದಿರುಗಿ ಮದೀನಕ್ಕೆ ಪ್ರವೇಶಿಸಿದ ತನಕವೂ ಆ ಧ್ವಜ ಅವರ ಕೈಯಲ್ಲಿಯೇ ಉಳಿಯಿತು. (ಅತ್ತಬಖಾತುಲ್ ಕುಬ್ರ, ಭಾಗ-3, ಪುಟ-89, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಇದನ್ನು ಇತಿಹಾಸದ ಪುಸ್ತಕದಲ್ಲಿ ಬರೆಯಲಾಗಿದೆ, ಆದರೆ ಕೆಲವು ಇತರ ವರದಿಗಳ ಪ್ರಕಾರ, ಅದರ ನಂತರ, ಹಝ್ರತ್ ಪೈಗಂಬರ್(ಸ)ರವರು ಹಝ್ರತ್ ಅಲಿ(ರ) ಅವರಿಗೆ ಧ್ವಜವನ್ನು ನೀಡಿದರು. ಈ ಘಟನೆಯನ್ನು ಉಲ್ಲೇಖಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಅವರು ಈ ಕೆಳಗಿನಂತೆ ಬರೆದಿದ್ದಾರೆ: "ಖುರೈಷ್ ಸೈನ್ಯವು ಬಹುತೇಕ ಸುತ್ತಲೂ ಸುತ್ತುವರೆದಿತ್ತು ಮತ್ತು ಅವರ ಸತತ ದಾಳಿಗಳೊಂದಿಗೆ ಪ್ರತಿನಿತ್ಯ ದಮಿಸುತ್ತಲೇ ಇದ್ದರು. ಸ್ವಲ್ಪ ಸಮಯದ ನಂತರ ಮುಸ್ಲಿಮರು ಇದರಿಂದ ಚೇತರಿಸಿಕೊಂಡಿರಬಹುದು, ಆದರೆ ಖುರೈಷನ ವೀರ ಸೈನಿಕ ಅಬ್ದುಲ್ಲಾ ಬಿನ್ ಕಮಿಯಾ ಎಂಬವನು ಮುಸ್ಲಿಮರ ನಾಯಕ ಮುಸ್‌ಅಬ್ ಬಿನ್ ಉಮೈರ್(ರ) ಅವರ ಮೇಲೆ ದಾಳಿ ಮಾಡಿ ಅವರ ಬಲಗೈಯನ್ನು ಕತ್ತಿಯಿಂದ ಕತ್ತರಿಸಿದನು. ಮುಸ್‌ಅಬ್ ತಕ್ಷಣವೇ ತನ್ನ ಇನ್ನೊಂದು ಕೈಯಲ್ಲಿ ಧ್ವಜವನ್ನು ಹಿಡಿದು ಇಬ್ನ್ ಕಮಿಯ್ಯನನ್ನು ಎದುರಿಸಲು ಮುಂದಾದರು, ಆದರೆ ಅವನು ಎರಡನೇ ಹಲ್ಲೆಯಿಂದ ಅವರ ಇನ್ನೊಂದು ಕೈಯನ್ನು ಕತ್ತರಿಸಿದನು. ಇದಾದ ಮೇಲೆ ಮುಸ್‌ಅಬ್ ತನ್ನ ಎರಡು ಕತ್ತರಿಸಿದ ಕೈಗಳನ್ನು ಜೋಡಿಸಿ ಬೀಳುತ್ತಿರುವ ಇಸ್ಲಾಮಿಕ್ ಧ್ವಜವನ್ನು ಹಿಡಿಯಲು ಪ್ರಯತ್ನಿಸಿದರು ಮತ್ತು ಅದನ್ನು ತಮ್ಮ ಎದೆಗೆ ಹಿಡಿದನು. ಅದರ ಮೇಲೆ ಇಬ್ನ್ ಕಮಿಯಾ ಮೂರನೇ ಬಾರಿಗೆ ಅವರನ್ನು ಹೊಡೆದನು ಮತ್ತು ಈ ಬಾರಿ ಮುಸ್‌ಅಬ್ ಹುತಾತ್ಮರಾಗಿ ಕೆಳಗೆ ಬಿದ್ದರು. ಇನ್ನೊಬ್ಬ ಮುಸ್ಲಿಮನು ತಕ್ಷಣವೇ ಮುಂದೆ ಬಂದು ಧ್ವಜವನ್ನು ಹಿಡಿದನು, ಆದರೆ ಮುಸ್‌ಅಬ್(ರ)ರ ದೇಹ ವಿನ್ಯಾಸ ಹಝ್ರತ್ ಪೈಗಂಬರ್(ಸ)ರೊಂದಿಗೆ ಹೋಲಿಕೆ ಹೊಂದಿದ್ದ ಕಾರಣದಿಂದ ತಾನು ಹಝ್ರತ್ ಪೈಗಂಬರ್(ಸ)ರನ್ನು ವಧಿಸಿರುವೆನು ಎಂದು ಇಬ್ನು ಕಮಿಯ ಭಾವಿಸಿದನು ಅಥವಾ ತುಂಟಾಟಿಕೆ ಮತ್ತು ಮೋಸ ಮಾಡುವ ಉದ್ದೇಶದಿಂದ ಆಗಿರಲೂ ಬಹುದು. ಹೇಗಿದ್ದರೂ ನಾನು ಮುಹಮ್ಮದ್‌ರನ್ನು (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ವಧಿಸಿದ್ದೇನೆ ಎಂದು ಆತನು ಬೊಬ್ಬೆ ಹಾಕಿದನು. ಈ ಸುದ್ದಿಯಿಂದ ಮುಸ್ಲಿಮರಿಗೆ ಇದ್ದ ಧೈರ್ಯ ಕೂಡ ಕುಗ್ಗಿ ಹೋಯಿತು ಮತ್ತು ಅವರ ಕೂಟ ಪೂರ್ಣವಾಗಿಯೂ ಚದುರಿಹೋಯಿತು. (ಸೀರತ್ ಖಾತಮನ್ನಬೀಈನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ-493)

ಪ್ರಸ್ತಾಪಿಸಲಾದಂತೆ ಉಹುದ್ ಮೈದಾನದಲ್ಲಿ ಕೆಲವು ಕ್ಷಣಗಳ ಅಸಡ್ಡೆಯು ಇಸ್ಲಾಮೀ ಸೇನೆಯ ವಿಜಯವನ್ನು ತಾತ್ಕಾಲಿಕ ಪರಾಜಯವಾಗಿ ಬದಲಾಯಿಸಿತು. ಆದರೂ ಹಝ್ರತ್ ಪೈಗಂಬರ್(ಸ)ರನ್ನು ಲೋಕದ ಯುದ್ಧ ಚರಿತ್ರೆಯಲ್ಲಿ ಅತ್ಯುತ್ತಮ ಸೇನಾಧಿಪತಿ ಮತ್ತು ವಿವೇಕಯುತ ಹಾಗೂ ಕ್ಷಿಪ್ರಗತಿಯಲ್ಲಿ ತೀರ್ಮಾನ ಮಾಡುವ ವ್ಯಕ್ತಿಯಾಗಿ ಒಪ್ಪಲಾಗುತ್ತದೆ.

ಯುದ್ಧದ ಬದಲಾಗುತ್ತಿರುವ ಸ್ಥಿತಿಯ ಕುರಿತು ಹಝ್ರತ್ ಪೈಗಂಬರ್(ಸ) ಆಳವಾದ ದೃಷ್ಟಿ ಇರಿಸಿಕೊಂಡಿದ್ದರು ಹಾಗೂ ನಾಲ್ಕು ಪಟ್ಟು ಹಿರಿದಾದ ಶತ್ರು ಸೇನೆಯ ಮುಂದೆ ತನ್ನ ಚದುರಿದ ಮತ್ತು ದುರ್ಬಲ ಸೈನಿಕರು ಪೂರ್ಣವಾಗಿ ಜಜ್ಜಿ ಹೋಗದ ರೀತಿಯಲ್ಲಿ ಸಂರಕ್ಷಿಸಿದರು. ಹೀಗೆ ಇಸ್ಲಾಮಿನ ಸೇನೆಯ ವಿರುದ್ಧ ಶತ್ರುಗಳು ಹೊಂದಿದ ದುರುದ್ದೇಶ ಈಡೇರಲಿಲ್ಲ. ಹಝ್ರತ್ ಮುಸ್‌ಅಬ್ ಬಿನ್ ಉಮೈರ್(ರ)ರವರ ಶಹಾದತ್ ನಂತರ ಹಝ್ರತ್ ಪೈಗಂಬರ್(ಸ) ಇಸ್ಲಾಮಿನ ಸೇನೆಯ ಧ್ವಜವನ್ನು ಹಝ್ರತ್ ಅಲಿ(ರ)ರಿಗೆ ನೀಡಿದರು ಮತ್ತು ತನ್ನ ಸುತ್ತ ಒಟ್ಟುಗೂಡಿದ್ದ ಕೆಲವೇ ವ್ಯಕ್ತಿಗಳನ್ನು ಒಳಗೊಂಡಿದ್ದ ಇಸ್ಲಾಮಿನ ಸಣ್ಣ ಸಂಘವನ್ನು ಜೊತೆಗೆ ಸೇರಿಸಿ ಎಂತಹ ಯುದ್ಧ ನಡೆಸಿದರು ಎಂದರೆ, ಅವರು ಮುಶ್ರಿಕರ ಹಿಡಿತದಿಂದ ಪಾರಾಗುವ ಮಾರ್ಗವನ್ನು ಮಾಡಿಕೊಂಡರು ಮತ್ತು ಹಝ್ರತ್ ಪೈಗಂಬರ್(ಸ)ರ ಶಹಾದತಿನ ವದಂತಿಯನ್ನು ಕೇಳಿ ಧೈರ್ಯಗುಂದಿದ್ದ ಯುದ್ಧ ಮೈದಾನದ ಚದುರಿದ ಇಸ್ಲಾಮಿನ ಸೇನೆಯ ಕಡೆಗೆ ಧಾವಿಸಿದರು. ಮಕ್ಕಾದ ಮುಶ್ರಿಕರು ಕೂಡ ಇಸ್ಲಾಮಿನ ಸೇನೆಯ ಮರಳುವಿಕೆಯನ್ನು ಪರಾಜಿತಗೊಳಿಸಲು ಘೋರವಾದ ದಾಳಿಯನ್ನು ಆರಂಭಿಸಿದ್ದರು. ಆದರೆ ಹಿಂದೆ ಸರಿಯುವಿಕೆಯು ಹಝ್ರತ್ ಪೈಗಂಬರ್(ಸ)ರ ಯುದ್ಧತಂತ್ರವು ಎಷ್ಟು ಯಶಸ್ವಿಯಾಗಿತ್ತು ಎಂದರೆ ಒಂದು ಮುಷ್ಟಿಯಷ್ಟು ಇದ್ದ ಸೈನಿಕರು ಅರ್ಧ ವೃತ್ತದ ಆಕಾರದಲ್ಲಿ ಹೆಗಲಿಗೆ ಹೆಗಲು ಸೇರಿಸಿ ಶತ್ರುಗಳ ದಾಳಿಯನ್ನು ವಿಫಲಗೊಳಿಸುತ್ತಾ ಯಾರಿಗೂ ಅರಿಯದ ರೀತಿಯಲ್ಲಿ ಕಣಿವೆಯ ಕಡೆಗೆ ಸರಿಯುತ್ತಿದ್ದರು. ಶತ್ರುಗಳು ಅವರನ್ನು ಸುತ್ತುವರೆಯಲು ಪೂರ್ಣವಾದ ಶಕ್ತಿಯನ್ನು ಉಪಯೋಗಿಸಿದರು. ಆದರೆ ಹಝ್ರತ್ ಪೈಗಂಬರ್(ಸ) ಆಕ್ರಮಣಕಾರಿಗಳ ಸಂಘವನ್ನು ಸೀಳಿಕೊಂಡು ಪಾರಾಗುವ ಮಾರ್ಗವನ್ನು ಮಾಡಿಕೊಂಡರು.
(ಗ್ಝುವಾತ್ ವ ಸರಾಯಾ, ಪುಟ–199–201, ಫರೀದ್ ಪ್ರಿಂಟಿಂಗ್ ಪ್ರೆಸ್ ಸಾಹೀವಾಲ್)

ಉಹುದ್ ಯುದ್ಧದ ಸಂದರ್ಭದಲ್ಲಿ ನಿದ್ರೆ ಮತ್ತು ತೂಕಾಡಿಕೆ ಆವರಿಸಿದ್ದ ಪ್ರಸ್ತಾಪವೂ ಇದೆ. ಯುದ್ಧದಲ್ಲಿ ಹೋರಾಡುತ್ತಿದ್ದ ಸಹಾಬರವರು ನಿದ್ರೆಗೆ ಜಾರಿದರು. ಸರ್ವಶಕ್ತನಾದ ಅಲ್ಲಾಹನು ನಿದ್ದೆ ಮಾಡುವ ಪರಿಸ್ಥಿತಿಯನ್ನು ಸೃಷ್ಟಿಸಿದನು. ಅದರ ವಿವರಣೆ ಈ ಕೆಳಗಿನಂತಿದೆ.

ಹಝ್ರತ್ ಝುಬೈರ್ ಬಿನ್ ಅವಾಮ್(ರ) ಹೇಳುತ್ತಾರೆ, ಉಹುದ್ ಯುದ್ಧದ ಸ್ಥಿತಿ ಬದಲಾದಾಗ ನಾನು ಹಝ್ರತ್ ಪೈಗಂಬರ್(ಸ) ಅವರನ್ನು ಹತ್ತಿರದಲ್ಲಿ ಕಂಡುಕೊಂಡೆ.

ನಾವೆಲ್ಲರೂ ದಿಗ್ಭ್ರಮೆಗೊಂಡಾಗ ಮತ್ತು ಭಯಗೊಂಡಾಗ ಮತ್ತು ನಮ್ಮ ಮೇಲೆ ನಿದ್ದೆ ಕಳುಹಿಸಲ್ಪಟ್ಟಿತು. ಎಂಥಹ ಸ್ಥಿತಿಯೆಂದರೆ ನಿದ್ದೆಯ ಅವಸ್ಥೆ ನಮ್ಮನ್ನು ಆವರಿಸಿಕೊಂಡಂತಿತ್ತು. ಆದ್ದರಿಂದ, ಎಲ್ಲರು ಅರನಿದೆ ಮತ್ತು ತೂಕಡಿಕೆಯ ಕಾರಣದಿಂದ ತಮ್ಮ ತಲೆ ಕೆಳಗೆ ಇರಿಸಿದ್ದರು.

ಅವರು ಹೇಳುತ್ತಾರೆ ಅಲ್ಲಾಹನ ಆಣೆ! ಮುಅತ್ತಿಬ್ ಬಿನ್ ಖುಶೈರ್ ಅವರ ಧ್ವನಿಯನ್ನು ಕನಸಿನಲ್ಲಿ ಕೇಳುತ್ತಿರುವಂತೆ ನನಗೆ ಭಾಸವಾಯಿತು. ನಿರ್ಧರಿಸುವ ಶಕ್ತಿ ನಮಗಿದ್ದರೆ ನಾವು ಇಲ್ಲಿ ಈ ರೀತಿ ಕೊಲ್ಲುತ್ತಿರಲಿಲ್ಲ ಎಂದು ಹೇಳುತ್ತಿದ್ದನು. ಮುಅತ್ತಿಬ್ ಬಿನ್ ಖುಶೈರ್ ಅನ್ಸಾರಿ ಸಹಾಬಿ ಆಗಿದ್ದರು ಮತ್ತು ಬೈಅತ್ ಉಕ್ಬಾ, ಬದ್ರ್ ಮತ್ತು ಉಹುದ್ ಯುದ್ಧದಲ್ಲಿ ಭಾಗವಹಿಸಿದರು. ಇದನ್ನು ಸ್ವಪ್ನ ಸ್ಥಿತಿಯಲ್ಲಿ ಕಂಡಾಗ ಅವರ ಈ ವಾಕ್ಯವು ನನಗೆ ನೆನಪಾಯಿತು. ಈ ಸಂದರ್ಭಕ್ಕೆ ಸಂಬಂಧಿಸಿದಂತೆ ಸರ್ವಶಕ್ತನಾದ ಅಲ್ಲಾಹನು ಈ ವಚನವನ್ನು ಅವತರಿಸಿದನು: **ಸುಮ್ಮ ಅನ್‌ಝಲ ಅಲೈಕುಮ್ಮಿವ್ ಬಅ್‌ದಿಲ್‌ಗ‌ಮ್ಮಿ ಅಮನತನ್ನುಆಸೈಂಯುಗ್‌ಶಾ ತಾಇಫತಮ್ಮಿನ್‌ಕುಮ್, ವ ತಾಇಫತುನ್ ಖದ್ ಅಹಮ್ಮತ್‌ಹುಮ್ ಅನ್‌ಫುಸುಹುಮ್ ಯಝುನ್ನೂನ ಬಿಲ್ಲಾಹಿ ಗೈರಿಲ್ ಹಖ್ಖಿ ಝನ್ನಲ್ ಕಾಹಿಲಿಯ್ಯತಿ, ಯಖೂಲೂನ ಹಲ್ ಲನಾ ಮಿನಲ್ ಅಮ್‌ರಿ ಮಿನ್ ಶೈಇನ್, ಖುಲ್ ಇನ್ನಲ್‌ಅಮ್‌ರ ಕುಲ್ಲಹೂ ಲಿಲ್ಲಾಹಿ** (ಆಲಿಇಮ್ರಾನ್: 155) ಅಂದರೆ: ಆ ಮೇಲೆ, ದುಃಖದ ಬಳಿಕ ಅವನು ನಿಮಗೆ ಮನಃಶಾಂತಿಯನ್ನು ನೀಡಿದನು. ಎಂದರೆ ನಿಮ್ಮ ಪೈಕಿ ಒಂದು ಪಂಗಡವನ್ನು ಒಂದು ರೀತಿಯ ಮಂಪರು ಆಶ್ಲೇಷಿಸಿತು. (ಆ ಸಂದರ್ಭದಲ್ಲಿ) ಇನ್ನೊಂದು ಪಂಗಡದವರು ತಮಗೆ ಸಂಬಂಧಿಸಿದ ವಿಚಾರದಲ್ಲೇ ವ್ಯಾಕುಲರಾಗಿದ್ದರು. ಅವರು ಅಲ್ಲಾಹನ ಕುರಿತು ಅಜ್ಞಾನ ಕಾಲದ ಭಾವನೆಯಂತಹ ಅಸತ್ಯ ಭಾವನೆಗಳನ್ನು ಹೊಂದಿದ್ದರು. 'ಈ ಕಾರ್ಯ ನಿರ್ವಹಣೆಯಲ್ಲಿ ನಮಗೇನಾದರೂ ಪಾಲಿದೆಯೇ?'ಎಂದು ಅವರು ಕೇಳುತ್ತಾರೆ. ಹೇಳು: 'ನಿಶ್ಚಯವಾಗಿಯೂ ಎಲ್ಲ ಅಧಿಕಾರ ಅಲ್ಲಾಹನಿಗಿದೆ.' ಅವರು (ಕಪಟ ವಿಶ್ವಾಸಿಗಳು) ಕೆಲವು ವಿಚಾರಗಳನ್ನು ನಿನಗೆ ಬಹಿರಂಗಪಡಿಸದೆ ತಮ್ಮ ಮನಸ್ಸಿನಲ್ಲಿ ಬಚ್ಚಿಡುತ್ತಾರೆ. 'ಆಡಳಿತೆಯಲ್ಲಿ ನಮಗೆ ಸಹ ಪಾಲಿರುತ್ತಿದ್ದರೆ ನಾವಿಲ್ಲಿ ಕೊಲ್ಲಲ್ಪಡುತ್ತಿರಲಿಲ್ಲ' ಎಂದು ಅವರು ಹೇಳುತ್ತಾರೆ. ಹೇಳು: 'ನೀವು ನಿಮ್ಮ ಮನೆಯಲ್ಲೇ ಇರುತ್ತಿದ್ದರೆ ಕೂಡ ಯುದ್ಧಕ್ಕೆ ಹೋಗಲು ಆಜ್ಞಾಪಿಸಲ್ಪಟ್ಟವರು ತಮ್ಮ ಮೃತ್ಯು ಸ್ಥಳಕ್ಕೆ ಹೊರಟುಹೋಗುತ್ತಿದ್ದರು. ಇದು ಅಲ್ಲಾಹನು (ತನ್ನ ವಿಧಿಯನ್ನು ಜಾರಿಗೊಳಿಸಲಿಕ್ಕೂ) ನಿಮ್ಮ ಮನಸ್ಸಿನಲ್ಲಿರುವುದನ್ನು ಪರೀಕ್ಷಿಸಲಿಕ್ಕೂ ನಿಮ್ಮ ಹೃದಯಗಳಲ್ಲಿರುವ (ಮಲೀನತೆಯನ್ನು ಶುಚೀಕರಿಸಲಿಕ್ಕೂ ಆಗಿದೆ. ಮನಸ್ಸಿನಲ್ಲಿರುವ ವಿಚಾರಗಳನ್ನೆಲ್ಲ ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ.

ಹಝ್ರತ್ ಕಅಬ್ ಬಿನ್ ಅಮ್ರ್ ಅನ್ಸಾರಿ(ರ) ವರದಿ ಮಾಡುತ್ತಾರೆ: ಉಹದ್ ಯುದ್ಧದ ದಿನದಂದು ನಾನು ನನ್ನ ಸಮುದಾಯದ ಹದಿನಾಲ್ಕು ಜನರೊಂದಿಗೆ ಹಝ್ರತ್ ಪೈಗಂಬರ್(ಸ) ಅವರ ಜೊತೆಯಲ್ಲಿದ್ದೆ ಆಗ ನಮ್ಮ ಮೇಲೆ ನಿದ್ರೆ ಆವರಿಸಿತ್ತು ಅದು ಶಾಂತಿಯುತ ನಿದ್ರೆಯಾಗಿತ್ತು ಅಂದರೆ ಇದು ಬಹಳ ಶಾಂತಿಯುತವಾದ ತೂಕಡಿಕೆಯಾಗಿತ್ತು. ಯುದ್ಧದ ಪರಿಸ್ಥಿತಿ ಇತ್ತು ಆದರೆ ಆ ತೂಕಡಿಕೆಯು ನಮ್ಮನ್ನು ಬಹಳ ನೆಮ್ಮದಿ ನೀಡಿತು. ಎದೆಯಿಂದ ಘಂಟಾನಾದ ಗೊರಕೆಯ ಸದ್ದು ಬರದವರು ಯಾರೂ ಇರಲಿಲ್ಲ. ಅವರು ಹೇಳುತ್ತಾರೆ ಬಿಷರ್ ಬಿನ್ ಬರಾ ಬಿನ್ ಮಾರೂರ್(ರ) ಎಂಬಾತನ ಕೈಯಿಂದ ಖಡ್ಗ ಬಿದ್ದಿರುವುದನ್ನು ನಾನು ನೋಡಿದೆ ಮತ್ತು ಅವಿಶ್ವಾಸಿಗಳು ನಮ್ಮ ಮೇಲೆ ದಾಳಿ ಮಾಡಿದರೂ ಖಡ್ಗ ಬಿದ್ದಿದೆ ಎಂದು ಅವರಿಗೆ ತಿಳಿದಿರಲಿಲ್ಲ. (ಅಸ್ಸೀರ ತ್ತುಲ್ ಹಲಬೀಯ, ಸಂಪುಟ–2, ಪುಟ–310, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಅಸದುಲ್ ಗಾಬ, ಸಂಪುಟ–5, ಪುಟ–216, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಈ ಆಯತಿನ ವ್ಯಾಖ್ಯಾನವನ್ನು ವಿವರಿಸುತ್ತಾ, ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಬರೆದಿದ್ದಾರೆ: ಆದಾಗ್ಯೂ, ಆ ಸಮಯದಲ್ಲಿ ಅವರು ನಿದ್ರಿಸುತ್ತಿದ್ದರು, ಆದರೆ ಅವರ ಕೈಯಲ್ಲಿ ಆಯುಧಗಳು ದೃಢವಾಗಿ ಹಿಡಿದಿದ್ದವು. ಬೀಳಲಾರಂಭಿಸಿದಾಗ ಆಘಾತವಾಯಿತು. ಆದಾಗ್ಯೂ, ಇಲ್ಲಿ ನುವಾಸ್ ಎಂಬ ಪದವನ್ನು ಬಳಸಲಾಗಿದೆ. ಇದರ ವ್ಯಾಖ್ಯಾನವು ಈ ಕೆಳಗಿನಂತಿರುತ್ತದೆ: **ಅಮನತನ್ನುಆಸಾ** ವಿವಿಧ ಅಂಶಗಳಿಂದ ಅದರ ಅನುವಾದಗಳ ಸಾರಾಂಶವು ಈ ಕೆಳಗಿನಂತಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ದುಃಖದ ನಂತರ, ಅವನು ನಿಮಗೆ ನಿದ್ರೆ ಎಂದು ಕರೆಯಬಹುದಾದ ಅಂತಹ ಶಾಂತಿಯನ್ನು ಕಳುಹಿಸಿದನು, ಅಥವಾ ಅವನು ನಿಮಗೆ ಶಾಂತಿಯುತವಾದ ತೂಕಡಿಕೆಯನ್ನು ನೀಡಿದನು, ಅಥವಾ ಅವನು ನಿಮಗೆ ನಿದ್ರೆಯ ಪರಿಣಾಮವನ್ನು ಹೊಂದಿರುವ ಅಥವಾ ನಿದ್ರೆಯಲ್ಲಿ ಸೇರಿಸಲ್ಪಟ್ಟ ಶಾಂತಿಯನ್ನು ನೀಡಿದನು ಎಂದು ಅರ್ಥೈಸುತ್ತದೆ. **ಅಮನತನ್ನುಆಸಾ** ಎಂದರೆ ತೂಕಡಿಕೆ ಎಂದರ್ಥ. ತಾತ್ಕಾಲಿಕವಾಗಿ ತಲೆ ಹೇಗೆ ಬಾಗಿತು ಎಂದರೆ ಧುಮುಕುವುದು ಎಂದೂ ಹೇಳಲಾಗುತ್ತದೆ, ಆದರೆ ಇಲ್ಲಿ **ನುಆಸ್**ನ ಅರ್ಥವು ಈ ರೀತಿಯ ತೂಕಡಿಕೆಯಲ್ಲ, ಬದಲಿಗೆ ಇದು ಎಚ್ಚರ ಮತ್ತು ನಿದ್ರೆಯ ನಡುವಿನ ಸ್ಥಿತಿಯಾಗಿದೆ. ಮಲಗುವ ಮೊದಲು, ಎಲ್ಲಾ ನರಗಳು ಶಾಂತತೆಯನ್ನು ಕಂಡುಕೊಳ್ಳುವ ಮಧ್ಯಮ ಹಂತವಿದೆ ಮತ್ತು ಅದು ಆಳವಾದ ಶಾಂತವಾಗಿರುತ್ತದೆ. ಆ ಶಾಂತಿ ಹೀಗೆಯೇ ಮುಂದುವರಿದರೆ ಅದು ನಿದ್ದೆಗೆ ತಿರುಗುತ್ತದೆ. ಅಂತಹ ಸ್ಥಿತಿಯಲ್ಲಿ, ಒಬ್ಬ ವ್ಯಕ್ತಿಯು ನಡೆಯುತ್ತಿದ್ದರೆ, ಅವನು ಬೀಳುವುದಿಲ್ಲ, ಬೀಳುವ ಮೊದಲು ಅವನು ಆಘಾತಕ್ಕೊಳಗಾಗುತ್ತಾನೆ ಮತ್ತು ಅವನು ಯಾವ ಸ್ಥಿತಿಯಲ್ಲಿದ್ದನು ಎಂದು ಅವನಿಗೆ ತಿಳಿದಿದೆ, ಆದರೆ ಅವನು ನಿದ್ದೆ ಮಾಡಿದರೆ, ಅವನ ನರಗಳು ಮತ್ತು ಅವನ ಅಂಗಗಳ ಮೇಲೆ ಅವನಿಗೆ ನಿಯಂತ್ರಣ ವಿರುವುದಿಲ್ಲ. ಆದಾಗ್ಯೂ, ಬಿಶ್ರ್ ಬಿನ್ ಬಾರಾ ಈ ಸ್ಥಿತಿಯಲ್ಲಿ ಅಂತಹ ಆಳವಾದ ನಿದ್ರೆಗೆ ಬಿದ್ದಿರಬಹುದು, ಆದರೆ ಯುದ್ಧದ ಸ್ಥಿತಿಯ ಹೊರತಾಗಿಯೂ, ಇದು ಶಾಂತಿಯ ಸ್ಥಿತಿ ಮತ್ತು ಮನುಷ್ಯ ಬೀಳುತ್ತಾನೆ, ಮತ್ತು ಅದು ಸರಿ ಎಂದು ನಂಬಿದ್ದರೂ ಸಹ, ಅವನ ಕೈಗಳು ಸಡಿಲವಾದಾಗ ಅವನ ಕತ್ತಿ ಕೆಳಗೆ ಬಿದ್ದಿತು. ಆದಾಗ್ಯೂ, ಈ ಸ್ಥಿತಿಯು ಒಬ್ಬ ವ್ಯಕ್ತಿಯು ಆಳವಾದ ನಿದ್ರೆಗೆ ಹೋಗುತ್ತಿದ್ದೇನೆ ಎಂದು ಭಾವಿಸುತ್ತಾನೆ ಮತ್ತು ನಂತರ ವ್ಯಕ್ತಿಯು ಆಘಾತದಿಂದ ಎಚ್ಚರಗೊಳ್ಳುತ್ತಾನೆ. ಆದ್ದರಿಂದ ಅಲ್ಲಾಹನು ನುಡಿಯುತ್ತಾರೆ: ನಾವು ನಿಮಗೆ ನಿದ್ರೆಗೆ ಸಮಾನವಾದ ಶಾಂತಿಯ ಸ್ಥಿತಿಯನ್ನು ನೀಡಿದ್ದೇವೆ ಆದರೆ ನಿಮ್ಮ ಅಥವಾ ನಿಮ್ಮ ಅಂಗಗಳ ಮೇಲೆ ನಿಮಗೆ ನಿಯಂತ್ರಣವಿಲ್ಲದ ನಿದ್ರೆಯಷ್ಟು ಆಳವಾಗಿರುವುದಿಲ್ಲ. ಅದು ಶಾಂತಿಯನ್ನು ನೀಡುತ್ತಿತ್ತು ಆದರೆ ನಿಮ್ಮನ್ನು ನಿಷ್ಪ್ರಯೋಜಕನನ್ನಾಗಿ ಮಾಡಲಿಲ್ಲ.

ಅದೇ ರೀತಿಯಲ್ಲಿ, ಹಝ್ರತ್ ಅಬು ತಲ್ಹಾ(ರ) ಹೇಳುತ್ತಾರೆ ಮತ್ತು ಬುಖಾರಿಯ ಹದೀಸ್‌ನಲ್ಲಿ ಉಹುದ್ ದಿನದಂದು ಯುದ್ಧದ ಸಮಯದಲ್ಲಿ ನಾವು ತೂಕಡಿಕೆಯಿಂದ ಹೊರಬಂದಿದ್ದೇವೆ ಮತ್ತು ಇದು ಈಗಾಗಲೇ ಉಲ್ಲೇಖಿಸಲಾದ ತೂಕಡಿಕೆಯಾಗಿದೆ. ಹಝ್ರತ್ ತಹ್‌ಹ(ರ) ಹೇಳುತ್ತಾರೆ: ನನ್ನ ಕೈಯಿಂದ ಖಡ್ಗ ಬೀಳುವ ಸಂದರ್ಭವಿರುತ್ತಿತ್ತು. ಅದನ್ನು ನಾನು ಪುನಃ ದೃಢವಾಗಿ ಹಿಡಿದುಕೊಳ್ಳುತ್ತಿದ್ದೆ. ಹಾಗಾಗಿ ನಮ್ಮ ಕೈಗಳಿಂದ ವಸ್ತುಗಳು ಕೆಳಗೆ ಬೀಳುವ ಅಥವಾ ನಡೆಯುವಾಗ ನಾವು ಬೀಳುವ

ನಿದ್ರೆಯ ಸ್ಥಿತಿ ಇರಲಿಲ್ಲ ಎಂದು ಈ ಹದೀಸ್ ಹೇಳುತ್ತಿದೆ. ಶಾಂತಿ ಇತ್ತು, ಶಾಂತಿ ಇತ್ತು, ಆದರೆ ಇನ್ನೂ ಸ್ವಲ್ಪ ಮಟ್ಟಿಗೆ ನಾವು ನಮ್ಮ ಅಂಗಗಳ ಮೇಲೆ ನಿಯಂತ್ರಣ ಹೊಂದಿದ್ದೇವೆ. ನಂತರ, ಅದು ಬೀಳುವ ಹಂತದಲ್ಲಿದ್ದರೆ, ಅವರು ಅದನ್ನು ಹಿಡಿದಿದ್ದರು. ಅಂದರೆ ಈ ಭಾಗದ ನಿದ್ದೆ ಹಠಾತ್ತಾಗಿ ಬಂದದ್ದಲ್ಲ ಆ ಜನರ ಮೇಲೆ ಕೆಲಕಾಲ ಮುಂದುವರೆಯುವ ಸ್ಥಿತಿಯಾಗಿತ್ತು.

ತಿರ್ಮಿದಿ ಅಬ್ವಾಬುತ್ತಫ್‌ಸೀರ್‌ನಲ್ಲಿ, ಹಝ್ರತ್ ಅಬು ತಲ್ಹಾ(ರ) ವರದಿ ಮಾಡುತ್ತಾರೆ: ಉಹದ್ ಯುದ್ಧದ ದಿನ, ನಾನು ತಲೆ ಎತ್ತಿ ನೋಡಿದಾಗ, ಪ್ರತಿಯೊಬ್ಬ ಮನುಷ್ಯನು ಗಾಢವಾದ ನಿದ್ರೆಯಲ್ಲಿ ತನ್ನ ಗುರಾಣಿಯ ಕೆಳಗೆ ಕುಗ್ಗುತ್ತಿದ್ದನು. ಎಚ್ಚರವಾಗಿರುವುದರಿಂದ ಅಥವಾ ಆಯಾಸದಿಂದಾಗಿ, ಈ ಸಹಾಬರವರು ತುಂಬಾ ಕೆಟ್ಟ ಸ್ಥಿತಿಯಲ್ಲಿದ್ದರು. ಅಂತಹ ಸ್ಥಿತಿಯಲ್ಲಿ ಅವರು ಸರ್ವಶಕ್ತನಾದ ಅಲ್ಲಾಹನಿಂದ ಈ ಶಾಂತಿಯ ಸ್ಥಿತಿಯನ್ನು ಪಡೆಯುತ್ತಿದ್ದರು. ಅದು ಅಂದರೆ ಸಾಮಾನ್ಯವಾದಂತಹ ದೃಶ್ಯವಿತ್ತು. ಇದು ಕೇವಲ ಒಬ್ಬ ದಣಿದ ಮುಜಾಹಿದ್‌ಗೆ ಆಕಸ್ಮಿಕವಾಗಿ ಅನ್ವಯಿಸಿದಲ್ಲ, ಬದಲಿಗೆ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ ಸಲ್ಲಲ್ಲಾಹು ಅಲೈಹಿವಸಲ್ಲಮರೊಂದಿಗೆ ಯುದ್ಧದಲ್ಲಿ ಶತ್ರುಗಳನ್ನು ಎದುರಿಸುತ್ತಿದ್ದ ಎಲ್ಲಾ ಮುಜಾಹಿದ್‌ಗಳ ಮೇಲೆ ಇದ್ದಕ್ಕಿದ್ದಂತೆ ಆಕಾಶದಿಂದ ಕೆಳಗಿಳಿದವರಂತೆ ಈ ಸ್ಥಿತಿ ಅವರನ್ನು ಆವರಿಸಿತು ಎಂದು ಭಾಸವಾಗಿತ್ತು. ಆ ಸಮಯದಲ್ಲಿ ಅವರಿಗೆ ಈ ವಿಷಯ, ಶಾಂತಿ, ತಮ್ಮ ಅಂಗಗಳನ್ನು ರಿಫ್ರೆಶ್ ಮಾಡುವ, ರಿಫ್ರೆಶ್ ಮಾಡುವ ಅಗತ್ಯವಿತ್ತು, ಮತ್ತು ಇದು ನಿದ್ರೆ ಮಾಡುವ ಸಮಯವಿರಲಿಲ್ಲ ಮತ್ತು ಅಂತಹ ಸ್ಥಿತಿಯು ಇರುವಾಗ, ಅಂತಹ ಆಯಾಸದ ಸ್ಥಿತಿಯು ಇದ್ದಾಗ ಅಂತಹ ಪರಿಸ್ಥಿತಿಯು ಮನುಷ್ಯನ ಮೇಲೆ ಆವರಿಸುತ್ತದೆ. ಆದಾಗ್ಯೂ, ಯುದ್ಧ ನಡೆಯುತ್ತಿರುವಾಗ ಮತ್ತು ಶತ್ರುಗಳೊಂದಿಗೆ ಘೋರವಾದ ಅಪಾಯ ಸಾಧ್ಯತೆ ಇರುವಾಗ ಪೂರ್ತಿ ಕೋಮು ನಿದ್ರೆಯ ಸ್ಥಿತಿಗೆ ಹೋಗುವುದು ಆಕಸ್ಮಿಕ ಸಂಗತಿಯಲ್ಲ. ಇದೊಂದು ಅದ್ಭುತ ಪವಾಡ ಮತ್ತು ದೃಷ್ಟಾಂತವಾಗಿದೆ. ಇದು ಅಕಸ್ಮಿಕ ಸಂಗತಿಯಲ್ಲ. ಇದು ಕೆಲವರಿಗೆ ಆಗುತ್ತದೆ ಆದರೆ ಇದು ಅಕಸ್ಮಿಕವಲ್ಲ. ಇದು ಒಂದು ಪವಾಡವಾಗಿದೆ ಮತ್ತು ಇದು ಆ ಸಮಯದಲ್ಲಿ ಸರ್ವಶಕ್ತನಾದ ಅಲ್ಲಾಹನು ಅವರಿಗೆ ನೀಡಿದ ವಿಶೇಷ ಶಾಂತಿಯ ಸ್ಥಿತಿಯಾಗಿದೆ. (ದ್‌ಸ್‌ರ್‌ಲ್ ಖುರ್‌ಆನ್, ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್), 6 ರಮಝಾನುಲ್ ಮುಬಾರಕ್, 17–02–1994)

ಅಲ್ಲಾಮಾ ಅಬ್ದುಲ್ ರಝಾಕ್ ಅವರು ಝುಹ್ರಿಯಿಂದ ವರದಿ ಮಾಡುತ್ತಾರೆ ಉಹುದಿನ ದಿನದಂದು ಹಝ್ರತ್ ಪೈಗಂಬರ್(ಸ)ರ ಪರಿಶುದ್ಧ ಮುಖದ ಮೇಲೆ ಖಡ್ಗದಿಂದ ಎಪ್ಪತ್ತು ಏಟುಗಳನ್ನು ಮಾಡಲಾಗಿತ್ತು. ಆದರೆ ಈ ಎಲ್ಲ ಕೆಡುಕುಗಳಿಂದ ಹಝ್ರತ್ ಪೈಗಂಬರ್(ಸ)ರನ್ನು ಅಲ್ಲಾಹನು ರಕ್ಷಿಸಿದನು. ಇಬ್ನೆ ಹಜರ್ ಅಸ್ಕಲಾನಿ ಹೇಲುತ್ತಾರೆ ಝುಹ್ರಿಯುವರು ಎಪ್ಪತ್ತರಿಂದ ವಾಸ್ತವವಾಗಿ ಎಪ್ಪತ್ತು ಎಂದಯು ತೆಗೆದುಕೊಂಡಿದ್ದಾರೆಯೇ ಅಥವಾ ಆ ಸಂಖ್ಯೆಯಲ್ಲಿ ಉತ್ಪ್ರೇಕ್ಷೆಯಾಗಿರಬಹುದು. (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ–4, ಪುಟ–198, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ಸಮೀಪದಲ್ಲಿ ಇರುವವರನ್ನು ಯುದ್ಧದಲ್ಲಿ ಅತ್ಯಂತ ಧೀರರೆಂದು ತಿಳಿಯಲಾಗುತ್ತದೆ. ಏಕೆಂದರೆ ಹಝ್ರತ್ ಪೈಗಂಬರ್(ಸ) ಅತ್ಯಂತ ಅಪಾಯಕರವಾದ ಸ್ಥಳಗಳಲ್ಲಿ ಇರುತ್ತಿದ್ದರು. ಸುಬ್‌ಹಾನಲ್ಲಾಹ್. ಎಂತಹ ವೈಭವ!

ಉಹುದ್‌ನಲ್ಲಿ ನೋಡಿರಿ, ಮೇಲಿಂದ ಮೇಲೆ ಖಡ್ಗಗಳ ದಾಳಿ ನಡೆಯುತ್ತಿತ್ತು. ಎಂತಹ ಘೋರವಾದ ಯುದ್ಧ ನಡೆಯುತ್ತಿತ್ತು ಎಂದರೆ ಸಹಾಬಿಯರಿಗೂ ಸಹಿಸಲು ಆಗುತ್ತಿರಲಿಲ್ಲ. ಆದರೆ ಈ ಯೋಧ ಕೆಚ್ಚೆದೆಯಿಂದ ಹೋರಾಡುತ್ತಿದ್ದರು. ಇದರಲ್ಲಿ ಸಹಾಬಿಯರ ತಪ್ಪು ಇರಲಿಲ್ಲ. ಅಲ್ಲಾಹನು ಅವರನ್ನು ಕ್ಷಮಿಸಿಕೊಂಡನು. ಸತ್ಯದಲ್ಲಿ ಹಝ್ರತ್ ಪೈಗಂಬರ್(ಸ)ರ ಧೈರ್ಯದ ಮಾದರಿಯನ್ನು ತೋರಿಸುವುದೇ ಇದರಲ್ಲಿ ಅಡಗಿದ್ದ ರಹಸ್ಯವಾಗಿತ್ತು."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಒಂದು ಸಂದರ್ಭದಲ್ಲಿ, ಮೇಲಿಂದ ಮೇಲೆ ಖಡ್ಗಗಳ ದಾಳಿಗಳು ನಡೆಯುತ್ತಿದ್ದವು ಮತ್ತು ಹಝ್ರತ್ ಪೈಗಂಬರ್(ಸ)ರವರು ಪ್ರವಾದಿತ್ವದ ದಾವೆಯನ್ನು ಮಾಡುತ್ತಿದ್ದರು ನಾನು ಮುಹಮ್ಮದ್ ರಸೂಲುಲ್ಲಾಹ್ ಆಗಿದ್ದೇಣೆ ಎಂದು. ಹಝ್ರತ್ ಪೈಗಂಬರ್(ಸ) ರವರ ಹಣೆಯ ಮೇಲೆ 70 ಗಾಯಗಳಾಗಿದ್ದವು ಎಂದು ಹೇಳಲಾಗುತ್ತದೆ. ಇವರು ಮಹಾನ್ ಸೃಷ್ಟಿಯಾಗಿದ್ದರು." (ಮಲ್‌ಫೂಝಾತ್, ಸಂಪುಟ–1, ಪುಟ–115, ಆವೃತ್ತಿ 2022)

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ಹೊಂಡದಲ್ಲಿ ಬದ್ದ ಘಟನೆಯ ಬಗ್ಗೆ ವರದಿಯಲ್ಲಿ ಹೀಗೆ ವಿವರಿಸಲಾಗಿದೆ, ಅಬು ಅಮಿರ್ ಫಾಸಿಕ್ ಉಹುದ್ ಯುದ್ಧ ಮೈದಾನದಲ್ಲಿ ಮುಸ್ಲಿಮರು ಅಜಾಗ್ರುಕರಾಗಿ ನಷ್ಟವನ್ನು ಅನುಭವಿಸಲಿ ಎಂಬ ಉದ್ದೇಶದಿಂದ ಅನೇಕ ಹೊಂಡಗಳನ್ನು ಅಗೆದಿದ್ದನು. ಹಝ್ರತ್ ಪೈಗಂಬರ್(ಸ)ರವರು ಸಹ ಈ ಹೊಂಡಗಳಲ್ಲಿ ಒಂದರಲ್ಲಿ ಅರಿವಿಲ್ಲದೆ ಬಿದ್ದರು. ಹೀಗೆ ಅವರ ಮೇಲೆ ಮೂರ್ಛೆ ಆವರಿಸಿತು. ಹೀಗೆ ಅವರ ಎರಡೂ ಮೊಣಕಾಲುಗಳು ಗಾಯಗೊಂಡವು. ಹಝ್ರತ್ ಅಲಿ(ರ) ಶೀಘ್ರವಾಗಿ ಮುಂದಾಗಿ ಅವರನ್ನು ತಮ್ಮ ಕೈಗೆ ತೆಗೆದುಕೊಂಡರು ಮತ್ತು ಹಝ್ರತ್ ತಲ್ಹಾ ಬಿನ್ ಉಬೈದುಲ್ಲಾ(ರ) ಅವರನ್ನು ಮೇಲಕ್ಕೆತ್ತಿ ಹೊರತೆಗೆದರು. ಹಝ್ರತ್ ಪೈಗಂಬರ್(ಸ) ಅವರ ಬೀಳುವುದಕ್ಕೆ ಕಾರಣ ದುರ್ದೈವಿ ಇಬ್ನ್ ಕಮಿಯಾ ಅವನು ಹಝ್ರತ್ ಪೈಗಂಬರ್(ಸ) ಅವರ ಮೇಲೆ ದಾಳಿ ಮಾಡಿ ಕತ್ತಿಯಿಂದ ಇರಿದ ಕಾರಣವಾಗಿತ್ತು. ಆ ಕತ್ತಿಯು ಹಝ್ರತ್ ಪೈಗಂಬರ್(ಸ)ರವರ ಕುತ್ತಿಗೆಯ ಮೇಲೆ ಬಿದ್ದಿತು ಆದರೆ ಕತ್ತಿಯು ಅವರ ಮೇಲೆ ಪರಿಣಾಮ ಬೀರದಿದ್ದರೂ, ಅದರ ಗಾಯವು ಹಝ್ರತ್ ಪೈಗಂಬರ್(ಸ) ಅವರ ಪರಿಶುದ್ಧ ಕುತ್ತಿಗೆಯಲ್ಲಿ ತೀವ್ರವಾದ ಆಘಾತವನ್ನು ಉಂಟುಮಾಡಿತು, ಅದರ ನಂತರ ಒಂದು ತಿಂಗಳು ಅಥವಾ ಅದಕ್ಕಿಂತ ಹೆಚ್ಚು ಕಾಲ ಅವರ(ಸ) ಕುತ್ತಿಗೆ ನೋವು ಅನುಭವಿಸಿದರು. ಅದೇ ಸಮಯದಲ್ಲಿ, ಅವನು ಹಝ್ರತ್ ಪೈಗಂಬರ್(ಸ) ರ ಮೇಲೆ ಕಲ್ಲುಗಳನ್ನು ತೂರಾಡಲು ಪ್ರಾರಂಭಿಸಿದನು, ಅದರಲ್ಲಿ ಒಂದು ಕಲ್ಲು ಹಝ್ರತ್ ಪೈಗಂಬರ್(ಸ)ರಿಗೆ ಹೊಡೆಯಿತು. ಮತ್ತೊಂದೆಡೆ, ಹಝ್ರತ್ ಸಾದ್ ಬಿನ್ ಅಬಿ ವಕ್ಕಾಸ್(ರ) ಅವರ ಸಹೋದರರಾಗಿದ್ದ ಉತ್ಬಾ ಬಿನ್ ಅಬಿ ವಕ್ಕಾಸ್(ರ) ಅವರು ಹಝ್ರತ್ ಪೈಗಂಬರ್(ಸ) ಮೇಲೆ ಕಲ್ಲನ್ನು ಎಸೆದನು, ಅದು ಅವರ(ಸ) ಮುಖಕ್ಕೆ ಬಡಿದು ಇದರಿಂದಾಗಿ ಅವರ ಕೆಳಗಿನ ನಾಲ್ಕನೇ ಹಲ್ಲುಗಳು ಮುರಿದುಹೋದವು, ಅಂದರೆ. ಎರಡು ಮುಂಭಾಗದ ಹಲ್ಲುಗಳ ನಡುವಿನ ಹಲ್ಲು ಮತ್ತು ಮೊನಚಾದ ಹಲ್ಲು ಮುರಿದು ಹೋಯಿತು. ಅದೇ ಸಮಯದಲ್ಲಿ, ಅವರ ಕೆಳಗಿನ ತುಟಿಯೂ ಸಹ ಹರಿದಿತ್ತು. ಇಮಾಮ್ ಇಬ್ನ್ ಹಜರ್ ಅಸ್ಕಲಾನಿ ಹಲ್ಲಿನ ತುಂಡನ್ನು ಮುರಿದಿತ್ತು ಬೇರಿನಿಂದ ಮುರಿದಿರಲಿಲ್ಲ ಎಂದು ಹೇಳುತ್ತಾರೆ. ಅದೇ ಉತ್ಬಾರ ಸಹೋದರನಾಗಿದ್ದ ಹಝ್ರತ್ ಸಾದ್ ಬಿನ್ ಅಬಿ ವಕ್ಕಾಸ್(ರ), ಹಝ್ರತ್ ಪೈಗಂಬರ್(ಸ)ರ ಮೇಲೆ ದಾಳಿ ಮಾಡಿದ್ದು ತನ್ನ ಸಹೋದರ ಎಂದು ತಿಳಿದಾಗ, ಅವರು ಸೇಡು ತೀರಿಸಿಕೊಳ್ಳುವ ಮನೋಭಾವದಿಂದ ಅವನನ್ನು ಹಿಂಬಾಲಿಸಲು ಸೈನ್ಯವನ್ನು ಪ್ರವೇಶಿಸಿದರು. ಅವರು ಹೇಳುತ್ತಾರೆ ನಾನು ಆ ಸಮಯದಲ್ಲಿ ಅವನನ್ನು ವಧಿಸಲು ಎಷ್ಟು ಉತ್ಸುಕನಾಗಿದ್ದೆ ಎಂದರೆ ನನಗೆ ಜಗತ್ತಿನಲ್ಲಿ ಬೇರೆ ಯಾವುದೂ ವಿಷಯದ ಆಸೆ ಇರಲಿಲ್ಲ, ಆದರೆ ಉತ್ಬಾ ಅವರಿಂದ ಪಾರಾರಿಯಾದನು. ಅವರು ಹಿಂತಿರುಗಿ ಮತ್ತೊಮ್ಮೆ ಅವನನ್ನು ಹುಡುಕಲು ಹೋದರು ಆದರೆ ಅವನು ಪ್ರತಿ ಬಾರಿಯೂ ಪರಾರಿಯಾಗುತ್ತಿದ್ದನು. ಮತ್ತು ಅವರು ಮೂರನೇ ಬಾರಿಗೆ ಹೊರಡಲು ಪ್ರಾರಂಭಿಸಿದಾಗ, ಹಝ್ರತ್ ಪೈಗಂಬರ್(ಸ) ಹಝ್ರತ್ ಸಾದ್(ರ) ಅವರಿಗೆ ಹೇಳಿದರು, ಓ ದೇವರ ಸೇವಕನೇ!! ನೀವು ನಿಮ್ಮ ಜೀವನವನ್ನು ತ್ಯಜಿಸಲು ಉದ್ದೇಶಿಸಿದ್ದೀರಾ? ಹಝ್ರತ್ ಪೈಗಂಬರ್(ಸ) ರವರ ನಿಷೇಧದಿಂದಾಗಿ ನಾನು ತಡೆದುಕೊಂಡೆ ಎಂದು ಹಝ್ರತ್ ಸಅದ್(ರ) ಹೇಳುತ್ತಾರೆ. ಹಝ್ರತ್ ಪೈಗಂಬರ್(ಸ) ಉತ್ಬಾಹ್ ಬಿನ್ ಅಬಿ ವಕ್ಕಾಸ್ ವಿರುದ್ಧ ಹೀಗೆ ಪ್ರಾರ್ಥನೆಯನ್ನು ಮಾಡಿದರು, **ಅಲ್ಲಾಹುಮ್ಮ ಲಾ ಯಹೂಲು ಅಲೈಹಿಲ್‌ಹೌಲು ಹತ್ತಾ ಯಮೂತ ಕಾಫಿರ.** ಓ ಸರ್ವಶಕ್ತನಾದ ಅಲ್ಲಾಹನೇ! ಆತನು ಅವಿಶ್ವಾಸಿಯಾಗಿ ಸಾಯಲು ಒಂದು ವರ್ಷ ಕಳೆಯಬಾರದು. ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಪೈಗಂಬರ್(ಸ)ರವರ ಈ ಪ್ರಾರ್ಥನೆಯನ್ನು ಹೇಗೆ ಸ್ವೀಕರಿಸಿದನು ಅಂದರೆ ಅದೇ ದಿನ ಹಝ್ರತ್ ಹಾತೀಬ್ ಬಿನ್ ಅಬಿ ಬಲ್ತಾ(ರ) ಅವನನ್ನು ವಧಿಸಿದರು. ಹಝ್ರತ್ ಹಾತೀಬ್ ಹೇಳುತ್ತಾರೆ, ನಾನು ಉತ್ಬಾ ಬಿನ್ ಅಬಿ ವಕ್ಕಾಸ್‌ನ ನಾಚಿಕೆಗೇಡಿನ ಧೈರ್ಯವನ್ನು ಕಂಡಾಗ, ನಾನು ತಕ್ಷಣ ಹಝ್ರತ್ ಪೈಗಂಬರ್(ಸ) ಅವರನ್ನು ಕೇಳಿದೆ, ಉತ್ಬಾ ಎಲ್ಲಿ ಹೋದನು? ಅದಕ್ಕೆ ಅವನು ಹೋದ ದಿಕ್ಕಿನತ್ತ ತೋರಿಸಿದರು. ನಾನು ತಕ್ಷಣ ಅವನ ಅನ್ವೇಷಣೆಯಲ್ಲಿ ಹೊರಟೆ, ಒಂದು ಹಂತದಲ್ಲಿ ನಾನು ಅವನನ್ನು ಹಿಡಿಯುವಲ್ಲಿ ಯಶಸ್ವಿಯಾಗಿದ್ದೆ. ನಾನು ತಕ್ಷಣವೇ ಕತ್ತಿಯಿಂದ ಅವನ ಕುತ್ತಿಗೆಯನ್ನು ಕತ್ತರಿಸಿದೆ ಮತ್ತು ಅವನ ಕುತ್ತಿಗೆಯು ದೂರ ಬಿದ್ದಿತು. ನಾನು ಮುಂದೆ ಹೋಗಿ ಅವನ ಕತ್ತಿ ಮತ್ತು ಕುದುರೆಯನ್ನು ಹಿಡಿದು ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ತಂದೆ. ಈ ಸುದ್ದಿಯನ್ನು ಕೇಳಿದ ಅವರು ಎರಡು ಬಾರಿ ಹೀಗೆ ಹೇಳಿದರು: **ರಝಿಯಲ್ಲಾಹು ಅನ್‌ಕ, ರಝಿಯಲ್ಲಾಹು ಅನ್‌ಕ** ಅಂದರೆ ಸರ್ವಶಕ್ತನಾದ ಅಲ್ಲಾಹನು ನಿಮ್ಮ ಬಗ್ಗೆ ಸಂತುಷ್ಟನಾಗಿದ್ದಾನೆ. ಅಲ್ಲಾ ನಿಮ್ಮ ಬಗ್ಗೆ ಸಂತಸಗೊಂಡಿದ್ದಾನೆ.

ಈ ದಾಳಿಯಲ್ಲಿ ಹಝ್ರತ್ ಪೈಗಂಬರ್(ಸ)ರ ತಲೆಯ ಮೇಲಿದ್ದ

(ಖೌದ್) ಕಿರೀಟವೂ ಮುರಿದುಬಿದದಿತು, ಅದೇ ರೀತಿ ಶತ್ರುಗಳ ನಿರಂತರ ದಾಳಿಯಲ್ಲಿ ಅವರ ಮುಖಕ್ಕೆ ಹಾನಿಯಾಯಿತು ಮತ್ತು ಚರ್ಮವು ಸೀಳಿತು. ಹಝ್ರತ್ ಪೈಗಂಬರ್(ಸ) ಅವರ ಅನುಗ್ರಹದಾಯಕ ಮುಖಕ್ಕೆ ಇರಿದ ಆಕ್ರಮಣಕಾರರಲ್ಲಿ ಒಬ್ಬನು ಅಬ್ದುಲ್ಲಾ ಬಿನ್ ಶಿಹಾಬ್ ಝುಹ್ರಿ ಆಗಿದ್ದನು. ಅವನು ನಂತರ ಇಸ್ಲಾಂ ಧರ್ಮವನ್ನು ಸ್ವೀಕರಿಸಿದನು. (ಸೀರ'ತ'ುಲ್ ಹಲಬೀಯ, ಸಂಪುಟ-2, ಪುಟ-317, ದಾರುಲ್ ಕುತುಬ್ ಇಲ್‌ಮಿಯ ಬೈರುತ್) (ಫತಹ್ ಅಲ್‌ಬಾರಿ, ಸಂಪುಟ-7, ಪುಟ-464, ಹದೀಸ್-4070, ಖದೀಮಿ ಕುತುಬ್ ಖಾನ ಕರಾಚಿ)

ಈ ವಿವರಣೆಯು ಇನ್ನು ಮುಂದೆ ವಿವರಿಸಲಾಗುವುದು. ಇನ್‌ಶಾಅಲ್ಲಾಹ್

ಈಗ ನಾನು ಕೆಲವು ದಿವಂಗತರನ್ನು ಉಲ್ಲೇಖಿಸಲು ಬಯಸುತ್ತೇನೆ. ಮೊದಲ ಉಲ್ಲೇಖವು ಪ್ಯಾಲೆಸ್ತೀನ್‌ನ ಮುಹಮ್ಮದ್ ಅಬು ಹಲ್ಮಿ ಮುಹಮ್ಮದ್ ಉಕಾಶ ಸಾಹಿಬ್ ಅವರದ್ದಾಗಿದೆ. ಷರೀಫ್ ಔದಾ ಸಾಹಿಬ್ ಅವರ ಬಗ್ಗೆ ಬರೆಯುತ್ತಾರೆ, ಕೆಲವು ದಿನಗಳ ಮುಂಚೆ ಗಾಜಾ ಪ್ರದೇಶದ ನಮ್ಮ ಅಹ್ಮದಿ ಸಹೋದರ ಮುಹಮ್ಮದ್ ಉಕಾಶಾ ಸಾಹಿಬ್ ಅತ್ಯಂತ ಕ್ರೂರ ರೀತಿಯಲ್ಲಿ ಹುತಾತ್ಮರಾದರು. ಅವರ ಶವ ಅವರ ಮನೆಯಿಂದ ಸ್ವಲ್ಪ ದೂರದಲ್ಲಿ ಪತ್ತೆಯಾಗಿದೆ. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**.

ದಿವಂಗತರು ಅತ್ಯಂತ ಪ್ರಾಮಾಣಿಕ ಅಹಮದಿಯಾಗಿದ್ದರು. ಅವರಿಗೆ ಎಪ್ಪತ್ತೈದು ವರ್ಷ ವಯಸ್ಸಾಗಿತ್ತು. ಅವರು ತಮ್ಮ ಮೂಲ ಗ್ರಾಮದಿಂದ ವಲಸೆ ಬಂದರು ಮತ್ತು ಗಾಜಾದ ಜಬಾಲಿಯಾದಲ್ಲಿ ನಿರಾಶ್ರಿತರ ಶಿಬಿರದಲ್ಲಿ ವಾಸಿಸುತ್ತಿದ್ದರು. ಅವರಿಗೆ ಏಳು ಗಂಡು ಮತ್ತು ಐದು ಹೆಣ್ಣುಮಕ್ಕಳು ಮತ್ತು ಮೂವತ್ಮೂರು ಮೊಮ್ಮಕ್ಕಳಿದ್ದಾರೆ. ಅವರ ಓರ್ವ ಮೊಮ್ಮಗ ಹೇಳುತ್ತಾರೆ: ಅವರು ಹಲವಾರು ವಾರಗಳಿಂದ ಸಂಪರ್ಕದಿಂದ ದೂರವಿದ್ದರು. ತಾತ್ಕಾಲಿಕ ಕದನ ವಿರಾಮದ ಸಮಯದಲ್ಲಿ ನಾನು ಅವರನ್ನು ಹುಡುಕಲು ಹೋದಾಗ, ನಾನು ಮನೆಯಲ್ಲಿ ಅವರನ್ನು ಕಾಣಲಿಲ್ಲ. ಆಗ ಅವರ ಮನೆಯಿಂದ ನೂರು ಮೀಟರ್ ದೂರದಲ್ಲಿ ಚದುರಿದ ಶವಗಳ ನಡುವೆ ಅವರ ಶವ ಪತ್ತೆಯಾಯಿತು. ಅವರ ತಲೆಗೆ ಗುಂಡು ಹಾರಿಸಿ ಹುತಾತ್ಮಗೊಳಿಸಲಾಗಿತ್ತು.

ಗಾಜಾದ ಓರ್ವ ಅಹ್ಮದಿ ಯಾಸಿರ್ ಶಾಹೀನ್ ಸಾಹಿಬ್ ಹೇಳುತ್ತಾರೆ ದಿವಂಗತರು ಹತ್ತು ವರ್ಷಗಳ ಮುಂಚೆ ಡಿಶ್ ಅಳವಡಿಸಿಕೊಂಡಾಗ ನನಗೆ ಹೇಳಿದರು ಎಂಟಿಎ ಚಾನಲ್ ಅನ್ನು ಹುಡುಕಲು ನನಗೆ ಸಹಾಯ ನೀಡಿ. ಅವರ ಮೂಲಕವೇ ನನಗೆ ಅಹಮದಿಯತ್ತಿನ ಬಗ್ಗೆ ತಿಳಿಯಿತು. ಸ್ವಲ್ಪ ಸಮಯದ ನಂತರ ಅವರು ನನಗೆ ಜಮಾಅತ್ ಬಗ್ಗೆ ಹೆಚ್ಚು ಪರಿಚಯಿಸಿದರು ಮತ್ತು ನನಗೆ ಕೆಲವು ಪುಸ್ತಕಗಳನ್ನು ಕಳುಹಿಸಿದರು. ನಂತರ ನಮ್ಮ ನಡುವೆ ಕೆಲಕಾಲ ಚರ್ಚೆ ಮುಂದುವರೆಯಿತು. ಅದರ ನಂತರ, ನಾನು ಇಸ್ತಿಖಾರಾವನ್ನು ನಿರ್ವಹಿಸಿದೆ ಮತ್ತು ನನ್ನ ಪತ್ನಿಯೊಂದಿಗೆ ಬೈಅತ್ ಮಾಡುವ ಅವಕಾಶವನ್ನು ಪಡೆದುಕೊಂಡೆ. ಮುಹಮ್ಮದ್ ಉಕಾಶಾ ಸಾಹಿಬ್ ನನ್ನ ಬೈಅತ್ ಬಗ್ಗೆ ತುಂಬಾ ಸಂತೋಷಪಟ್ಟರು. ತದನಂತರ ನಮ್ಮ ಸಂಬಂಧವು ದೃಢವಾಯಿತು. ಅವರು ಹಲವು ಗಂಟೆಗಳ ಕಾಲ ವಿವಿಧ ಪವಿತ್ರ ಖುರ್‌ಆನ್‌ನ ಆಯತ್‌ಗಳನ್ನು ನನಗೆ ವಿವರಿಸುತ್ತಿದ್ದರು. ಅವರು ತಫ್ಸಿರ್ ಕಬೀರ್ ಅವರ ಉಲ್ಲೇಖಗಳನ್ನು ಓದಿತಿಳಿಸುತ್ತಿದ್ದರು ಮತ್ತು ನಾಸುಖ್ ಮನ್ಸೂಖ್ (ರದ್ದತಿ ಆಯತ್‌ಗಳ ಸಮಸ್ಯೆ) ಸಮಸ್ಯೆಗಳನ್ನು ವಿವರಿಸುತ್ತಿದ್ದರು. ಅವರ ಮಾತಿನ ಶೈಲಿ ಬಹಳ ಜನಪ್ರಿಯವಾಗಿತ್ತು. ಬಹಳ ದಿನಗಳಿಂದ ಪುಸ್ತಕ ಸಂಕಲನ ಮಾಡುತ್ತಿದ್ದ ಅವರು ನನಗೆ ಕರೆ ಮಾಡಿ ಪುಸ್ತಕ ಓದಿ ಸುಧಾರಿಸಿ ನಾನಾ ವಿಚಾರಗಳನ್ನು ಚರ್ಚಿಸುತ್ತಿದ್ದರು. ಅವರ ಉದ್ದೇಶವು ಅವರ ಮನೆಯನ್ನು ದೊಡ್ಡದಾಗಿಸಿ ಅದರಲ್ಲಿ ಜಮಾಅತ್ ಪುಸ್ತಕಗಳ ನಕಲು ಮಾಡಲು ಒಂದು ಗ್ರಂಥಾಲಯವನ್ನು ಮಾಡುವುದಾಗಿತ್ತು, ಆದರೆ ಅವರ ಕುಟುಂಬವು ಅಹ್ಮದಿಯತ್‌ನ ಕಾರಣದಿಂದ ಅವರನ್ನು ಕಿರುಕುಳಗೊಳಿಸಿತು, ಆದ್ದರಿಂದ ಅವರ ಉದ್ದೇಶವು ಈಡೇರಲಿಲ್ಲ. ಅವರ ಮೂಲಕವೇ ನನಗೆ ಗಾಜಾ ಜಮಾಅತ್‌ನ ಪರಿಚಯವಾಯಿತು. ನಾವೆಲ್ಲರೂ ಅವರ ಕುಳಿತುಕೊಳ್ಳುವ ಕೋಣೆಯಲ್ಲಿ ಅವರನ್ನು ಭೇಟಿಯಾಗುತ್ತಿದ್ದೆವು. ಅವರ ಕೊನೆಯ ವರ್ಷಗಳಲ್ಲಿ, ಅನಾರೋಗ್ಯದ ಕಾರಣ, ಅವರು ಆಗಾಗ್ಗೆ ಮನೆಯಲ್ಲಿಯೇ ಇದ್ದರು ಮತ್ತು ಕಷ್ಟದಿಂದ ಸ್ಥಳಾಂತರಗೊಂಡರು.

ಗಾಜಾದ ಇನ್ನೊಬ್ಬ ಅಹ್ಮದಿ ಅಯ್ವಾಜ್ ಸಾಹಿಬ್ ಇದ್ದಾರೆ ಅವರು ಹೇಳುತ್ತಾರೆ: ದಿವಂಗತರು ಎತ್ತರ, ತೆಳ್ಳಗಿದ್ದು, ಬಿಳಿ ಗಡ್ಡ ಹೊಂದಿದ್ದರು. ಅವರ ಒಳ್ಳೆಯತನ ಮತ್ತು ಧರ್ಮನಿಷ್ಠೆಯ ಪರಿಣಾಮವು ಮುಂದಿನವರ ಮೇಲೆ ತಕ್ಷಣವೇ ಪ್ರಭಾವ ಬೀಳುತ್ತಿತ್ತು. ಅವರು ಯಾವಾಗಲೂ ದೈವಿಕ ಧಿಕ್ರ್ ಮತ್ತು ಜಮಾಅತ್ತಿನ ಪುಸ್ತಕಗಳನ್ನು ಅಧ್ಯಾಯನ ಮಾಡುವುದರಲ್ಲಿ ನಿರತರಾಗಿದ್ದರು. ತಮ್ಮ ಮನೆಯ ಸಮೀಪದಲ್ಲಿಯೇ ಜಮಾಅತ್‌ನ ಮಸೀದಿ ನಿರ್ಮಾಣವಾಗಬೇಕು ಎಂಬ ಮಹದಾಸೆ ಅವರಿಗಿತ್ತು. 2014 ರ ಯುದ್ಧದ ನಂತರ, ಅವರು ತಮ್ಮ ಕೈಯಲ್ಲಿ ಒಂದು ಲೇಖನವನ್ನು ಬರೆದಿದ್ದಾರೆ, ಅದರಲ್ಲಿ ಅವರು ಸಮಾಧಿಗಳಿಗೆ ಬಾಂಬ್ ಹಾಕುವ ಮತ್ತು ಅವರ ಶಾಸನಗಳು ಮತ್ತು ಕಲ್ಲುಗಳು ಅಲ್ಲಲ್ಲಿ ಅಲ್ಲಲ್ಲಿ ಹರಡುವ ದಿನ ಬರುತ್ತದೆ ಎಂದು ಬರೆದಿದ್ದಾರೆ. ನಂತರ ನಿಖರವಾಗಿ ಅದೇ ಸಂಭವಿಸಿತು. ಕಷ್ಟಗಳು ಸುತ್ತುವರಿದಿದ್ದರೂ, ಅವರು ಯಾವಾಗಲೂ ನಗುವಿನೊಂದಿಗೆ ಎಲ್ಲರನ್ನು ಭೇಟಿಯಾಗುತ್ತಿದ್ದರು. ಅವರು ತುಂಬಾ ಉದಾರ, ಬುದ್ಧಿವಂತ ಮತ್ತು ಇತರರ ಆಲೋಚನೆಗಳನ್ನು ಬಹಳ ಬೇಗ ತಿಳಿದುಕೊಳ್ಳುತ್ತಿದ್ದರು.

ಡಾ. ಯೂಸುಫ್ ಸಾಃಇಬ್ ಹೇಳುತ್ತಾರೆ: ನನ್ನ ಸಹೋದರ ಅಬು ಹಲ್ಮಿ ಅತ್ಯಂತ ಪ್ರಾಮಾಣಿಕ ಮತ್ತು ನಿಷ್ಠಾವಂತ ಅಹ್ಮದಿಯಾಗಿದ್ದರು. ಅವರು ಅಹ್ಮದಿಯಾಗುವ ಮುಂಚೆಯೇ, ಅವರ ಆಲೋಚನೆಗಳು ಮತ್ತು ವ್ಯವಹಾರಗಳು ಅಹ್ಮದೀಯರದ್ದಾಗಿದ್ದವು. ಆದುದರಿಂದ ಜಮಾಅತ್‌ನ ವಿಷಯ ತಿಳಿದ ಕೂಡಲೇ ಅವರು ಬೈಅತ್ ಮಾಡಿದರು. ಬೈಅತ್‌ನ ನಂತರ, ವಿದ್ವಾಸರು ಮತ್ತು ತಮ್ಮ ಸುತ್ತಮುತ್ತಲಿನ ಜನರೊಂದಿಗೆ ಜಮಾಅತ್‌ನ ಬಗ್ಗೆ ಮಾತನಾಡುತ್ತಿದ್ದರು, ಇದರಿಂದಾಗಿ ಅವರು ತಮ್ಮ ನಿಕಟ ಸ್ನೇಹಿತರಿಂದ ಸಾಕಷ್ಟು ವಿರೋಧ ಮತ್ತು ನೋವನ್ನು ಅನುಭವಿಸಿದರು. ತಮ್ಮ ವೃದ್ಧಾಪ್ಯದಲ್ಲಿ ಅವರು ಊರುಗೋಲುಗಳ ಸಹಾಯದಿಂದ ನಡೆಯುತ್ತಿದ್ದರು ಮತ್ತು ಶುಕ್ರವಾರ ಮತ್ತು ಜಲ್ಸಗಳಿಗೆ ಹಾಜರಾಗಲು ಮೊದಲಿಗರಾಗಿದ್ದರು, ಆದರೂ ಅವರು ದಾರಿಯಲ್ಲಿ ಎದುರಾಳಿಗಳಿಂದ ಬಹಳ ನೋವು ಮತ್ತು ಅಪಾಯವನ್ನು ಎದುರಿಸಿದರು. ಬಡವರಾದರೂ ಇತರರಿಗಿಂತ ಮೊದಲು ಚಂದ ನೀಡುತ್ತಿದ್ದರು. ಮನುಕುಲದ ಎಲ್ಲಾ ಸಮಸ್ಯೆಗಳಿಗೆ ಜಮಾಅತ್ ಮತ್ತು ಅದರ ಚಿಂತನೆಗಳು ಇಡೀ ಜಗತ್ತಿನಲ್ಲಿ ಚಾಲ್ತಿಯಲ್ಲಿರಲಿ ಎಂದು ಅವರು ಹಾರೈಸಿದರು. ಅಲ್ಲಿ ಮಸೀದಿ ಮತ್ತು ಜಮಾತ್ ಕೇಂದ್ರವನ್ನು ನಿರ್ಮಿಸಲು ಅವರು ತಮ್ಮ ಮನೆ ಮತ್ತು ತುಂಡು ಭೂಮಿಯನ್ನು ಜಮಾತ್‌ಗೆ ನೀಡಲು ಉದ್ದೇಶಿಸಿದರು, ಆದರೆ ವಿರೋಧಿಸಿದ ಸಂಬಂಧಿಕರು ಅವರನ್ನು ತಡೆದರು. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳನ್ನು ಸಹ ಅವರ ದುಆಗಳ ವಾರಸುದಾರರನ್ನಾಗಿ ಮಾಡಲಿ. ಅವರ ಮಕ್ಕಳು ಮತ್ತು ಬಂಧುಗಳು ಅಹ್ಮದಿಯ್ಯತ್ ಎಂಬ ನೈಜ ಇಸ್ಲಾಮನ್ನು ಮನವರಿಕೆ ಮಾಡುವವರಾಗಲಿ ಹಾಗೂ ಶಾಂತಿ ಮತ್ತು ಸಮಾಧಾನವನ್ನು ನೋಡುವವರಾಗಲಿ. ಅಲ್ಲಾಹನು ಅವರ ಪ್ರದೇಶಗಳಲ್ಲಿ ಶಾಂತಿ ಸ್ಥಾಪಿಸಲಿ, ದೌರ್ಜನ್ಯಗಾರರ ಕೈಗಳನ್ನು ತಡೆಯಲಿ ಮತ್ತು ದೌರ್ಜನ್ಯವನ್ನು ಕೊನೆಗೊಳಿಸಲಿ.

ಇಸ್ರೇಲ್ ಈಗ ಲೆಬನಾನಿನ ಗಡಿ ಪ್ರದೇಶದಲ್ಲೂ ಹಿಝ್‌ಬುಲ್ಲಾಹ್‌ದ ವಿರುದ್ಧವೂ ಯುದ್ಧದಲ್ಲಿ ತೊಡಗಿದೆ. ಇದರಿಂದ ಸ್ಥಿತಿ ಇನ್ನಷ್ಟು ಹಾಳಾಗುವುದು. ಅದೇ ರೀತಿಯಲ್ಲಿ ಅಮೇರಿಕ ಮತ್ತು ಬ್ರಿಟನ್ ಹೌಸಿ ಯಮನಿ ಗೋತ್ರಗಳ ವಿರುದ್ಧ ಯುದ್ಧದಲ್ಲಿ ತೊಡಗಿಕೊಂಡಿವೆ. ಈ ಎಲ್ಲ ಸಂಗತಿಗಳು ಯುದ್ಧವನ್ನು ಇನ್ನಷ್ಟು ವಿಸ್ತಾರಗೊಳಿಸುತ್ತಿವೆ. ಜಾಗತಿಕ ಯುದ್ಧದ ಲಕ್ಷಣಗಳು ಬಹಳ ಸಮೀಪವಾಗಿ ಕಾಣುತ್ತಿವೆ ಎಂದು ಈಗ ಅನೇಕ ಅಂಕಣಗಾರರು ಬರೆದಿರುವರು ಮತ್ತು ಬರೆಯುತ್ತಿದ್ದಾರೆ. ಆದ್ದರಿಂದ ದುಆಗಳ ಬಹಳ ಅಗತ್ಯವಿದೆ. ಅಲ್ಲಾಹನು ಮನುಷ್ಯರಿಗೆ ಬುದ್ಧಿ ಮತ್ತು ವಿವೇಕವನ್ನು ದಯಪಾಲಿಸಲಿ.

ಇನ್ನೊಂದು ಉಲ್ಲೇಖವೆಂದರೆ ಅಮತುನ್ನಸೀರ್ ಝುಫರ್ ಸಾಹಿಬಾ ಅವರು ಹೈದರ್ ಅಲಿ ಝುಫರ್ ಸಾಹಿಬ್ ಮುರಬ್ಬಿ ಸಿಲ್‌ಸಿಲಾ ಜರ್ಮನಿ ಅವರ ಧರ್ಮಪತ್ನಿಯಾಗಿದ್ದರು. ಕಳೆದ ಕೆಲವು ದಿನಗಳ ಹಿಂದೆ ಅವರು ನಿಧನಹೊಂದಿದರು **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಅವರು ಮೂಸಿಯಾ ಆಗಿದ್ದರು. ಪತಿಯನ್ನು ಹೊರತುಪಡಿಸಿ ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ. ಅವರ ಅಜ್ಜ ಹಝ್ರತ್ ಚೌಧರಿ ಅಮಿನುಲ್ಲಾ ಸಾಹಿಬ್(ರ) ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಹಾಬಿಯಾಗಿದ್ದರು. ಹೈದರ್ ಅಲೀ ಝುಫ'ರ್ ಸಾಹಿಬ್ ಹೇಳುತ್ತಾರೆ: ನಾನು ಮುರಬ್ಬಿಯಾಗಿರುವಾಗ, ಫೀಲ್ಡ್‌ನಲ್ಲಿದ್ದೆ, ಸುಮಾರು ಹನ್ನೆರಡು ವರ್ಷಗಳಿಂದ ಬೇರೆ ಬೇರೆ ಸಮಯದಲ್ಲಿ ನನ್ನಿಂದ ಬೇರ್ಪಟ್ಟಿದ್ದರು, ಆದರೆ ಅವರು ಯಾವುದೇ ದೂರು ನೀಡಲಿಲ್ಲ ಮತ್ತು ಒಮ್ಮೆಯೂ ಅವರು ಎಂದೂ ತೊಂದರೆ ಆಗುತ್ತಿದೆ ಎಂದು ಬರೆಯಲಿಲ್ಲ. ಎಂದಾದರು ಯಾವುದಾದರು ತೊಂದರೆ ಅನುಭವಿಸಿದ್ದು ನನಗೆ ತಿಳಿದಾಗ ನಾನು ಅವರಿಗೆ ಏಕೆ ನನಗೆ ತಿಳಿಸಲಿಲ್ಲ ಎಂದು ಕೇಳಿದಾಗ ಅದಕ್ಕೇ ಅವರು ನೀವು ಕ್ರೀಯಾಕ್ಷೇತ್ರದಲ್ಲಿದ್ದೀರಿ ನಿಮಗೆ ಯಾವುದೇ ರೀತಿಯ ಅಡಚಣೆಯಾಗಬಾರದು ಎಂದು ಹೇಳುತ್ತಿದ್ದರು. ಅವರು ಫ್ರಾಂಕ್‌ಫರ್ಟ್‌ನಲ್ಲಿರುವ ಬೈತುಸ್ಸುಬೂಹ್ ಜಮಾಅತ್ತಿನ ಅಧ್ಯಕ್ಷೆಯೂ ಆಗಿದ್ದರು. ಖಿಲಾಫತ್ ಜುಬಿಲಿ ವರ್ಷದಲ್ಲಿ, ಅವರು ಫ್ರಾಂಕ್ಫರ್ಟ್‌ನಲ್ಲಿ ಅವರಿಗೆ ಸದರ್ ಲಜ್ನಾರಾಗಿ ಸೇವೆ ಸಲ್ಲಿಸುವ ಅವಕಾಶವನ್ನು ಪಡೆದರು. ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ

ಅವರು ನಮಾಝ್ ನಿರ್ವಹಣೆಯಲ್ಲಿ, ಉಪವಾಸ ಅನುಷ್ಠಾನದಲ್ಲಿ ಬಹಳ ಕಡ್ಡಾಯುವಾಗಿದ್ದರು. ತಹಜ್ಜುದ್ ನಮಾಝ್ ನಿಯಮಿತವಾಗಿ ನಿರ್ವಹಿಸುತ್ತಿದ್ದರು. ಪವಿತ್ರ ಖುರ್‌ಆನ್ ಅನ್ನು ನಿಯಮಿತವಾಗಿ ಪಠಿಸುತ್ತಿದ್ದರು, ಸಾಕಷ್ಟು ದಾನವನ್ನು ನೀಡಿದರು ಮತ್ತು ಸಮಯಕ್ಕೆ ಚಂದಗಳನ್ನು ಪಾವತಿಸುತ್ತಿದ್ದರು. ದಿವಂಗತರ ಮೇಲೆ ಸರ್ವಶಕ್ತನಾದ ಅಲ್ಲಾಹನು ಕರುಣೆ ಮತ್ತು ಮಗ್‌ಫಿರತ್ ಅನ್ನು ನೀಡಲಿ.

ಮುಂದಿನ ಉಲ್ಲೇಖವು ಹಬೀಬುಲ್ಲಾ ಕಾಹ್ಲೂನ್ ಸಾಹಿಬ್ ಘಟ್ಯಾಲಿಯಾಂ ಅವರ ಧರ್ಮ ಪತ್ನಿ ನಸೀಮ್ ಅಖ್ತರ್ ಸಾಹಿಬ ಅವರದ್ದಾಗಿದೆ. ಅವರು ಇತ್ತೀಚಿನ ದಿನಗಳಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಅವರು ಮೂಸಿಯಾ ಆಗಿದ್ದರು. ವಸಿಯ್ಯತ್‌ನ ಎಲ್ಲಾ ಖಾತೆಗಳು ನಿಧನವಾಗುವವರೆಗೂ ಪೂರ್ಣಗೊಂಡಿದ್ದವು. ಆಸ್ತಿಯ ಒಂದು ಭಾಗವನ್ನು ಅವರ ಜೀವಿತಾವಧಿಯಲ್ಲಿಯೇ ಪಾವತಿಸಿದ್ದರು. ಪತ್ನಿಯನ್ನು ಹೊರತುಪಡಿಸಿ ಆರು ಪುತ್ರರು ಮತ್ತು ಇಬ್ಬರು ಪುತ್ರಿಯನ್ನು ಅಗಲಿದ್ದಾರೆ. ನಿಮ್ಮ ಜೀವಿತಾವಧಿಯಲ್ಲಿಯೇ ಓರ್ವ ಪುತ್ರಿ ನಿಧನ ಹೊಂದಿದ್ದಳು. ಅವರ ಮಕ್ಕಳನ್ನು ಸಹ ಬಹಳ ಪ್ರೀತಿಯಿಂದ ಇರಿಸಿದ್ದರು ಮತ್ತು ಶಿಕ್ಷಣವನ್ನು ನೀಡಿದ್ದರು. ನಾಲ್ವರು ಪುತ್ರರು ವಾಖಿಫೀನೆ ಝಿಂದಗೀ ಆಗಿದ್ದಾರೆ. ಅವರ ಪುತ್ರರಲ್ಲಿ ಒಬ್ಬರಾದ ನವೀದ್ ಆದಿಲ್ ಸಾಹಿಬ್ ಅವರು ಲೈಬೀರಿಯಾದಲ್ಲಿ ಮುರಬ್ಬಿಯಾಗಿ ಜಮಾಅತ್ತಿನ ಉಸ್ತುವಾರಿ ಮಿಷನರಿಯಾಗಿದ್ದಾರೆ ಮತ್ತು ಕ್ರಿಯಾ ಕ್ಷೇತ್ರದಲ್ಲಿದ್ದ ಕಾರಣ ಅವರ ತಾಯಿಯ ಜನಾಝದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಎರಡನೇ ಖಲೀಫತ್ ಅವಧಿಯಲ್ಲಿ ಬೈಅತ್ ಮಾಡಿದ ನಿಮ್ಮ ತಂದೆ ಮೌಲಾ ಭಕ್ಷ್ ಸಾಹಿಬ್ ಅವರ ಮೂಲಕ ನಿಮ್ಮ ಕುಟುಂಬದಲ್ಲಿ ಅಹ್ಮದೀಯತ್ ಆಗಮಿಸಿತು ಎಂದು ಹೇಳಲಾಗುತ್ತದೆ. ಅವರ ಧಾರ್ಮಿಕ ಜ್ಞಾನ ಉತ್ತಮವಾಗಿತ್ತು. ಕೆಲವೊಮ್ಮೆ ಸಂದರ್ಶಕರು ನೀವು ಎಷ್ಟು ಶಿಕ್ಷಣವನ್ನು ಹೊಂದಿದ್ದೀರಿ ಎಂದು ಕೇಳುತ್ತಿದ್ದರು, ಆದರೆ ಲೌಕಿಕ ಶಿಕ್ಷಣವು ತುಂಬಾ ಸಾಧಾರಣವಾಗಿತ್ತು. ತನ್ನ ಗೌರವಾನ್ವಿತ ತಂದೆಯೇ ಕಾರಣ ಎಂದು ಅವರು ಧಾರ್ಮಿಕ ಜ್ಞಾನದ ಬಗ್ಗೆ ಆಗಾಗ್ಗೆ ಹೇಳುತ್ತಿದ್ದರು, ಏಕೆಂದರೆ ಅವರು ಮಸೀದಿಯಲ್ಲಿ ನೀಡಿದ ದರ್ಸ್ ಅನ್ನು ಕೇಳಿ ಮನೆಗೆ ಬಂದು ನಮಗೆ ಹೇಳುತ್ತಿದ್ದರು. ಮನೆಯಲ್ಲಿ ಈ ರೀತಿಯ ಚರ್ಚೆ ನಡೆಯುತ್ತಿದ್ದರೆ ಪೋಷಕರ ಪ್ರಭಾವವು ಮಕ್ಕಳ ಮೇಲೆ ಹೆಚ್ಚಿರುತ್ತದೆ. ಅವರು ಜಮಾತ್ ಮತ್ತು ಖಿಲಾಫತ್ ಬಗ್ಗೆ ಅಪಾರ ಪ್ರೀತಿಯನ್ನು ಹೊಂದಿದ್ದರು, ಅವರು ತುಂಬಾ ನಿರ್ಭೀತರು ಮತ್ತು ಧಾರ್ಮಿಕ ಗೌರವವನ್ನು ಹೊಂದಿದ್ದರು. ಜಮಾತ್ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ವಿರುದ್ಧ ಯಾವುದೇ ರೀತಿಯ ಮಾತನಾಡುವುದನ್ನು ಅವರು ಸಹಿಸುತ್ತಿರಲಿಲ್ಲ. ಅವರು ನಮಾಝ್‌ಗಳನ್ನು ನಿಯಮಿತವಾಗಿ ನಿರ್ವಹಿಸುತ್ತಿದ್ದರು, ತಹಜ್ಜುದ್ ನಮಾಝ್, ಎತಿಕಾಫ್‌ನಲ್ಲಿಯೂ ನಿಯಮಿತವಾಗಿ ಕುಳಿತುಕೊಳ್ಳುತ್ತಿದ್ದರು. ರಂಜಾನ್ ದಿನಗಳಲ್ಲಿ, ಅವರು ಪವಿತ್ರ ಖುರ್‌ಆನ್‌ನ ಮೂರು ಅಥವಾ ನಾಲ್ಕು ಬಾರಿ ಪೂರ್ಣಗೊಳಿಸುತ್ತಿದ್ದರು. ನಡೆಯುವಾಗ ದುರೂದ್ ಶರೀಫ್ ಮತ್ತು ಧಿಕ್ರ್ ಇಲಾಹಿ ಪಠಿಸುತ್ತಿದ್ದರು. ಒಮ್ಮೆ ಹಠಾತ್ ಬಿದ್ದ ಕಾರಣ ಕಾಲು ಮುರಿದುಕೊಂಡಿತು. ಇದನ್ನು ಬರೆಯುವವರು ಅವರ ಪುತ್ರ ಆದಿಲ್ ಸಾಹಿಬ್ ಆಗಿದ್ದಾರೆ ಅವರು ಮುರಬ್ಬಿಯಾಗಿದ್ದಾರೆ ಅವರು ಹೇಳುತ್ತಾರೆ: ಆ ಸಮಯದಲ್ಲಿ ತನ್ನ ಕಿರಿಯ ಸಹೋದರ ಅಲ್ಲಿಗೆ ಹೋಗಿದ್ದರು ಮತ್ತು ಅವರು ಹಿಂತಿರುಗುತ್ತಿದ್ದಾಗ, ಆ ದಿನ ಅವರು ಬಿದ್ದು ಕಾಲು ಮುರಿದುಕೊಂಡರು, ಆದ್ದರಿಂದ ಅವರು ನೀನು ನಿನ್ನ ಕರ್ತವ್ಯಕ್ಕೆ ಹೋಗು ಎಂದು ಅವರಿಗೆ ಹೇಳಿದರು. ಮತ್ತು ಹತ್ತಿರದ ಇನ್ನೊಂದು ಹಳ್ಳಿಯಿಂದ ತನ್ನ ಅಳಿಯನನ್ನು ಕರೆದು ಅವರೊಂದಿಗೆ ಆಸ್ಪತ್ರೆಗೆ ಹೋದರು ಮತ್ತು ಮಗನಿಗೆ ಹೇಳಿದಳು ನಿನ್ನ ಕರ್ತವ್ಯ ಏನೆಂದರೆ ನೀನು ತಕ್ಷಣ ಧರ್ಮ ಸೇವೆಗೆ ಹೋಗಬೇಕು.

ನವೀದ್ ಆದಿಲ್ ಸಾಹಿಬ್ ಹೇಳುತ್ತಾರೆ: ಏಳು ವರ್ಷಗಳ ನಂತರ ರಜೆಯ ಮೇಲೆ ಹೋಗಿದ್ದೆ. ಅವರನ್ನು ಭೇಟಿಯಾದಾಗ ಜೀವನ ಮತ್ತು ಸಾವು ಅಲ್ಲಾಹನ ಕೈಯಲ್ಲಿದೆ ಎಂದು ಸಲಹೆ ನೀಡಿದರು. ಯಾವಾಗ ಸಮಯ ಬರುತ್ತದೆ ಎಂದು ಯಾರಿಗೂ ತಿಳಿದಿಲ್ಲ. ಆದ್ದರಿಂದ, ಅಂತಹ ಸಮಯ ಬಂದರೆ, ನೀವು ನಿಮ್ಮ ಕರ್ತವ್ಯವನ್ನು ಬಿಡಬಾರದು. ನೀವು ಇರುವ ಸ್ಥಳದಲ್ಲಿಯೇ ಇರಿ. ಆದ್ದರಿಂದ, ಅವರು ತಮ್ಮ ಕೇಂದ್ರದಲ್ಲಿದ್ದರು ಮತ್ತು ಅವರ ತಾಯಿಯ ಜನಾಝದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ.

ಮುಂದಿನ ಉಲ್ಲೇಖವು ರಶೀದ್ ಅಹ್ಮದ್ ಝಮೀರ್ ಸಾಹಿಬ್ ಬಶೀರಾಬಾದ್ ಅವರ ಧರ್ಮಪತ್ನಿಯಾದ ಮುಬಾರಕ ಬೇಗಂ ಸಾಹಿಬಾ ಅವರದ್ದಾಗಿದೆ. ಇವರು ಕೂಡ ಕಳೆದ ಕೆಲವು ದಿನಗಳ ಮುಂಚೆ ನಿಧನಹೊಂದಿದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಅವರ ಕುಟುಂಬದಲ್ಲಿ ಅಹ್ಮದೀಯತ್ ಅವರ ತಂದೆ ಬಹವಲ್ ಹಕ್ ಸಾಹಿಬ್ ಅವರ ಮೂಲಕ ಬಂದಿತು. ಅವರು 1948 ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಅಲ್-ಸಾನಿ(ರ) ರವರ ಕೈ ಮೇಲೆ ಬೈಅತ್ ಮಾಡಿದರು. ಅವರು ಬಹಳಷ್ಟು ಗುಣಲಕ್ಷಣಗಳನ್ನು ಹೊಂದಿದ್ದರು. ಐದು ಹೊತ್ತಿನ ನಮಾಝ್‌ಅನ್ನು ನಿಯಮಿತವಾಗಿ ನಿರ್ವಹಿಸುವವರಾಗಿದ್ದರು, ತಹಜ್ಜುದ್ ನಿರ್ವಹಿಸುವವರು, ನಿಸ್ವಾರ್ಥರಾಗಿ ಜಮಾಅತ್ತಿನ ಸೇವೆ ಮಾಡುತ್ತಿದ್ದರು. ಹಲವಾರು ಜಮಾಅತ್ತಿನ ಹುದ್ದೆಗಳನ್ನು ಹೊಂದಿದ್ದರು. ಅವರಿಗೆ ಸೇವೆ ಮಾಡಲು ಅನುಗ್ರಹ ಪಡೆದರು. ಲಜ್ನಾದ ಅಧ್ಯಕ್ಷರಾಗಿದ್ದರು. ಸಾಮಾನ್ಯವಾಗಿ ಇಡೀ ಜೀವನವೇ ಜಮಾಅತ್ತಿನ ಸೇವೆಯಲ್ಲಿಯೇ ಕಳೆದಿದ್ದರು. ನೂರಾರು ಹುಡುಗ ಹುಡುಗಿಯರಿಗೆ ಪವಿತ್ರ ಖುರ್‌ಆನ್ ಕಲಿಸಿದರು. ಅವರು ಪರದೆಯ ಬಗ್ಗೆ ತುಂಬಾ ಯೋಚಿಸುತ್ತಿದ್ದರು. ಹೆಣ್ಣುಮಕ್ಕಳು ಕೂಡ ಪರದ ಧರಿಸುವಂತೆ ಸಲಹೆ ನೀಡಿದರು. ಸೇವಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಬಡವರು ಮತ್ತು ವಿಧವೆಯರ ಅಗತ್ಯಗಳನ್ನು ನೋಡಿಕೊಳ್ಳುತ್ತಿದ್ದರು. ಅವರು ಅನೇಕ ಬಡ ಮತ್ತು ಅನಾಥ ಹುಡುಗಿಯರ ಮದುವೆಗೆ ಸಹಾಯ ಮಾಡಿದರು. ಅನೇಕ ಹುಡುಗಿಯರಿಗೆ ಹೊಲಿಗೆ ಮತ್ತು ಕಸೂತಿ ಕಲಿಸಿದರು. ಪ್ರತಿ ಶುಕ್ರವಾರ, ಶುಕ್ರವಾರದ ಸಮಯಕ್ಕಿಂತ ಎರಡು ಗಂಟೆಗಳ ಮೊದಲು, ಅವರು ಮಸೀದಿಗೆ ಹೋಗಿ ಮಹಿಳೆಯರ ಪ್ರದೇಶವನ್ನು ಸ್ವತಃ ಸ್ವಚ್ಛಗೊಳಿಸುತ್ತಿದ್ದರು ಮತ್ತು ನಂತರ ನವಾಫಿಲ್ ನಮಾಝುನ್ನು ನಿರ್ವಹಿಸುತ್ತಿದ್ದರು. ಅವರು ತುಂಬಾ ಪ್ರಾಮಾಣಿಕರಾಗಿದ್ದರು. ಅವರ ಪ್ರಾಮಾಣಿಕತೆಯಿಂದಾಗಿ ಅನೇಕ ಮಹಿಳೆಯರು ತಮ್ಮ ಚಿನ್ನಾಭರಣ ಮತ್ತು ನಗದನ್ನು ಅಮಾನತ್ ಆಗಿ ಇರಿಸುತ್ತಿದ್ದರು. ಅವರು ಯಾರೊಂದಿಗೂ ಜಗಳವಾಡಲಿಲ್ಲ. ಅನುಚಿತವಾಗಿ ವರ್ತಿಸಲಿಲ್ಲ. ಅವರು ತುಂಬಾ ಉನ್ನತ ನೈತಿಕತೆಯನ್ನು ಹೊಂದಿದ್ದರು. ಅಲ್ಲಾಹನ ಅನುಗ್ರಹದಿಂದ ಮೂಸಿಯಾಗಿದ್ದರು. ಅವರು ಸ್ವತಃ ವಸಿಯ್ಯತ್ ಮಾಡಿದಾಗ ತಮ್ಮ ಪುತ್ರಿಯರನ್ನು ಸಹ ವಸಿಯ್ಯತ್ ಮಾಡಿಸಿದರು. ಅದೇ ರೀತಿ ಹಳ್ಳಿಯ ಅನೇಕ ಮಹಿಳೆಯರನ್ನೂ ವಸಿಯ್ಯತ್ ವ್ಯವಸ್ಥೆಯಲ್ಲಿ ಸೇರಿಸಿದರು. ಪತಿಯನ್ನು ಹೊರತುಪಡಿಸಿ, ಅವರು ಒಬ್ಬ ಪುತ್ರ ಮತ್ತು ಐದು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ. ಮಾನ್ಯ ಉಸ್ಮಾನ್ ಅಹ್ಮದ್ ಸಾಹಿಬ್ ಮುರಬ್ಬಿ ಸಿಲ್‌ಸಿಲಾ ರಕೀಮ್ ಪ್ರೆಸ್ ಸೆರಾ ಲಿಯೋನ್ ಮತ್ತು ಮಾನ್ಯ ಸಾದತ್ ಅಹ್ಮದ್ ಸಾಹಿಬ್ ಮುರಬ್ಬಿ ಸಿಲ್‌ಸಿಲಾ ಬುರ್ಕಿನಾ ಫಾಸೊ ಅವರ ಅತ್ತೆಯಾಗಿದ್ದರು ಮತ್ತು ಅವರು ಇಬ್ಬರು ಪುತ್ರಿಯರನ್ನು ಮುರಬ್ಬಿಗಳಿಗೆ ವಿವಾಹ ಮಾಡಿದ್ದಾರೆ ಅವರ ಇಬ್ಬರು ಪುತ್ರಿಯರು ತಾಯಿ ನಿಧನಗೊಂಡಾಗ ಜನಾಝದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಅವರು ತಮ್ಮ ಸೇವೆಯ ಸ್ಥಳದಲ್ಲಿದ್ದರು. ಅವರ ಪುತ್ರಿ ಆಸಿಫಾ ಸಾಹಿಬ ಹೇಳುತ್ತಾರೆ: ನನ್ನ ಪತಿ ಉಸ್ಮಾನ್ ಅಹ್ಮದ್ ಸಾಹಿಬ್ ಅವರೊಂದಿಗೆ ಸೆರಾ ಲಿಯೋನ್‌ನಲ್ಲಿ ಸೇವೆ ಸಲ್ಲಿಸಲು ನನಗೆ ಅವಕಾಶ ಲಭಿಸುತ್ತಿದೆ. ಕ್ರಿಯಾ ಕ್ಷೇತ್ರದಲ್ಲಿದ್ದ ನನಗೆ ನನ್ನ ತಾಯಿಯ ಜನಾಝ ಮತ್ತು ತದ್‌ಫೀನ್‌ನಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಅದೇ ರೀತಿ, ನನ್ನ ತಂಗಿ ಮರ್ಯಮ್ ಬುಶ್ರಾ ಕೂಡ ಬುರ್ಕಿನಾ ಫಾಸೊದಲ್ಲಿದ್ದಾರೆ ಮತ್ತು ಅವರಿಗೂ ಜನಾಝದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಸರ್ವಶಕ್ತನಾದ ಅಲ್ಲಾಹನು ಅವರಿಗೆ ತಾಳ್ಮೆ ಮತ್ತು ಧೈರ್ಯವನ್ನು ನೀಡಲಿ ಮತ್ತು ದಿವಂಗತರಿಗೆ ಮಗ್‌ಫಿರತ್ ಮತ್ತು ಕರುಣೆಯನ್ನು ನೀಡಲಿ. ಅವರ ಪ್ರಾರ್ಥನೆಗಳು ಅವರ ಮಕ್ಕಳ ಪರವಾಗಿ ಪೂರೈಸಲಿ.

...*...*...*...

*(ಪುಟ ಸಂಖ್ಯೆ 23ರ ಉಳಿದ ಭಾಗ)*

**ಪ್ರಶ್ನೆ:** ನೀವು ಎಂದಾದರೂ ಸಾಮಾನ್ಯ ಮುಸ್ಲಿಮರನ್ನು ಅಬುಜಹಲ್ ಎಂದು ಕರೆದಿದ್ದೀರಾ ಮತ್ತು ನಿಮ್ಮ ಜಮಾಅತ್ ಅನ್ನು ಅಲ್ಪಸಂಖ್ಯಾತ ಎಂದು ಕರೆದಿದ್ದಾರೆಯೇ?

**ಉತ್ತರ:** ನಾನು ಸಾಮಾನ್ಯ ಮುಸಲ್ಮಾನರನ್ನು ಅಬುಜಹ್ಲ್‌ನ ಪಕ್ಷ ಎಂದು ಘೋಷಿಸಿದ್ದು ಸರಿಯಲ್ಲ ಆದರೆ ನಮ್ಮ ಜಮಾಅತ್ ಸಂಖ್ಯಾಬಲದಲ್ಲಿ ಬಹಳ ಚಿಕ್ಕದಾಗಿದೆ ಎಂಬುದು ಸತ್ಯವಾಗಿದೆ. **(ಫೆಬ್ರವರಿ 21, 1954 ರಂದು ಅಲ್-ಫಝಲ್‌ನಿಂದ ಆಯ್ದುಕೊಳ್ಳಲಾಗಿದೆ)**

...*...*...*...

***ವಿಶೇಶ ಸೂಚನೆ***

"ಬದರ್" ವಾರಪತ್ರಿಕೆಯ ಚಂದಾದಾರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.
ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**

# ಮುಸ್ಲೆಹ್ ಮೌಊದ್ ಅವರ ಹೆಸರು ಫಝ್ಲೆ ಉಮರ್ ಎಂದು ಏಕೆ ನಿಶ್ಚಯಿಸಲಾಯಿತು?

(ಹಝ್ರತ್ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್(ರ))

ಹಝ್ರತ್ ಮುಸ್ಲಿಹ್ ಮೌಊದ್ ರವರ ಒಂದು ಗುರುತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರು ಹೀಗೆ ಹೇಳಿದರು: ಅದನ್ನು ದಿವ್ಯವಾಣಿಯ ಮೂಲಕ ನನ್ನ ಮೇಲೆ ಅವರ ಹೆಸರು ಫಝ್ಲೆ ಉಮರ್ ಎಂದೂ ವ್ಯಕ್ತಪಡಿಸಲಾಯಿತು. ಅಂದರೆ, ಹಝ್ರತ್ ಉಮರ್ ಬಿನ್ ಖತ್ತಾಬ್(ರ) ರಲ್ಲಿ ಕಂಡುಬರುವ ಸದ್ಗುಣಗಳ ಉಪಸ್ಥಿತಿಯಿಂದಾಗಿ ಇದು ಕಾರಣವಾಗಿದೆ. ಅವುಗಳಲ್ಲಿ ಒಂದು ಗುಣ ಹೀಗಿದೆ. ಅದು ಹಝ್ರತ್ ಖಲೀಫತುಲ್ ಮಸೀಹ್ ದ್ವಿತೀಯರನ್ನು ಹೊರತುಪಡಿಸಿ ಪ್ರಪಂಚದ ಯಾವುದೇ ವ್ಯಕ್ತಿಯಲ್ಲಿ ಕಂಡುಬರುವುದಿಲ್ಲ.

**(1)**

ಹಝ್ರತ್ ಪೈಗಂಬರ್(ಸ) ರವರ ದ್ವಿತೀಯ ಆಗಮನ ಕಾಲದಲ್ಲಿ ಹಝ್ರತ್ ಮುಸ್ಲೆಹ್ ಮೌಊದ್(ರ) ರವರು ಹಝ್ರತ್ ಉಮರ್ (ಬಿನ್ ಖತ್ತಾಬ್)(ರ) ಅವರು ಹಝ್ರತ್ ಪೈಗಂಬರ್(ಸ) ರವರ ಮೊದಲ ಕಾಲದಲ್ಲಿ ಎರಡನೆ ಖಲೀಫರಾದಂತೆ ಇವರು ಸಹ ಎರಡನೇ ಖಲೀಫರಾಗಿದ್ದರು. ಈ ಅನುಗ್ರಹ ಅಥವಾ ಮಹಿಮೆ ಎಷ್ಟು ಸಾರ್ವಭೌಮ ಮತ್ತು ಅದ್ವಿತಿಯವಾಗಿದೆ ಎಂದರೆ ಹಝ್ರತ್ ಫಝ್ಲೆ ಉಮರ್ ಹೊರತುಪಡಿಸಿ ಯಾರೂ ಸಹ ಹಝ್ರತ್ ಮಸೀಹ್ ಮೌಊದ್(ಅ) ರವರ ಎರಡನೆ ಖಲೀಫದ ಗೌರವ ಪಡೆದಿರಲಿಲ್ಲ. ಮುಂದೆಯೂ ಈ ಹುದ್ದೆ ಪಡೆಯುವಂತಹ ವ್ಯಕ್ತಿ ಆಗಲಾರನು. ಮೂರನೇ, ನಾಲ್ಕನೇ, ಐದನೇ, ಇಪ್ಪತ್ತನೇ ಯಾವುದೇ ನಂಬರ್‌ನಲ್ಲಿ ಖಲೀಫರು ಈ ಸಂಘಟನೆಯಲ್ಲಿ ಬರಬಹುದಾಗಿದೆ. ಆದರೆ ಬರಲಿಕ್ಕೆ ಸಾಧ್ಯವಿಲ್ಲದ್ದು ಎರಡನೇ ಮಾತ್ರ. ಬೈಅತ್ ಮಾಡದ ಗುಂಪಿಗೆ ಇದು ಅನ್ವಯವಾಗುವುದೇ ಇಲ್ಲ. ಏಕೆಂದರೆ ಅವರು ಖಿಲಾಫತ್ ಅನ್ನು ನಂಬುವುದೇ ಇಲ್ಲ. ಮುಸ್ಲಿಹ್ ಮೌಊದ್ ದಾವೆ ಸಾರಿರುವುದರಲ್ಲಿ ಅಹ್ಮದಿಯಾ ಜಮಾಅತಿನ ಇನ್ನಾವುದೇ ಖಲೀಫರಿಗೆ ಖಿಲಾಫತ್ತಿನ ಎರಡನೆ ಸ್ಥಾನ ದೊರೆತಿದ್ದು ಇಲ್ಲ. ಮತ್ತು ಯಾರೂ ಸಹ ಮುಸ್ಲಿಮ್ ಮೌಊದ್ ಆಗುವ ದಾವೆ ಹೊಂದಲಿಲ್ಲ, ಆದ್ದರಿಂದ ಇದೊಂದು ಎಂತಹ ಸಾರ್ವಭೌಮ ಗುರುತು ಮುಸ್ಲೆಹ್ ಮೌಊದ್(ರ)ರ ಕುರಿತು ವಿವರಿಸಲಾಗಿದೆ ಎಂದರೆ ಅದರಲ್ಲಿ ಯಾವ ಸಂಶಯವೂ ಇಲ್ಲ. ಒಬ್ಬರನ್ನು ಹೊರತುಪಡಿಸಿ ಯಾರೂ ಈ ಹುದ್ದೆಯ ವಾದವನ್ನು ಸಾರಲಿಲ್ಲ. ಈ ಗುಣವಾಚಕ ನಾಮದಿಂದಲೇ ಸಿದ್ಧವಾಗುತ್ತದೆ. ಮುಸ್ಲೆಹ್ ಮೌಊದ್ ಯಾರಾಗಿದ್ದಾರೆಂದು. ಚಿಂತಿಸಿ ನೋಡಿದರೆ ಅದಕ್ಕೆ ನಾಲ್ಕು ಬಲವಾದ ಚಿಹ್ನೆಗಳಿವೆ. (1) ಅವರು ಹಝ್ರತ್ ಮಸೀಹ್ ಮೌಊದ್(ಅ) ರವರ ವಂಶದವರಾಗಿರುವುದು. (2) ಅವರು 9 ವರ್ಷ ಅವಧಿಯೊಳಗೆ ಜನ್ಮ ಹೊಂದಿರುವುದು. (3) ಅವರು ಬಶೀರ್ ಅವ್ವಲ್ ಜನ್ಮ ತಾಳಿದ ನಂತರವೇ ಜನ್ಮವಾಗಿರುವುದು. (4) ಮತ್ತು ಅವರು ಹಝ್ರತ್ ಮಸೀಹ್ ಮೌಊದ್(ಅ) ರವರ ಜಮಾಅತಿ ಎರಡನೇ ಖಲಿಫರಾಗಿರುವುದು.

**(2)**

ಈ ವಿಶಿಷ್ಟ ಗುಣಗಳನ್ನು ಹೊರತುಪಡಿಸಿ ಇನ್ನೂ ಕೆಲವು ವೈಶಿಷ್ಟ್ಯಗಳಿವೆ. ಅದು ಹಝ್ರತ್ ಉಮರ್ (ಬಿನ್ ಖತ್ತಾಬ್)(ರ) ರವರದ್ದಾಗಿವೆ. ಅದು ಹಝ್ರತ್ ಫಝ್ಲೆಉಮರ್(ರ) ಅವರಲ್ಲಿ ವ್ಯಕ್ತವಾಗಿದೆ. ಆದ್ದರಿಂದ ಹೇಗೆ ಹಝ್ರತ್ ಉಮರ್(ರ) ಅವರ ಕಾಲಘಟ್ಟದಲ್ಲಿ ವಿಜಯಗಳೂ ಪ್ರಾಪ್ತಿ ಹೆಚ್ಚಳಗೊಂಡಿತ್ತು. ಮತ್ತು ಇಸ್ಲಾಂ ಧರ್ಮ ಪ್ರಗತಿ ಹೊಂದಿತ್ತು. ಹಲವು ಪುರಸ್ಕೃತ ದೇಶಗಳಲ್ಲಿ ಇಸ್ಲಾಮಿನ ಸೈನ್ಯಗಳು ಮತ್ತು ಪ್ರಚಾರಕರು ತಲುಪಿದ್ದರು. ಅದೇ ರೀತಿಯಲ್ಲಿ ಹಝ್ರತ್ ಫಝ್ಲೆ ಉಮರ್(ರ) ಅವರ ಕಾಲಘಟ್ಟದಲ್ಲೂ ಅಹ್ಮದಿಯತ್ ಹಾಗೂ ಇಸ್ಲಾಮಿನ ಪ್ರಚಾರಕರು ಲೋಕದ ಹಲವು ದೇಶಗಳಲ್ಲಿ ಭೂಮಿಯ ಹೆಚ್ಚಿನ ಭಾಗಗಳಲ್ಲಿ ಹೋಗಿ ತಲುಪಿದ್ದಾರೆ ಮತ್ತು ಈ ಸಂಘಟನೆಯ ಗ್ರಂಥಗಳು, ಪರಿಸ್ಥಿತಿಗಳು ಹಾಗೂ ವಾರ್ತೆ ಪತ್ರಿಕೆಗಳು, ಹಲವು ಪರದೇಶಗಳಲ್ಲಿ ತಲುಪಿರುತ್ತದೆ. ಅಹ್ಮದಿಯತ್ತಿನ ವಿಜಯ, ಗೌರವ, ವೈಶಾಲ್ಯತೆ ಪರಿಚಯದ ಅವಶ್ಯಕತೆ ಇಲ್ಲ. ಅಲ್ಲದೇ ಹುಝೂರ್‌ರ ಜ್ಞಾನ ಜನರಿಗೆ ಅತ್ಯಂತ ಪ್ರಭಾವಿತರನ್ನಾಗಿ ಮಾಡಿದೆ. ಅದೇ ರೀತಿಯಲ್ಲಿ ಹಝ್ರತ್ ಉಮರ್(ರ) ನಿಮಿತ್ತವು ಹಝ್ರತ್ ಪೈಗಂಬರ್(ಸ)ರ ಒಂದು ದಿವ್ಯ ಸ್ವಪ್ನ ಕಂಡಿದ್ದರು. ಒಂದು ಭಾವಿ ಇದೆ. ಅಲ್ಲೊಂದು ಮಡಕೆ ಇಡಲಾಗಿದೆ. ಅಬೂಬಕರ್(ರ) ಅವರು ಒಂದೆರಡು ಮಡಕೆ ದುರ್ಬಳಕೆಯಿಂದ ಬಾವಿಯಿಂದ ತೆಗೆದರು. ಮತ್ತೆ ಆ ಮಡಿಕೆಯು ಸೀಮಿತವಾಯಿತು. ಉಮರ್(ರ) ಅದರಿಂದ ಜನರಿಗೆ ಮತ್ತು ಒಂಟೆಗಳಿಗೆ ಸಾಕಾಗುವಷ್ಟು ನೀರು ತೆಗೆದರು. ಆದ್ದರಿಂದ ಹಝ್ರತ್ ಫಝ್ಲೆ ಉಮರ್(ರ) ಅವರಿಗಿರುವ ಇದು ಎರಡನೇ ಹೋಲಿಕೆ ಆಗಿದೆ.

**(3)**

ಅದೇ ರೀತಿ ಒಂದು ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಹೇಳಿದರು: ನನಗೆ ದಿವ್ಯ ಸ್ವಪ್ನದಲ್ಲಿ ತೋರಿಸಲಾಗಿದೆ, ನಾನು ಹಾಲನ್ನು ಕುಡಿದಿದ್ದೇನೆ. ಎಷ್ಟರಮಟ್ಟಿಗೆ ಎಂದರೆ ನನ್ನ ಉಗುರುಗಳು ಸಹ ಅದರಿಂದ ತೇವಗೊಂಡಿತ್ತು. ಮತ್ತೆ ನಾನು ಆ ಉಳಿದಿರುವ ಹಾಲನ್ನು ಉಮರ್ ಬಿನ್ ಖತ್ತಾಬ್(ರ) ಅವರಿಗೆ ನೀಡಿರುವೆನು. ಸಹಾಬರವರು ಹೇಳಿದರು. ಈ ಸ್ವಪ್ನದ ರಹಸ್ಯವೇನು? ಅದಕ್ಕೆ ಅವರು(ಸ) ಉತ್ತರಿಸಿದರು: ಇದರ ತಾತ್ಪರ್ಯ ಜ್ಞಾನವಾಗಿದೆ. ಆದ್ದರಿಂದ ಯಾವ ರೀತಿ ಹಝ್ರತ್ ಉಮರ್(ರ) ಅವರಿಗೆ ಪ್ರವಾದಿತ್ವದ ಜ್ಞಾನ ಲಭಿಸಿತ್ತು. ಅದೇ ಹಝ್ರತ್ ಫಝ್ಲೆ ಉಮರ್(ರ) ಅವರಿಗೂ ದೊರೆದಿತ್ತು. ಮಿತ್ರರು, ಶತ್ರುಗಳು ಸಹ ಇದನ್ನು ಒಪ್ಪುತ್ತಾರೆ, ಹೆಚ್ಚಿನ ವಿತರಣೆಯ ಅವಶ್ಯಕತೆ ಇಲ್ಲ. ಕೇವಲ ಇಷ್ಟು ನೆನಪಿಟ್ಟರೆ ಸಾಕು. ಹಝ್ರತ್ ಉಮರ್(ರ) ಅವರಿಗಿದ್ದ ಕಾರ್ಯಕ್ಷಮತೆ ಮತ್ತು ಅವರ ಜ್ಞಾನ ನಾವು ಸಂಖ್ಯೆ 2 ಮತ್ತು 3 ರಲ್ಲಿ ವಿವರಿಸಿದ್ದೇವೆ. ಅದೇ ಸ್ಥಿತಿ ಹಝ್ರತ್ ಫಝ್ಲೆ ಉಮರ್(ರ) ಅವರದ್ದಾಗಿತ್ತು. ದೈಹಿಕ ಕಾರ್ಯಕ್ಷಮತೆ ಮತ್ತು ಜ್ಞಾನಶಕ್ತಿ ಎರಡರ ಅವಗತ ಖಾದಿಯಾನಿನಲ್ಲಿ ಎಲ್ಲಿರಿಗೂ ತಿಳಿದ ಮಾತೇ ಆಗಿರುತ್ತದೆ. ಹಝ್ರತ್ ಮಸೀಹ್ ಮೌಊದ್(ಅ) ರವರ ಈ ದಿವ್ಯವಾಣಿಯೂ ಸೂಚಿಸುತ್ತದೆ ಅಂದರೆ ಒಂದು ಸುಪುತ್ರ ನಿನಗೆ ದಯಪಾಲಿಸಲಾಗುವುದು. ಅವನು ಅಸಾಧಾರಣ ಶಕ್ತಿಯುಳ್ಳವನಾಗುವನು ಮತ್ತು ಅವನು ಐಹಿಕ ಜ್ಞಾನ ಹಾಗೂ ಆಧ್ಯಾತ್ಮಿಕ ಜ್ಞಾನದಿಂದ ಅನುಗ್ರಹಿತನಾಗಿರುವನು.

**(4)**

ಹಝ್ರತ್ ಉಮರ್(ರ) ತಮ್ಮ ಈ ವಿಷಯದ ಕುರಿತು ಹೆಮ್ಮೆಪಡುತ್ತಿದ್ದರು. ಅದೇನೆಂದರೆ ಹಝ್ರತ್ ಪೈಗಂಬರ್(ಸ) ರವರ ಮುಂದೆ ವಿಷಯವನ್ನು ಪ್ರಸ್ತುತಪಡಿಸಿದ ನಂತರ ನನ್ನ ಇಚ್ಛೆಯಂತೆ ಪವಿತ್ರ ಖುರ್‌ಆನ್‌ನ ವಚನಗಳು ಅವತರಣಗೊಂಡವು. ಅವುಗಳಲ್ಲಿ ಹಿಜಾಬ್ ಅಂಶವು ಒಂದಾಗಿದೆ. ಹಝ್ರತ್ ಫಝ್ಲೆ ಉಮರ್(ರ) ಅವರ ವಯಸ್ಸು ಹಝ್ರತ್ ಮಸೀಹ್ ಮೌಊದ್(ಅ) ರವರ ಸಮಯದಲ್ಲಿ ಹುಝೂರ್(ಅ) ಅವರಿಗೆ ಸಲಹೆ ನೀಡುವಷ್ಟಂತೂ ಆಗಿರಲಿಲ್ಲ. ಆದರೆ ದಿವ್ಯವಾಣಿ ರೂಪದಲ್ಲಿ ಇಲ್ಲಿಯೂ ಅದರ ವಿವರ ಕಾಣಬಹುದಾಗಿದೆ. ಉದಾಹರಣೆಗೆ ಹಝ್ರತ್ ಮಸೀಹ್ ಮೌಊದ್(ಅ) ರವರಿಗೆ– **ಇನ್ನಿ ಮಅಲ್–ಅಫ್‌ವಾಜಿ ಆತೀಕ ಬಗ್‌ತತನ್** ದಿವ್ಯವಾಣಿ ಆಗಿದೆ. ಈ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ರವರಿಗೆ ಕೇಳಿದಾಗ ಅವರು ಹೇಳಿದರು. ಹೌದು. ಇಂದು ರಾತ್ರಿ ನಿಜವಾಗಿಯೂ ನನಗೆ ಈ ದಿವ್ಯವಾಣಿ ಲಭಿಸಿದೆ. ಆದ್ದರಿಂದ ಯಾವ ರೀತಿ ಹಝ್ರತ್ ಉಮರ್(ರ) ಅವರ ದೈವಿಕ ಅಂತರ್ಜ್ಞಾನ ಹಝ್ರತ್ ಪೈಗಂಬರ್(ಸ) ರವರಿಗೆ ಆದ ದಿವ್ಯವಾಣಿ ರೂಪದಲ್ಲಿ ವ್ಯಕ್ತವಾಗಿದೆ. ಅದೇ ರೀತಿಯಲ್ಲಿ ಹಝ್ರತ್ ಫಝ್ಲು ಉಮರ್(ರ) ಅವರ ಸ್ವಪ್ನ ಹಝ್ರತ್ ಮಸೀಹ್ ಮೌಊದ್(ಅ)ರಿಗೆ ದಿವ್ಯವಾಣಿ ರೂಪದಲ್ಲಿ ವ್ಯಕ್ತವಾಗಿದೆ. ಇದು ನಾಲ್ಕನೇ ಹೋಲಿಕೆಯಾಗಿದೆ.

**(5)**

ಐದನೇ ಹೋಲಿಕೇನೆಂದರೆ ಹಝ್ರತ್ ಉಮರ್(ರ) ಅವರಿಗೆ ಹಝ್ರತ್ ಪೈಗಂಬರ್(ಸ)ರವರು ಐಇಕ ಲೋಕದಲ್ಲೇ ಸ್ವರ್ಗದ ಸುವಾರ್ತೆ ನೀಡಿದ್ದರು. ಅದೇ ರೀತಿಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ರವರೂ ಸಹ ಹಝ್ರತ್ ಫಝ್ಲೆ ಉಮರ್(ರ) ಅವರಿಗೆ ತನ್ನ ಸಂತಾನದಲ್ಲಿರುವ ಕಾರಣ ಸ್ವರ್ಗದ ಸುವಾರ್ತೆ ಇಹಲೋಕದಲ್ಲೇ ನೀಡಿದ್ದರು. ಈ ಕುರಿತು ಹೇಳಿದರು. ಮಖ್ಬರ ಬಹಿಷ್ತಿಯಲ್ಲಿ ಪ್ರವೇಶಿಸುವುದು. ನನ್ನ ಮತ್ತು ನನ್ನ ಸಂತಾನದ ಪೈಕಿ ಅಲ್ಲಾಹನು ಮೀಸಲಾಗಿರಿಸಿದ್ದನು.... ಅದಕ್ಕೆ ಆತಂಕ ವ್ಯಕ್ತಪಡಿಸುವವನು ಕಪಟ ವಿಶ್ವಾಸಿಯಾಗಿರುವನು. ಅಂದರೆ ನನ್ನ ಸಂತಾನ ಮತ್ತು ನನ್ನ ಪತ್ನಿಗೆ ಸರ್ವಶಕ್ತನಾದ ಅಲ್ಲಾಹನು ಸ್ವರ್ಗ ನೀಡುವನು. ನನಗೆ ಅವರಿಗೆ ಸ್ವರ್ಗವಾಸಿಯಾಗಿರುವರು ಎಂದು ಸುವಾರ್ತೆ ದಯಪಾಲಿಸಿರುವನು. ಅದಲ್ಲದೆ ವಿಶೇಷ ರೀತಿಯಲ್ಲಿ ಹುಝೂರ್(ಅ) ಅವರಿಗೆ ಸ್ವರ್ಗ ನೀಡುವ ಕುರಿತು ಹಝ್ರತ್ ಫಝ್ಲೆ ಉಮರ್(ರ) ಅವರ ಜನ್ಮವಾಗುವುದಕ್ಕಿಂತ ಮೊದಲೇ ಅಲ್ಲಾಹನಿಂದ ಲಭಿಸಿತ್ತು. ಉದಾಹರಣೆಗೆ ಹೇಳಿದರು: “ಆಗ ಅವನು ತನ್ನ ಆತ್ಮಬಿಂದುವನ್ನು ಆಕಾಶರೋಹಣ ಮಾಡುವನು” ಅಂದರೆ ಮೌಲ್ವಿ ಮಿಸ್ರಿಯ ಹೇಳಿಕೆಗೆ

ವಿರುದ್ಧವಾಗಿ ವಾಗ್ದತ್ತ ಪುತ್ರನ ಪರಿಣಾಮ ಉತ್ತಮವಾಗಿರುವುದು. ಮತ್ತು ಅವನ ಆತ್ಮ ಆಕಾಶದೆಡೆ ಆರೋಹಣವಾಗುವುದು.

(ಈ ಸಂದರ್ಭದಲ್ಲಿ ಒಂದು ಪಿಸುಮಾತು ವಿವರಿಸುವುದು ಅನಿವಾರ್ಯವಾಗಿದೆ. ಪೈಗ್ಹಾಮಿ ಹೇಳುತ್ತಿದ್ದರು. ಇತರರಿಗಂತೂ ಈ ಮಖ್ಬರ ಬಿಹಿಷ್ತ ಆಗಿತ್ತು. ಆದರೆ ಮಸೀಹ್ ಮೌಊದ್ ಮತ್ತು ಅವರ ಕುಟುಂಬಕ್ಕೆ ಇದು ಕೌಟುಂಬಿಕ ಮಬ್ಬರವಾಗಿದೆ. ಏಕೆಂದರೆ ಅವರ ಕಡೆಯಿಂದ ಯಾವುದೇ ರೀತಿಯ ವಸೀಯ್ಯತ್ ಹಣ ದಾಖಲಾಗಿರಲಿಲ್ಲ. ಅದಕ್ಕೆ ಉತ್ತರವಾಗಿ ನೆನಪಿಡಬೇಕು. ಹುಝೂರ್ ಅನ್ವರ್ ರವರು ಮಖ್ಬರದ ಅಡಿಗಲ್ಲು ಹಾಕುವಾಗ ತನ್ನ ಆಸ್ತಿಯಿಂದ ಆ ಸಮಯದ ಪ್ರಕಾರ ಒಂದು ಸಾವಿರ ರೂಪಾಯಿ ಭೂಮಿ ಚಂದಾ ರೂಪದಲ್ಲಿ ಅಂದರೆ ವಸೀಯ್ಯತ್ ನಿಮಿತ್ತ ನೀಡಿದ್ದರು. ಹುಝೂರ್ ರವರಿಗೆ ಸ್ವಯಂ ವಸೀಯ್ಯತ್ ಮಾಡುವ ಅವಶ್ಯಕತೆ ಇರಲಿಲ್ಲ. ಏಕೆಂದರೆ ಅವರಿಗೆ ಎಲ್ಲರೂ ಸ್ವರ್ಗಕ್ಕೆ ಅರ್ಹರೆಂದು ನಂಬುತ್ತಿದ್ದರು. ಒಂದು ಸಾವಿರ ರೂಪಾಯಿಯ ಭೂಮಿ ನಿಜರೂಪದಲ್ಲಿ ತನ್ನ ಪತ್ನಿ ಮಕ್ಕಳಿಗೋಸ್ಕರ ನೀಡಿದ್ದರು.)

**(6)**

ಆರನೇಯ ಹೋಲಿಕೆ ಹಝ್ರತ್ ಉಮರ್(ರ) ಮತ್ತು ಹಝ್ರತ್ ಫಝ್ಲ್ ಉಮರ್(ರ) ಅವರಿಗೆ ಇರುವುದೇನೆಂದರೆ ಅವರ ಇಬ್ಬರ ಗುಣ ಒಂದೇ ರೀತಿಯಾಗಿದ್ದವು. ಹಝ್ರತ್ ಉಮರ್(ರ) ಮತ್ತು ಫಝ್ಲ್ ಉಮರ್(ರ) ಅವರ ಧರ್ಮದ ಬಗ್ಗೆ ಅವರಿಗಿರುವ ಗೌರವ ಮತ್ತು ಹೆಮ್ಮೆಯ ಕುರಿತು ತಿಳಿದವರು ಯಾರಿದ್ದಾರೆ. ಹಝ್ರತ್ ಫಝ್ಲ್ ಉಮರ್(ರ) ಅವರ ಬಗ್ಗೆ ದಿವ್ಯವಾಣಿ ಹೀಗಿದೆ. ಅವರ ಅವತರಣಿಕೆ ಬಹಳ ಶುಭಕರ ಮತ್ತು ದೈವಿಕ ಗೌರವಕ್ಕೆ ಪಾತ್ರವಾಗಿರುವುದು. ಅಲ್ಲದೇ "ಅಲ್ಲಾಹನ ಅನುಗ್ರಹ ಮತ್ತು ಹೆಮ್ಮೆ ಅವರಿಗೆ ಕಲಿಮ ತಮ್‌ಜೀದ್‌ನಿಂದ ಕಳುಹಿಸಿದ್ದಾನೆ."

ಹಝ್ರತ್ ಫಝ್ಲ್ ಉಮರ್(ರ) ಅವರ ಧರ್ಮದ ಬಗ್ಗೆ ಅವರಿಗಿರುವ ಗೌರವ ಹೆಮ್ಮೆಯ ವಿಶಿಷ್ಠ ಗುಣ ಜಮಾಅತ್‌ನ ಎಲ್ಲಾ ಬಾಂಧವರು ತಿಳಿದವರೇ ಆಗಿದ್ದಾರೆ.

**(7)**

ಏಳನೇ ಹೋಲಿಕೆ ಹಝ್ರತ್ ಉಮರ್(ರ) ಅವರ ಜೊತೆ ಹಝ್ರತ್ ಫಝ್ಲ್ ಉಮರ್(ರ) ಅವರಿಗಿರುವುದೇನೆಂದರೆ, ಅವರೂ ಮಹದ್ದಿಸ್ ಆಗಿದ್ದರು ಎಂದರೆ ದಿವ್ಯವಾಣಿ ಪಡೆದವರು ಹುಝೂರ್ ಪರವಾಗಿ ಸರ್ವಶಕ್ತನಾದ ಅಲ್ಲಾಹನು ಹೇಳಿದನು ನಾವು ಅವರಲ್ಲಿ ತನ್ನ ಆತ್ಮವನ್ನು ಇರಿಸುವೆನು. (ಎಂದರೆ ದಿವ್ಯವಾಣಿ.)

ಅದೇ ರೀತಿ ಹಝ್ರತ್ ಉಮರ್(ರ) ಅವರ ಪೈಕಿ ಹಝ್ರತ್ ಪೈಗಂಬರ್(ಸ) ಹೇಳಿದರು. ಸಮುದಾಯದ ಮುಹದ್ದಿಸರ ಹಾಗೆ ಉಮರ್(ರ) ಸಹ ಓರ್ವ ಮುಹದ್ದಿಸ್ ಮತ್ತು ದಿವ್ಯವಾಣಿ ಪಡೆದವರಾಗಿದ್ದಾರೆ. ಆದ್ದರಿಂದ ಹಲವು ವಚನಗಳ ವಿಷಯ ಕುರಿತು ಮುಂಚಿತವಾಗಿಯೇ ಹಝ್ರತ್ ಉಮರ್(ರ) ಅವರ ಹೃದಯದಲ್ಲಿ ಅವತೀರ್ಣಗೊಂಡಿದ್ದವು. ಮತ್ತೆ ಪವಿತ್ರ ಖುರ್‌ಆನ್‌ನಲ್ಲಿ ಸದೃಢವಾಣಿಯ ರೂಪದಲ್ಲಿ ಬಂದವು. ಮತ್ತು ಅವರ ಕೆಲವು ದಿವ್ಯ ಸ್ವಪ್ನಗಳು ಸಹ ಖ್ಯಾತಿ ಪಡೆದಿವೆ. ಅದೇ ಕಾರಣದಿಂದಾಗಿ ಹಝ್ರತ್ ಪೈಗಂಬರ್(ಸ) ಹೇಳಿದ್ದರು. ನನ್ನ ನಂತರ ತಕ್ಷಣವಾಗಿ ನಬಿ ಆಗುವುದಿದ್ದರೆ ಉಮರ್ ಆಗುತ್ತಿದ್ದರು. ಅಥವಾ ನಾನು ಆಗಮಿಸದಿರುತ್ತಿದ್ದರೆ ಉಮರ್ ಆಗಮಿಸುತ್ತಿದ್ದರು. ಇವೆಲ್ಲ ಮಾತುಗಳು ಪ್ರವಾದಿತ್ವದ ಪ್ರಕಾಶ ಮತ್ತು ದಿವ್ಯವಾಣಿ ಹೊಂದುವ ಗುಣಶಕ್ತಿಗೆ ಸಾಕ್ಷಿಯಾಗಿದೆ. ಇದೇ ಮಾತುಗಳನ್ನು ಅಹ್ಮದಿಯಾ ಜಮಾಅತಿನ ಜನರು ಹಝ್ರತ್ ಫಝ್ಲ್ ಉಮರ್(ರ) ಅವರಲ್ಲಿ ಯಾವಾಗಿನಿಂದಲೂ ಕಾಣುತ್ತಿದ್ದಾರೆ. ಒಂದು ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಹೇಳಿದರು: ವ್ಯಕ್ತಿಯೊಬ್ಬನು ತನ್ನ ಆಕಳನ್ನು ತೆಗೆದುಕೊಂಡು ಹೋಗುತ್ತಿದ್ದನು. ಸುಸ್ತಾದ ಕಾರಣ ಅವನು ಸ್ವಯಂ ಆಕಳಿನ ಮೇಲೆ ಸವಾರನಾದನು. ಆಕಳು ಅವನಿಗೆ ಹೇಳಿತು. ನಾವು ಕೃಷಿ ಕೆಲಸಕ್ಕಾಗಿ ಹುಟ್ಟಿದ್ದೇವೆ, ಸವಾರಿಗಾಗಿ ಅಲ್ಲ ಎಂದು. ಸಹಾಬರವರು ಹೇಳಿದರು: ಸುಬ್‌ಹಾನಲ್ಲಾಹ್, ಆಕಳು, ಎತ್ತುಗಳು ಸಹ ಮಾತನಾಡುತ್ತವೆಯೇ? ಆಗ ಹಝ್ರತ್ ಪೈಗಂಬರ್(ಸ) ಹೇಳಿದರು, ನಾನಂತೂ ಈ ಮಾತನ್ನು ನಂಬುತ್ತೇನೆ. ಅಷ್ಟೇ ಅಲ್ಲ ಅಬೂಬಕರ್(ರ) ಮತ್ತು ಉಮರ್(ರ) ಸಹ ಈ ಮಾತನ್ನು ನಂಬುತ್ತಾರೆ. ಅದಾಗ್ಯೂ ಅವರಿಬ್ಬರು ಆ ಸಭೆಯಲ್ಲಿ ಹಾಜರಿರಲಿಲ್ಲ, ಈ ಹದೀಸಿನಿಂದ ತಿಳಿದುಬರುವುದೇನೆಂದರೆ, ಹಝ್ರತ್ ಪೈಗಂಬರ್(ಸ) ಅವರ ದೃಷ್ಟಿಯಲ್ಲಿ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಇಬ್ಬರೂ ದಿವ್ಯಸ್ವಪ್ನ ಕಾಣುವವರಾಗಿದ್ದರು. ಏಕೆಂದರೆ ಇವೆಲ್ಲ ವಿಷಯ ಅಂದರೆ ಆಕಳಿನ ವಿಷಯ ಸ್ವಪ್ನಾಧಾರಿತವಾಗಿತ್ತು. ಅದರ ಸಾಕ್ಷ್ಯವನ್ನು ಬಯಸಿದರೆ, ಒಂದು ಸಂದರ್ಭದಲ್ಲಿ ತನ್ನ ಖಿಲಾಫತ್ ಕಾಲದಲ್ಲಿ ಹಝ್ರತ್ ಉಮರ್(ರ) ಜುಮುಅ ಖುತ್‌ಬ ಓದುತ್ತಾ ಓದುತ್ತಾ -- "ಯಾ ಸಾರಿಯಾ ಅಲ್-ಜಬಲ್, ಯ ಸಾರಿಯಾ ಅಲ್-ಜಬಲ್" ಎಂದು ಹೇಳತೊಡಗಿದರು. ಖುತ್‌ಬ ಆಲಿಸುವವರು ಚಕಿತರಾದರು. ಮತ್ತು ಜುಮುಅ ನಮಾಝ್ ನಂತರ ಈ ಪೈಕಿ ಅವರಿಗೆ(ರ) ಕೇಳಿದರು. ಅದಕ್ಕೆ ಅವರು(ರ) ಹೇಳಿದರು. ನಾನು ಇಸ್ಲಾಮಿ ಸೈನ್ಯವನ್ನು ಯುದ್ಧಭೂಮಿಯಲ್ಲಿ ತುಂಬಾ ಗಂಭೀರ ಸ್ಥಿತಿಯಲ್ಲಿ ಕಂಡೆನು. ಅದರೊಡನೆಯೇ ದೃಶ್ಯವೊಂದನ್ನು ಕಂಡೆನು, ಅವರು ಪರ್ವತದ ಕಡೆ ಹೋಗಿ ಶರಣವಹಿಸಿದರೆ ಪಾರಾಗಬಹುದು. ಆದ್ದರಿಂದ ನಾನು ಸೇನಾಧಿಪತಿಯಾದ ಸಾರಿಯಾ ಅವರಿಗೆ ಹೇಳಿದೆನು, ಪರ್ವತದಲ್ಲಿ ಶರಣಹೋಗಿರಿ, ಸ್ವಲ್ಪವೇ ಸಮಯದ ನಂತರ ಆ ಸೈನ್ಯದ ಜನರು ಮದೀನಾಗೆ ಬಂದಾಗ ಅವರು ವಿವರಿಸತೊಡಗಿದರು. ನಾವು ಶತ್ರುಗಳ ವಶಕ್ಕೆ ಸಿಲುಕಿದ್ದೇವೆ. ಆದರೆ ಒಂದು ಧ್ವನಿ ಕೇಳಿಸಿತು. ಓ ಸಾರಿಯಾ ಪರ್ವತದಲ್ಲಿ ಶರಣ ಹೊಂದಿರಿ. ಆದ್ದರಿಂದ ನಾವು ಆ ಕಡೆ ಹೋದೆವು. ಮತ್ತು ವಿನಾಶದಿಂದ ರಕ್ಷಿಸಲ್ಪಟ್ಟೆವು. ಆದ್ದರಿಂದ ಇದೊಂದು ಸುಪ್ರಸಿದ್ಧ ದಿವ್ಯಸ್ವಪ್ನವಾಗಿದೆ. ಅದು ಹಝ್ರತ್ ಉಮರ್(ರ) ದಿವ್ಯಸ್ವಪ್ನಾದಾರಿಗಳಾಗಿದ್ದರು ಎಂದು ಸಾಬೀತುಪಡಿಸುತ್ತದೆ. ಅದೇ ರೀತಿ ಅಝಾನ್‌ನ ವಾಕ್ಯಗಳು ಸಹ ಅವರ ಮಾಧ್ಯಮವಾಗಿಯೇ ನಮಗೆ ಲಭಿಸಿದೆ. ಆದ್ದರಿಂದ ಅವರು ಸ್ವಯಂ ಮುಹದ್ದಿಸ್, ದಿವ್ಯವಾಣಿಧಾರಕ (ಮುಲ್‌ಹಿಮ್), ಮತ್ತು ದಿವ್ಯ ಸ್ವಪ್ನಾಧಾರಿಗಳಾಗಿದ್ದರು. ಆದ್ದರಿಂದ ಅವರಿಗೆ ಎತ್ತು ಮತನಾಡುತ್ತದೆ ಎಂದು ನಂಬುವುದರಲ್ಲಿ ಏನು ಕಷ್ಟವಿತ್ತು. ಅಥವಾ ಹೌದು ಸಾರ್ವಜನಿಕರಿಗೆ ಈ ವಾತು ನಂಬುವುದು ಸಹಜವಾಗಿಯೂ ಅಸಹಜವಾಗಿತ್ತು.

ಅದೇ ರೀತಿ ನಮ್ಮ ಫಝ್ಲ್ ಉಮರ್(ರ) ಬಾಲ್ಯದಿಂದಲೇ ದಿವ್ಯಸ್ವಪ್ನಾಧಾರಿ, ದಿವ್ಯವಾಣಿಧಾರರಾಗಿದ್ದರು. ಅದಕ್ಕೆ ಕೇವಲ ಅವರ ಒಂದು **"ಯಮಿಝ್ಝ್ ಖನ್‌ಹುಮ್"** ದಿವ್ಯವಾಣಿ 1914 ರಿಂದ ಇಲ್ಲಿಯವರೆಗೆ ಸುತ್ತಿಗೆ ಹೊಡೆತದ ರೀತಿ ಪೈಗ್ಹಾಮಿ ಅವರಿಗೆ ತುಂಡು ತುಂಡು ಮಾಡಿ ಚದುರಿಸಿಬಿಟ್ಟು ಶಾಶ್ವತ ರೀತಿಯಲ್ಲಿ ಅವರ ಮೇಲೆ ನ್ಯಾಯಪೂರ್ತಿಗೊಳಿಸಿದಂತಾಗಿದೆ. ಎರಡನೆಯ ಮಹಾಯುದ್ಧ ಪ್ರಾರಂಭವಾದಾಗಿನಿಂದ ಇಂದಿನವರೆಗೂ ಇದು ಹೆಚ್ಚು ಪ್ರಾಮುಖ್ಯತೆ ಮತ್ತು ಆಗಾಗ್ಗೆ ಆಗುತ್ತಿದೆ. ಇದು ಏಳನೆಯ ಸಾದೃಶ್ಯವಾಗಿದೆ.

**(8)**

ಎಂಟನೆಯ ಸಾದೃಶ್ಯವು ಹಝ್ರತ್ ಫಝ್ಲ್ ಉಮರ್(ರ) ಅವರಿಗೆ ಹಝ್ರತ್ ಉಮರ್(ರ) ಅವರೊಂದಿಗೆ ಇರುವುದೇನೆಂದರೆ ಹಝ್ರತ್ ಪೈಗಂಬರ್(ಸ) ಹೇಳಿದರು. **ಇನ್ನಲ್ಲಾಹ ವಝಅಲ್ ಹಖ ಅಲಾ ಲಿಸಾನಿ ಉಮರ** ಎಂದರೆ ಅಲ್ಲಾಹನು ಉಮರ್‌ನ ನಾಲಿಗೆಯ ಮೇಲೆ ಸತ್ಯವನ್ನು ಇರಿಸಿದ್ದಾನೆ. ಮತ್ತೊಂದು ವರದಿಯಲ್ಲಿ ಹೀಗಿದೆ, ಸರ್ವಶಕ್ತನಾದ ಅಲ್ಲಾಹನು ಉಮರ್‌ನ ನಾಲಿಗೆ ಮತ್ತು ಹೃದಯ ಎರಡರಲ್ಲೂ ಸತ್ಯವನ್ನು ಜಾರಿಗೊಳಿಸಿದ್ದಾನೆ. ಆದ್ದರಿಂದ ಅದೇ ರೀತಿಯ ಪದಗಳು ಹಝ್ರತ್ ಫಝ್ಲ್ ಉಮರ್(ರ) ಅವರ ಪರವಾಗಿಯೂ ದೈವಿಕ ವಾಣಿಗಳನ್ನು ದಯಪಾಲಿಸಿದ್ದಾನೆ. ಇಲ್ಲಿ ಅವರಿಗೆ **ಮಝ್‌ಹರುಲ್ ಹಖ್ಖಿ ವಲ್‌ಅಲಾಃ** ಎಂದು ಹೇಳಲಾಗಿದೆ. ಮತ್ತು ಅವರ ಬರುವಿಕೆಯಿಂದ **ಜಾಅಲ್ ಹಖ್ಖು ವ ಝಹಖಲ್ ಬಾತಿಲ್** ಎದು ಹೇಳಲಾಗಿದೆ. **ಫಮಾಝಾ ಬಅದಲ್ ಹಖ್ಖಿ ಇಲ್ಲಝ್ಝಲಾಲ್** ಆದ್ದರಿಂದ ಇದು ಎಂಟನೆಯ ಸಾದೃಶ್ಯವಾಗಿದೆ.

**(9)**

ಒಂಭತ್ತನೆಯ ಸಾದೃಶ್ಯವು ಧರ್ಮದ ಕುರಿತಾಗಿದೆ. ಹಝ್ರತ್ ಪೈಗಂಬರ್(ಸ)ರವರು ಒಂದು ದಿವ್ಯ ಸ್ವಪ್ನವನ್ನು ಕಂಡರು. ನನ್ನ ಮುಂದೆ ಜನರನ್ನು ಪ್ರಸ್ತುತಪಡಿಸುತ್ತಿದ್ದಾರೆ. ಅವರು ಅಂಗಿಧರಿಸಿಕೊಂಡಿದ್ದಾರೆ. ಒಬ್ಬರ ಅಂಗಿ ಎದೆಯವರೆಗಿದೆ, ಒಬ್ಬರಿದ್ದ ಅದಕ್ಕಿಂತ ಕೆಳಗೆ, ಅಷ್ಟರಲ್ಲಿ ಉಮರ್(ರ) ಅವರ ಎದುರಿಗೆ ಬಂದರು. ಅವರ ಅಂಗಿ ಎಷ್ಟೊಂದು ಉದ್ದವಾಗಿತ್ತೆಂದರೆ ಅದು ನೆಲಕ್ಕೆ ಸವರಿಕೊಂಡು ಹೋಗುತ್ತಿತ್ತು. ಅವರು ಅದಕ್ಕೆ ಎಳೆದುಕೊಳ್ಳುತ್ತಿದ್ದರು. ಸಹಾಬರವರು ಕೇಳಿದರು. ನಬಿವರ್ಯರೇ ಈ ಸ್ವಪ್ನದ ಅರ್ಥವೇನು, ಅವರು(ಸ) ಹೇಳಿದರು. "ಧರ್ಮ". ಆದ್ದರಿಂದ ಇಲ್ಲಿಯೂ ಅದೇ ಸ್ಥಿತಿಯಿದೆ, ಹಝ್ರತ್ ಫಝ್ಲ್ ಉಮರ್(ರ) ಅವರಿಗೆ ಎಷ್ಟೊಂದು ಧರ್ಮದ ಸತ್ಯವನ್ನು ಮತ್ತು ಜ್ಞಾನವನ್ನು ನೀಡಲಾಗಿದೆ ಎಂದರೆ, ಜಲ್ಸಕ್ಕೆ ಬರುವವರೆಲ್ಲ, ಸಭೆಗಳಲ್ಲಿ ಹಾಜರಾಗುವವರೆಲ್ಲ, ಅವರ ಖುತ್‌ಬಗಳನ್ನು ಆಲಿಸುವವರೆಲ್ಲ ಮತ್ತು ಅವರ ಗ್ರಂಥಗಳನ್ನು ಹಾಗೂ ತಫ್ಸೀರ್‌ಗಳನ್ನು ಅಧ್ಯಾಯನ ಮಾಡುವವರೆಲ್ಲ ನಿವಾಗಿಯೂ ತಲೆಯಿಂದ ಪಾದದವರೆಗೆ ಧರ್ಮದ ಜ್ಞಾನ ಮತ್ತು ಅಲ್ಲಾಹನ ಧರ್ಮಗ್ರಂಥದ ಸಾಕ್ಷ್ಯಗಳಿಂದ ಯಾವ ರೀತಿ ತುಂಬಿ ತುಳುಕಾಡುತ್ತಾರೆಂದರೆ ನೀರಿನಲ್ಲಿ ಕಾಗದ ಮುಳುಗಿಸಿದರೆ

ಅದು ನೀರಿನಿಂದ ತೇವಗೊಳ್ಳುತ್ತದೆ ಮತ್ತು ಅದರಿಂದ ನೀರು ತುಂಬಿ ಹೊರಬರುತ್ತದೆ. ಪ್ರವಾದಿತ್ವದಂತಹ ದೊಡ್ಡ ಧಾರ್ಮಿಕ ವಿಷಯದ ವಾಸ್ತವವು ಹುಝೂರ್‌ರ ಕಾರಣದಿಂದಾಗಿ ನಮಗೆ ಲಭ್ಯವಾಗಿದೆ. ನಮಗೆ ಅಷ್ಟೇ ಸಾಕು.

**(10)**

ಹತ್ತನೆಯ ಸಾದೃಶ್ಯವೆಂದರೆ ಹಝ್ರತ್ ಪೈಗಂಬರ್(ಸ) ಮಕ್ಕದಲ್ಲಿ ದುಆ ಮಾಡುತ್ತಿದ್ದರು. ಓ ದೇವ ಇಸ್ಲಾಮ್ ಧರ್ಮದ ಗೌರವ ಮತ್ತು ವಿಜಯ ಒಂದು ಅಬೂ ಜಹಲನ್ನು ಮುಸಲ್ಮಾನನ್ನಾಗಿ ಮಾಡಿ ಅಥವಾ ಉಮರ್ ಬಿನ್ ಅಲ್‌ಖತ್ತಾಬ್ ಅವರನ್ನು ಮುಸಲ್ಮಾನನ್ನಾಗಿ ಮಾಡಿ, ಆದ್ದರಿಂದ ಹಝ್ರತ್ ಉಮರ್(ರ) ಅವರನ್ನು ಮುಸಲ್ಮಾನನನ್ನಾಗಿ ಮಾಡಿ ಅವರಿಂದ ಇಸ್ಲಾಂನ ಗೌರವ ಮತ್ತು ವಿಜಯ ಸ್ವಲ್ಪವಾದರೂ ತಕ್ಷಣ ವ್ಯಕ್ತವಾಯಿತು. ಆದರೆ ಮುಂದೊಂದು ಅವರ ಖಿಲಾಫತ್ ಕಾಲದಲ್ಲಿ ಇಸ್ಲಾಂ ಧರ್ಮಕ್ಕೆ ಎಷ್ಟೊಂದು ಗೌರವ, ಸಹಾಯ, ವಿಜಯ ದೊರೆತಿದೆ ಎಂದರೆ, ಅದು ವರ್ಣಿಸಲು ಅಸಾಧ್ಯ. ಅದೇ ರೀತಿಯಲ್ಲಿ ಹಝ್ರತ್ ಫಝ್ಲುಲ್ ಉಮರ್(ರ) ಅವರು ಸಹ ಹಝ್ರತ್ ಮಸೀಹ್ ಮೌಊದ್(ಅ) ರವರ ನಲವತ್ತು ದಿನಗಳ ಪ್ರಾರ್ಥನೆಗಳ ಫಲವಾಗಿ ದೊರೆತಿದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳಿರುವಂತೆ– "ನನ್ನ ಸಂತಾನದ ಮೂಲಕ ಅಲ್ಲಾಹನು ಧರ್ಮದ ಪ್ರಗತಿ ಸಹಾಯದ ಅಡಿಪಾಯ ಹಾಕುವ ವಾಗ್ದಾನ ನೀಡಿದ್ದಾನೆ. ಆ ವಾಗ್ದಾನವು ಸಹ ನಾವು ಮುಸ್ಲಿಹ್ ಮೌಊದ್(ರ) ಅವರ ಕಾಲದಲ್ಲಿ ಪೂರ್ಣಗೊಂಡಿದ್ದು ಕಂಡಿದ್ದೇವೆ.

**(11)**

ಮೇಲೆ ವಿವರಿಸಿದ ಮಾತುಗಳಲ್ಲದೇ ಸಂಘಟನಾ ವ್ಯವಸ್ಥೆಯ ಸ್ಥಾಪನೆ ಮತ್ತು ಪ್ರತಿ ರಾಷ್ಟ್ರೀಯ ಇಲಾಖೆಯ ಪ್ರತ್ಯೇಕ ನಿರ್ಣಯ, ಮಜ್ಲಿಸ್ ಶೂರದ ಸ್ಥಾಪನೆ, ಸೂರ್ಯಮಾನ ಹಿಜರಿ ಜಾರಿಗೆ ತಂದದ್ದು, ವಿವಿಧ ರೀತಿಯ ಜಮಾಅತಿನ ಜನಗಣತಿಗಳ ಪ್ರಾರಂಭ, ಕವನಾಸಕ್ತಿ, ಭಾಷಣ ಕೌಶಲ್ಯ, ಅಮೀರುಲ್ ಮುಮಿನೀನ್ ಎಂಬ ಉಪನಾಮ ಪಡೆದಿದ್ದು, ರಾಜಕೀಯ, ಮಹಿಳಾ ಹಕ್ಕುಗಳು, ಶಿಕ್ಷಣ ವ್ಯವಸ್ಥೆ, ಧರ್ಮಕ್ಕಾಗಿ ಪ್ರಚಾರಕರ ಸೃಷ್ಟಿ, ಒಟ್ಟಿನಲ್ಲಿ ಇಂತಹ ಇನ್ನೂ ಹಲವು ವಿಷಯಗಳಿವೆ. ಅದು ಹಝ್ರತ್ ಉಮರ್(ರ) ಅವರಂತೆ ಇವರದ್ದು ವಿಶಿಷ್ಟ ಗುಣಗಳಲ್ಲಿ ಶಾಮೀಲಾಗಿರುತ್ತದೆ.

**(ಅಲ್–ಫಝ್ಲ್ 20 ಫೆಬ್ರವರಿ 1944)**

...*...*...*...

## ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:–**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರೀಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ–5, ಪುಟ–48–49, ಮುದ್ರಣ ಖಾದಿಯಾನ್ 2003)

**(ನಝಾರತ್ ಇಸ್ಲಾಹ್–ವ–ಇರ್‌ಶಾದ್ (ಮರ್‌ಕಝಿಯ್ಯಾ, ಖಾದಿಯಾನ್)**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ** ಜುಮುಅವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ

**MUSLIM TELEVISION AHMADIYYA INTERNATIONAL**
**www.mta.tv**

## ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್‌ನ ಕಚೇರಿಗಳಲ್ಲಿ ಸೇವೆಸಲ್ಲಿಸಲು ಬಯಸುವವರು ಗಮನಹರಿಸಿರಿ

### "ನಝಾರತ್ ತಅ್‌ಲೀಮ್" (ಶಿಕ್ಷಣ ಇಲಾಖೆ) ನ ಅಡಿಯಲ್ಲಿ ಶಿಕ್ಷಣ ಸಂಸ್ಥೆಗಳಲ್ಲಿ ಪುರುಷ ಶಿಕ್ಷಕರ ಅಗತ್ಯವಿದೆ.

ತಾಲೀಮುಲ್ ಇಸ್ಲಾಮ್ ಸೀನಿಯರ್ ಸೆಕೆಂಡರಿ ಸ್ಕೂಲ್‌ನಲ್ಲಿ ದೈಹಿಕ ಶಿಕ್ಷಣ ಮತ್ತು ಕಂಪ್ಯೂಟರ್ ಶಿಕ್ಷಕರ ಕೆಲವು ಹುದ್ದೆಗಳನ್ನು ಭರ್ತಿ ಮಾಡಬೇಕಾಗಿದೆ. ಸೇವಾ ಮನೋಭಾವ ಮತ್ತು ಅಗತ್ಯ ಶೈಕ್ಷಣಿಕ ಅರ್ಹತೆ ಹೊಂದಿರುವ ಆಸಕ್ತ ಅಭ್ಯರ್ಥಿಗಳು ನಝಾರತ್ ದೀವಾನ್ ಪ್ರಕಟಿಸಿದ ಮಾಹಿತಿ ನಮೂನೆಯನ್ನು ಭರ್ತಿ ಮಾಡುವ ಮೂಲಕ ತಮ್ಮ ಅರ್ಜಿಗಳನ್ನು ಸಲ್ಲಿಸಬಹುದು. ವಿವರಣೆ ಮತ್ತು ಷರತ್ತುಗಳು ಈ ಕೆಳಗಿನಂತಿವೆ.

**ಕಂಪ್ಯೂಟರ್ ಟೀಚರ್**

(1) ವಿದ್ಯಾರ್ಹತೆ : BCA/B.Sc(IT/CS/Internet Science), B.Tech (IT/CS)

(2) ಅಭ್ಯರ್ಥಿಯು ಉರ್ದು, ಇಂಗ್ಲಿಷ್, ಹಿಂದಿ ಮತ್ತು ಪಂಜಾಬಿ ಟೈಪಿಂಗ್ ತಿಳಿದಿರಬೇಕು. (3) ಸಂಬಂಧಿತ ವಿಷಯದಲ್ಲಿ ಪದವಿ (BCA/ B.Sc, B.Tech) ಜೊತೆಗೆ 55%, ಮತ್ತು ಯಾವುದೇ ಮಾನ್ಯತೆ ಪಡೆದ ಸಂಸ್ಥೆಯಲ್ಲಿ 3 ವರ್ಷಗಳ ಅನುಭವ, ಸ್ನಾತಕೋತ್ತರ ಪದವೀಧರರಿಗೆ ಆದ್ಯತೆ ನೀಡಲಾಗುತ್ತದೆ.

**ದೈಹಿಕ ಶಿಕ್ಷಣ ಶಿಕ್ಷಕ**

(1) ದೈಹಿಕ ಶಿಕ್ಷಣವನ್ನು ಐಚ್ಛಿಕ ವಿಷಯವಾಗಿ ಬಿ.ಎ / ದೈಹಿಕ ಶಿಕ್ಷಣದಲ್ಲಿ 3 ವರ್ಷದ ಪದವಿ ಕೋರ್ಸ್ ಮತ್ತು ಬಿ.ಪಿ.ಎಡ್.

(2) ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಬ್ಯಾಚುಲರ್ ಆಫ್ ಫಿಸಿಕಲ್ ಎಜುಕೇಶನ್‌ನ 4 ವರ್ಷಗಳ ಸಮಗ್ರ ಕೋರ್ಸ್.

(3) ಸಂಬಂಧಪಟ್ಟ ವಿಷಯದಲ್ಲಿ 55% ಅಂಕಗಳು ಮತ್ತು ಯಾವುದೇ ಮಾನ್ಯತೆ ಪಡೆದ ಸಂಸ್ಥೆಯಲ್ಲಿ 3 ವರ್ಷಗಳ ಅನುಭವ ಇರಬೇಕು. ಸ್ನಾತಕೋತ್ತರ ಪದವೀಧರರಿಗೆ ಆದ್ಯತೆ ನೀಡಲಾಗುವುದು. (4) ಅಭ್ಯರ್ಥಿಯ ವಯಸ್ಸು 20 ವರ್ಷಗಳಿಗಿಂತ ಕಡಿಮೆ ಮತ್ತು 40 ವರ್ಷಗಳಿಗಿಂತ ಹೆಚ್ಚಾಗಿರಬಾರದು. ಅಸಾಧಾರಣ ಸಂದರ್ಭಗಳಲ್ಲಿ ವಯಸ್ಸಿನ ಮಿತಿಯ ಸಡಿಲಿಕೆಯನ್ನು ಪರಿಗಣಿಸಬಹುದು (5) ಕಾರ್ಮಿಕರ ನೇಮಕಾತಿಗಾಗಿ ಕೇಂದ್ರ ಸಮಿತಿಯ ಸಂದರ್ಶನದಲ್ಲಿ ಯಶಸ್ವಿಯಾಗುವ ಅಭ್ಯರ್ಥಿಗಳನ್ನು ಮಾತ್ರ ಸೇವೆಗೆ ತೆಗೆದುಕೊಳ್ಳಲಾಗುತ್ತದೆ, ಸಂದರ್ಶನದಲ್ಲಿ ಯಶಸ್ವಿಯಾದರೆ, ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯಾನ್‌ನಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ ಮತ್ತು ಯಾವ ಅಭ್ಯರ್ಥಿಗಳನ್ನು ನೂರ್ ಆಸ್ಪತ್ರೆಯ ವೈದ್ಯಕೀಯ ಮಂಡಳಿಯ ವರದಿಯ ಪ್ರಕಾರ ಆರೋಗ್ಯಕರ ಮತ್ತು ಸದೃಢರಾಗಿರುವವರು ಅರ್ಹರಾಗಿರುತ್ತಾರೆ ಅಂತಹ ಅಭ್ಯರ್ಥಿಗೆ ಮಾತ್ರ ಸೇವೆಗೆ ಪರಿಗಣಿಸಲಾಗುತ್ತದೆ (6) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಅವನ ಸ್ವಂತ ವಸತಿಯ ವ್ಯವಸ್ಥೆ ಮಾಡಬೇಕಾಗುತ್ತದೆ. (7) ಖಾದಿಯಾನ್ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯ ಸ್ವಂತ ಜವಾಬ್ದಾರಿಯಾಗಿರುತ್ತದೆ. (8) ಸಂದರ್ಶನದ ದಿನಾಂಕವನ್ನು ನಂತರ ತಿಳಿಸಲಾಗುವುದು (9) ಮುದ್ರಿತ ಮಾಹಿತಿ ನಮೂನೆಯನ್ನು ನಝಾರತ್ ದೀವಾನ್ ಅಥವಾ ಕೆಳಗಿನ ವಿಳಾಸದಿಂದ / E-mail ಮೂಲಕ ಪಡೆಯಬಹುದು. (10) ಶೈಕ್ಷಣಿಕ ಅರ್ಹತೆಗಳ ಅರ್ಜಿಗಳು ಹಾಗೂ ಅನುಭವದ ಯೋಗ್ಯತಾಪತ್ರಗಳ ನಮೂನೆಗಳೊಂದಿಗೆ ನಝಾರತ್ ದೀವಾನ್‌ನ ಈ ಜಾಹಿರಾತಿನ ನಂತರ ಎರಡು ತಿಂಗಳ ಒಳಗೆ ಕಳುಹಿಸತಕ್ಕದ್ದು. (11) ಜೀವನ ಭತ್ಯೆ ಮತ್ತು ಇತರ ಮಾಹಿತಿಗಾಗಿ, ಈ ಕೆಳಗಿನ E-mail ಮತ್ತು ಫೋನ್ ಸಂಖ್ಯೆಗಳನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು.

### ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್‌ನಲ್ಲಿ ಡ್ರೈವರ್ ಹುದ್ದೆಗೆ ಘೋಷಣೆ

**ಷರತ್ತುಗಳು:**

(1) ಅಭ್ಯರ್ಥಿಯ ವಯಸ್ಸು 18 ವರ್ಷಕ್ಕಿಂತ ಹೆಚ್ಚು ಮತ್ತು 40 ವರ್ಷಗಳಿಗಿಂತ ಕಡಿಮೆಯಿರಬೇಕು. (2) ಅಭ್ಯರ್ಥಿಯು ಕನಿಷ್ಠ 8 ನೇ ತರಗತಿಯಿಂದ ತೇರ್ಗಡೆ ಹೊಂದಿರಬೇಕು (3) ಅಭ್ಯರ್ಥಿಯು ಕನಿಷ್ಠ 10 ವರ್ಷಗಳ ಮಾನ್ಯ ಚಾಲನಾ ಪರವಾನಗಿ ಮತ್ತು 10 ವರ್ಷಗಳ ಚಾಲನಾ ಅನುಭವವನ್ನು ಹೊಂದಿರಬೇಕು. ಪ್ರವೃತ್ತಿ ಚಾಲಕನಿಗೆ ಆದ್ಯತೆ ನೀಡಲಾಗುತ್ತದೆ (4) ಅಭ್ಯರ್ಥಿ ಚಾಲಕನಿಗೆ ಎರಡನೇ ದರಜೆಯ ಸಮಾನವಾದ ಭತ್ಯೆ ಮತ್ತು ಇತರ ಸೌಲಭ್ಯಗಳನ್ನು ನೀಡಲಾಗುತ್ತದೆ (5) ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯಾನ್‌ನಿಂದ ವೈದ್ಯಕೀಯ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ ಮತ್ತು ಯಾವ ಅಭ್ಯರ್ಥಿಗಳನ್ನು ನೂರ್ ಆಸ್ಪತ್ರೆಯ ವೈದ್ಯಕೀಯ ಮಂಡಳಿಯ ವರದಿಯ ಪ್ರಕಾರ ಆರೋಗ್ಯಕರ ಮತ್ತು ಸದೃಢರಾಗಿರುವವರು ಅರ್ಹರಾಗಿರುತ್ತಾರೆ ಅಂತಹ ಅಭ್ಯರ್ಥಿಗೆ ಮಾತ್ರ ಸೇವೆಗೆ ಪರಿಗಣಿಸಲಾಗುತ್ತದೆ ಮತ್ತು (6) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಅವನ ಸ್ವಂತ ವಸತಿಯ ವ್ಯವಸ್ಥೆ ಮಾಡಬೇಕಾಗುತ್ತದೆ.

**ಗಮನಿಸಿ: ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ, ಡ್ರೈವಿಂಗ್ ಪರೀಕ್ಷೆ ಮತ್ತು ಸಂದರ್ಶನದ ದಿನಾಂಕವನ್ನು ನಂತರ ತಿಳಿಸಲಾಗುವುದು.**

***ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:***

**ನಝಾರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್–143516**
**ಮೊಬೈಲ್: 09682627592, 09682587713,**
**ಕಛೇರಿ: 01872–501130. ಇ–ಮೇಲ್: diwan@qadian.in**

## ಹಝ್‌ರತ್ ಮುಸ್ಲಿಹ್ ಮೌಊದ್(ರ) ಅವರ ಮಹಿಮೆ

(ಹಝ್‌ರತ್ ಮೌಲವಿ ಶೇರ್ ಅಲಿ ಸಾಹಿಬ್(ರ))

ಮುಸ್ಲಿಹ್ ಮೌಊದ್ ಭವಿಷ್ಯವಾಣಿಯು ಹಝ್‌ರತ್ ಮಸೀಹ್ ಮೌಊದ್(ಅ) ಅವರ ಪ್ರಾರ್ಥನೆ ಸ್ವೀಕಾರದ ಒಂದು ಮಹೋನ್ನತ ದೃಷ್ಟಾಂತವಾಗಿದೆ. ಅವರದ್ದು ಇನ್ನೂ ಕೆಲವು ದೃಷ್ಟಾಂತಗಳಿವೆ. ಅವು ಹುಝೂರ್(ಅ) ರ ಪ್ರಾರ್ಥನೆಯಿಂದಾಗಿ ಪ್ರಕಟಗೊಂಡಿವೆ. ಉದಾಹರಣೆಗೆ, ಲೇಖ್‌ರಾಮ್‌ನ ದೃಷ್ಟಾಂತ, ನಿಸ್ಸಂಶಯವಾಗಿಯೂ ಈ ದೃಷ್ಟಾಂತ ತನ್ನ ಜಾಗದಲ್ಲಿ ಹಝ್‌ರತ್ ಮಸೀಹ್ ಮೌಊದ್(ಅ) ರವರ ಸತ್ಯತೆಯ ಪ್ರಬಲ ಸಾಕ್ಷ್ಯವಾಗಿದೆ. ಆದರೆ ಮುಸ್ಲೆಹ್ ಮೌಊದ್(ರ) ಅವರ ಆಗಮನದ ದೃಷ್ಟಾಂತ ಮತ್ತು ಹಝ್‌ರತ್ ಮಸೀಹ್ ಮೌಊದ್(ಅ) ರವರ ಪ್ರಾರ್ಥನೆ ಸ್ವೀಕಾರದ ಇತರ ದೃಷ್ಟಾಂತಗಳಲ್ಲಿ ಬಹಳಷ್ಟು ವ್ಯತ್ಯಾಸವಿದೆ. ಈ ದೃಷ್ಟಾಂತ ಕುರಿತು ಹುಝೂರ್(ಅ) ವಿಶೇಷ ರೀತಿಯ ಯೋಜನೆ ರೂಪಿಸಿಕೊಂಡಿದ್ದರು. ನಲವತ್ತು ದಿನಗಳವರೆಗೆ ತನ್ನ ನಗರದಿಂದ ಹೊರಗೆ ಒಂದು ಬೇರೆ ಸ್ಥಳದಲ್ಲಿ ಏಕಾಂಗಿಯಾಗಿ, ಇಹಲೋಕದಿಂದ ಬೇರ್ಪಟ್ಟು ಹುಝೂರ್(ಅ) ಅಲ್ಲಾಹನ ಆಸ್ಥಾನದಲ್ಲಿ ಅಳುತ್ತಾ ಪ್ರಾರ್ಥನೆ ಮತ್ತು ದೇವಸ್ಮರಣೆಯಲ್ಲಿ ತೊಡಗಿದರು. ಅದರ ಪರಿಣಾಮವಾಗಿ ಸರ್ವಶಕ್ತನಾದ ಅಲ್ಲಾಹನು ಹುಝೂರ್(ಅ) ಅವರಿಗೆ ಈ ಅನುಗ್ರಹಾತ್ಮಕ ದೃಷ್ಟಾಂತ ದಯಪಾಲಿಸಿದನು.

ಪ್ರಾರ್ಥನಾ ಸ್ವೀಕಾರದ ಪರಿಣಾಮವಾಗಿ ಇತರ ಪ್ರಕಟವಾದ ದೃಷ್ಟಾಂತಗಳು ಸಹ ನಿಸ್ಸಂಶಯವಾಗಿಯೂ ಅವು ಭವ್ಯವಾಗಿದ್ದವು. ಆದರೆ ಈ ದೃಷ್ಟಾಂತದ ಪರಿಣಾಮಗಳು ಎಷ್ಟು ವಿಸ್ತೃತವಾಗಿವೆ ಎಂದರೆ ಅದನ್ನು ಅಂದಾಜಿಸುವುದು ಅಸಾಧ್ಯ.

ಈ ರೀತಿಯ ದೃಷ್ಟಾಂತಗಲು ಲೋಕದ ಇತಿಹಾಸದಲ್ಲಿ ಪ್ರಾರ್ಥನೆ ಪರಿಣಾಮವಾಗಿ ಮೂರು ಸಲ ವ್ಯಕ್ತವಾಗಿವೆ.

(1) ಮೊದಲ ದೃಷ್ಟಾಂತ ಹಝ್‌ರತ್ ಪೈಗಂಬರ್(ಸ) ಅವರ ಆಗಮನದ ದೃಷ್ಟಾಂತವಾಗಿತ್ತು. ಅದು ಹಝ್‌ರತ್ ಇಬ್ರಾಹಿಂ(ಅ) ರವರ ಪ್ರಾರ್ಥನೆಯ ಪರಿಣಾಮವಾಗಿ ವ್ಯಕ್ತವಾಗಿತ್ತು. ಈ ದೃಷ್ಟಾಂತ ಕೆಳಗಿನವುಗಳಲ್ಲಿ ಪ್ರಥಮ ಸ್ಥಾನ ಹೊಂದಿದೆ.

(2) ಎರಡನೆಯ ದೃಷ್ಟಾಂತವು ಹಝ್‌ರತ್ ಮಸೀಹ್ ಮೌಊದ್(ಅ) ರವರ ಆಗಮನದ ದೃಷ್ಟಾಂತವಾಗಿದೆ. ಅದು ಈ ಪ್ರಾರ್ಥನೆಗಳ ಫಲವಾಗಿಯೇ ವ್ಯಕ್ತವಾಗಿವೆ. ಅದು ಹಝ್‌ರತ್ ಪೈಗಂಬರ್(ಸ) ರವರು ತಮ್ಮ ಸಮುದಾಯಕ್ಕಾಗಿ ಮಾಡಿದ್ದರು.

(3) ಮೂರನೆಯ ಮಹೋನ್ನತವಾದ ದೃಷ್ಟಾಂತ. ಅದು ಲೋಕದಲ್ಲಿ ಮುಸ್ಲಿಹ್ ಮೌಊದ್(ರ) ರವರ ಆಗಮನದ ದೃಷ್ಟಾಂತವಾಗಿದೆ. ಈ ದೃಷ್ಟಾಂತ ತನ್ನ ಘನತೆಯ ನೆಲೆಯಲ್ಲಿ ಮೂನರೆಯ ಸ್ಥಾನದಲ್ಲಿದೆ. ಮೂರನೆಯ ಈ ಮಹೋನ್ನತ ದೃಷ್ಟಾಂತ ಪ್ರಾರ್ಥನೆಯ ಫಲವಾಗಿ ವ್ಯಕ್ತವಾದ ಆ ಮನುಷ್ಯನು ಎಷ್ಟು ಮಹಿಮೆಯ ಮನುಷ್ಯನಾಗಿರಬೇಕು. ಅದರ ಅಂದಾಜು ದೈವಿಕವಾಣಿಯ ಪದಗಳಿಂದ ಅಂದಾಜಿಸಬಹುದು. ಅದು ನಲವತ್ತು ದಿನಗಳ ಪ್ರಾರ್ಥನೆಗಳ ನಂತರ ಹುಝೂರ್(ಅ) ಹೋಶಿಯಾರ್‌ಪುರದಲ್ಲಿ ಅವತರಣಗೊಂಡಿತು. ಅದು 20 ಫೆಬ್ರವರಿಯ ಜಾಹೀರಾತಿನಲ್ಲಿ ಪ್ರಕಟಿಸಲಾಯಿತು. ಅಲ್ಲಾಹನ ಮಾತುಗಳಲ್ಲಿ ಅತಿಶಯೋಕ್ತಿ ಎಂಬುದಿರುವುದಿಲ್ಲ. ಆದ್ದರಿಂದ ನಾವು ಮುಸ್ಲೆಹ್ ಮೌಊದ್(ರ) ರವರ ವ್ಯಕ್ತಿತ್ವದ ಬಗ್ಗೆ ಸರಿಯಾದ ಅಂದಾಜು ವಹಿಸಬೇಕಾದರೆ ನಮಗೆ ಭವಿಷ್ಯವಾಣಿಯ ಪದಗಳನ್ನು ಓದಬೇಕಾಗಿದೆ. ಅದರಲ್ಲಿ ವರ್ಣಿಸಲದ ಅವರ ಗುಣಗಳು ಮತ್ತು ಕಾರ್ಯಗಳು ಅವರ ಸ್ಥನದ ಗೌರವವನ್ನು ಸೂಚಿಸುತ್ತದೆ. ಆದ್ದರಿಂದ ಮೂರನೆಯ ಮಹೋನ್ನತವಾದ ಮನುಷ್ಯ ಅದು ಹಝ್‌ರತ್ ಪೈಗಂಬರ್(ಸ) ಮತ್ತು ಹಝ್‌ರತ್ ಮಸೀಹ್ ಮೌಊದ್(ಅ) ರವರ ಪ್ರಾರ್ಥನೆಗಳ ಫಲವಾಗಿ ಲೋಕದಲ್ಲಿ ವ್ಯಕ್ತಗೊಂಡಿದೆ. ಅವರೇ ಆ ಮುಸ್ಲೆಹ್ ಮೌಊದ್ ಆಗಿರುವರು. ಅವರ ಬಗ್ಗೆ ವಿವರಾತ್ಮಕವಾಗಿ ಈ ಭವಿಷ್ಯವಾಣಿಯ ಪದಗಳಲ್ಲಿ ವರ್ಣಿಸಲಾಗಿದೆ. ಈ ಭವಿಷ್ಯವಾಣಿಗೆ ಇವರೇ ಸಾಕ್ಷಿಯಾಗಿದ್ದಾರೆಯೇ ಎಂಬುದಕ್ಕೆ ಹಝ್‌ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಸಾನಿ(ರ) ಅವರು ಸಾಕ್ಷಿಯಾಗಿದ್ದಾರೆ. ಕೇವಲ ಇವರ ಸತ್ಯತೆ ದೃಷ್ಟಾಂತಗಳಿಂದ ಮತ್ತು ಪುರಾವೆಗಳಿಂದ ಸಾಬೀತಾಗುವುದಿಲ್ಲ. ಬದಲಿಗೆ ಸರ್ವಶಕ್ತನಾದ ಅಲ್ಲಾಹನ ಪುಷ್ಟಿಕಾರ್ಯಗಳು ಸಹ ಉಚ್ಛ ಧ್ವನಿಯಲ್ಲಿ ಈ ಮಾತಿಗೆ ಸಾಕ್ಷಿ ನೀಡುತ್ತಿದೆ. ಇವರೇ ಆ ಭವಿಷ್ಯವಾಣಿಗೆ ಸಾಕ್ಷಿಯಾಗಿದ್ದರೆ ಎಂದರೆ ಹಝ್‌ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಸಾನಿ(ರ) ಅವರು. ಏಕೆಂದರೆ ಅಲ್ಲಾಹನು ತನ್ನ ಅನುಗ್ರಹಶಕ್ತಿ ಮೇರೆಗೆ ಭವಿಷ್ಯವಾಣಿ ನೀಡಲಾದ ಎಲ್ಲಾ ಮತುಗಳನ್ನು ಪೂರ್ಣಗೊಳಿಸಿದೆ ಮತ್ತು ಪೂರ್ಣಗೊಳಿಸುತ್ತಿದ್ದಾನೆ. ಅದಕ್ಕೆ ಯಾವ ನ್ಯಾಯಯುತ ಮನುಷ್ಯನು ಅಲ್ಲಗಳೆಯಲಿಕ್ಕೆ ಸಾಧ್ಯವಿಲ್ಲ. ಭವಿಷ್ಯವಾಣಿಯಲ್ಲಿ ವಿವರಿಸಲಾದ ಮಾತುಗಳನ್ನು ಈಡೇರಿಸುವುದು ಯಾವ ಮನುಷ್ಯನಿಂದಲೂ ಸಾಧ್ಯವಿಲ್ಲ. ಅಲ್ಲಾಹನು ಮಾತ್ರ ಅದನ್ನು ಮಾಡಬಲ್ಲನು. ಅವನು ಆ ಮಾತುಗಳನ್ನು ಪೂರ್ತಿಗೊಳಿಸಿ ಆಕಾಶದಿಂದ ಈ ಮಾತಿಗೆ ಸಾಕ್ಷಿ ನೀಡುತ್ತಿದ್ದಾನೆ. ಭವಿಷ್ಯವಾಣಿ ಪ್ರಕಾರ ಆಗಮಿಸಬೇಕಾದ ವ್ಯಕ್ತಿ ಇದೇ ಮಹ್ಮೂದ್ ಆಗಿದ್ದಾನೆ. ಸರ್ವಶಕ್ತನಾದ ಅಲ್ಲಾಹನ ಕ್ರಿಯೆಯು ಯಾವುದೇ ಒಬ್ಬ ವ್ಯಕ್ತಿಯ ಸತ್ಯತೆಗೆ ಪ್ರಬಲ ಸಾಕ್ಷಿಯಾಗಿರುತ್ತದೆ. ಈ ಸಾಕ್ಷಿ ಇವರ ಪೈಕಿ ಅತ್ಯಂತ ಜಗ್ಗಜಾಹೀರವಾಗಿದೆ.

ಇನ್ನೊಂದು ವಿಷಯವೇನೆಂದರೆ ಹಝ್‌ರತ್ ಮಹ್ಮೂದ್ (ಅತಬಿಅ) ಅವರು ಮುಸ್ಲಿಹ್ ಮೌಊದ್(ರ) ಆಗಿರುವುದಕ್ಕೆ ಸಾಕ್ಷಿ ನೀಡುತ್ತಿದೆ. ಅದು ನಿಮ್ಮ ಮೊಂಚೆ ಗತಿಸಿಹೋದ ಎಲ್ಲಾ ಸರ್ವಶಕ್ತನಾದ ಅಲ್ಲಾಹನ ಪ್ರವಾದಿಗಳೊಂದಿಗೆ ಜನರು ವರ್ತಿಸಿದ ರೀತಿತಾಗಿದೆ. ಅಲ್ಲಾಹನ ಕಡೆಯಿಂದ ಲೋಕೋದ್ಧಾರಕ್ಕಾಗಿ ಆಗಮಿಸಿದ ಧರ್ಮಸಿಧಾರಕರೊಂದಿಗೆ ಅವರ ಸಮೂದಾಯದ ಮುಖಂಡರು ಅವರನ್ನು ವಿರೋಧಿಸುವುದು ಮತ್ತು ಅವರನ್ನು ವಿಫಲಗೊಳಿಸಲು ಶಕ್ತಿಮೀರಿ ಪ್ರಯತ್ನಿಸುವುದು ಸುನ್ನತ್ ಆಗಿದೆ. ಹಝ್‌ರತ್ ಮೂಸಾ(ಅ) ಅವರ ಕಾಲದಲ್ಲಿ ಫಿರ್‌ಔನ್ ಬಲಶಾಲಿ ಮನುಷ್ಯನಾಗಿದ್ದ. ಅವನು ಅವರ ವಿರುದ್ಧ ಎದೆಗಟ್ಟಿ ನಿಂತಿದ್ದನು. ಮೂಸ(ಅ) ಮತ್ತು ಅವರ ಸಮುದಾಯವನ್ನು ನಾಶ ಮಾಡಲು ಹೋರಾಡಿದನು. ಹಝ್‌ರತ್ ಈಸಾ(ಅ) ಅವರ ಕಾಲದಲ್ಲಿ ಯಹೂದಿಯರಲ್ಲಿ ಅತ್ಯಂತ ಹಿರಿಯವನು ಮತ್ತು ಅವರ ನಾಯಕ ಕಾಹಿನ್ ಅವನ ಹೆಸರು ಕಾಯಿಫ್ ಎಂದಾಗಿತ್ತು. ಅವನು ಇವರನ್ನು ನಾಶಪಡಿಸಲು ಎದುರಾದನು. ಹಝ್‌ರತ್ ಪೈಗಂಬರ್(ಸ) ಅವರ ಕಾಲದಲ್ಲಿ ಮಕ್ಕ ಕಣಿವೆಯ ಸರಾದರ ಅಬುಜಹಲ್ ನಾಯಕನಾಗಿದ್ದನು. ಅವನು ಹಝ್‌ರತ್ ಪೈಗಂಬರ್(ಸ) ಅವರನ್ನು ನಾಶ ಮಾಡಲು ಸಿದ್ಧನಾಗಿ ನಿಂತನು. ಹಝುರತ್ ಮಸೀಹ್ ಮೌಊದ್(ಅ) ಅವರ ಕಾಲದಲ್ಲಿ ಮೌಲ್ವಿಗಳಾದ ಮುಹಮ್ಮದ್ ಹುಸೇನ್ ಬಟಾಲ್ವಿ ಮತ್ತು ನಝೀರ್ ಹುಸೇನ್ ದೆಹಲ್ವಿ ವಿರೋಧಕ್ಕೆ ಪಣತೊಟ್ಟಿದ್ದರು. ಅಲ್ಲಾಹನು ತನ್ನ ವಾಣಿಯಲ್ಲಿ ಅವರ ಹೆಸರು ಫಿರ್‌ಔನ್ ಮತ್ತು ಹಾಮಾನ್ ಎಂದು ಕರೆದನು. ಅದೇ ರೀತಿಯಾಗಿ ಅಲ್ಲಾಹನ ಪುರಾತನ ನಡವಳಿಕೆ ಪ್ರಕಾರ ಮಹ್‌ಮೂದ್(ರ) ಅವರು ಖಲೀಫ ಸ್ಥಾನಕ್ಕೆ ನಿಲ್ಲುವ ಸಮಯ ಬಂದಾಗ ಅಹ್ಮದಿಯಾ ಜಮಾಅತಿನ ದಿಗ್ಗಜರು ಅವರ ವಿರೋಧಕ್ಕೆ ನಿಂತರು. ಯಾವ ರೀತಿ ಹಿಂದೆ ಅಲ್ಲಾಹನ ಪ್ರವಾದಿಗಳಿಗಾಗಿ ಅವರ ಕಾಲದ ದಿಗ್ಗಜರು ವಿರೋಧಕ್ಕೆ ನಿಂತಿದ್ದರು. ಅದೇ ರೀತಿ ಮಹಮೂದ್(ರ) ತಮ್ಮ ಕ್ರಿಯೆಗಳ ಮೂಲಕ ಘೋಷಿಸಿದರು. ಈಗ ಖಲೀಫರಾಗಲು ನಿಲ್ಲುವ ಈ ವ್ಯಕ್ತಿಯೇ ಆ ವಾಗ್ದತ್ತನಾಗಿದ್ದಾನೆ. ಅವನ ಆಗಮನದ ಸೂಚನೆ ಅಹ್ಮದಿಯಾ ಜಮಾಅತಿನ ಸ್ಥಾಪಕರು ನೀಡಿದ್ದರು.

ಇನ್ನೊಂದು ವಿಷಯ ಅದು ಫಝ್ಲೆ ಉಮರ್ ಖಲೀಫತುಲ್ ಮಸೀಹ್ ಸಾನಿ(ಅತಬಿಅ) ಅವರ ನಿಜವಾದ ವೈಭವವನ್ನು ವ್ಯಕ್ತಪಡಿಸುತ್ತದೆ. ಅದೇನೆಂದರೆ ಅಹ್ಮದಿಯಾ ಜಮಅತ್ತಿನ ಬುನಾದಿಯು ಅವರ ಜನ್ಮವಾದ ಸಮಯದಲ್ಲೇ ಸ್ಥಾಪಿತವಾಯಿತು. ಹಝ್‌ರತ್ ಮಸೀಹ್ ಮೌಊದ್(ಅ) ರವರ ಪೈಕಿ ನಿಷ್ಠೆಯುಳ್ಳವರು ಹುಝೂರ್(ಅ) ರ ಬರಹಗಳಿಂದ ಮತ್ತು ಭವಿಷ್ಯವಾಣಿಗಳ ದೃಷ್ಟಾಂತಗಳಿಂದ ಪ್ರಭಾವಿತರಾಗಿ, ಇವರಿಗೆ ಅಲ್ಲಾಹನು ಜನರ ಸುಧಾರಣೆಗಾಗಿ ನಿಯುಕ್ತಗೊಳಿಸಿದ್ದಾನೆ. ಆದ್ದರಿಂದ ಅವರು ಪದೇ ಪದೇ ಅವರಿಗೆ ಇದೇ ಉತ್ತರ ನೀಡುತ್ತಿದ್ದರು. ಇಲ್ಲಿಯವರೆಗೂ ನನಗೆ ಬೈಅತ್ ಪಡೆಯುವ ಆಜ್ಞೆ ಬಂದಿರುವುದಿಲ್ಲ. ಎಲ್ಲಿಯವರೆಗೆ ಅಲ್ಲಾಹನ ಕಡೆಯಿಂದ ನನಗೆ ಬೈಅತ್ ಸ್ವೀಕರಿಸಲು ಆಜ್ಞೆ ಬರುವುದಿಲ್ಲವೊ. ನಾನು ಯಾರಿಂದಲು ಬೈಅತ್ ತೆಗೆದುಕೊಳ್ಳುವುದಿಲ್ಲ. ಆದರೆ ಹಝ್‌ರತ್ ಖಲಿಫತುಲ್ ಮಸೀಹ್ ಸಾನಿ(ರ) ಜನಿಸಿದ ನಂತರ ಅವರಿಗೆ ದಿವ್ಯವಾಣಿಯ ಮೂಲಕ ದೈವಿಕ ಸಂಘಟನೆಯ ಪ್ರಯುಕ್ತ ಬೈಅತ್ ಪ್ರಾರಂಭಿಸುವ ಆಜ್ಞೆ ಸ್ವೀಕರಿಸಲಾಯಿತು. ಹೀಗೆ ದಿವ್ಯವಾಣಿ ಅವತರಿಸಿತು. **ಇಸ್‌ನಿಲ್ ಫುಲ್‌ಕ ಬಿಅಲ್‌ಯುನಿನಾ ವವಹ್‌ಯಿನಾ–** ಆದ್ದರಿಂದ ಹಝ್‌ರತ್ ಮಸೀಹ್ ಮೌಊದ್(ಅ) ಜಾಹಿರಾತಿನಲ್ಲಿ ಈ ಸುದ್ದಿ ಪ್ರಕಟಿಸಿದರು. ಈ ಮೂಲಕ ಜನರಿಗೆ ಬೈಅತ್ ಮಾಡಲು ಆಹ್ವಾನಿಸಿ ಅಹ್ಮದಿಯಾ ಜಮಾಅತ್ತಿನ ಬುನಾದಿಯನ್ನು ಹಾಕಿದರು. ಹಝ್‌ರತ್ ಖಲೀಫತುಲ್ ಮಸೀಹ್ ಸಾನಿ(ರ)

ಅವರ ಜನ್ಮ ಆಗುವವರೆಗೆ ಅಲ್ಲಾಹನು ಬೈಅತ್ ಪ್ರಾರಂಭವನ್ನು ತಡೆಹಿಡಿದಿದ್ದನು. ಆದ್ದರಿಂದ ಅವರ ಜನ್ಮವಾಗುತ್ತಲೆ ಆಜ್ಞೆನೀಡಿ ಅಹ್ಮದಿಯಾ ಸಂಘಟನೆಗೆ ಬುನಾದಿ ಹಾಕಲಾಯಿತು. ಹೀಗೆ ಅವರ ಜನ್ಮವಾಗುತ್ತಲೇ ಅವರ ಜನ್ಮದಿಂದ ಅಹ್ಮದಿಯಾ ಸಂಘಟನೆ ಪ್ರಾರಂಭವಾಯಿತು. ಇದರ ಸಂಕೇತವೇನೆಂದರೆ ಇವರ ಜನ್ಮ ಮತ್ತು ಅಹ್ಮದಿಯಾ ಸಂಘಟನೆಗೆ ಘನಿಷ್ಠ ಸಂಬಂಧವಿದೆ. ಏಕೆಂದರೆ ಎರಡರ ಪ್ರಾರಂಭ ಒಟ್ಟುಗೂಡಿದೆ. ಹೀಗಾಗಿ ಜನರು ತಿಳಿಯುವಂತಾಗಬೇಕು. ಅವರ ವ್ಯಕ್ತಿತ್ವಕ್ಕೆ ಮತ್ತು ಜಮಾಅತಿಗೆ ಯಾವ ರೀತಿಯ ಸಂಬಂಧವಿದೆ ಎಂದರೆ ಎರಡನ್ನು ಒಂದಕ್ಕಿಂತ ಒಂದನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಹೇಗೆ ನಾವು ಅಹ್ಮದಿಯೆತರರಿಗೆ ಹೇಳುತ್ತೇವೆ: ಹಝ್ರತ್ ಮಸೀಹ್ ಮೌಊದ್(ಅ) ರವರಿಗೆ ಸ್ವೀಕರಿಸುವುದು ಏಕೆ ಅವಶ್ಯಕವೆಂದರೆ ಅವರ ನಿಮಿತ್ತ ಹಝ್ರತ್ ಪೈಗಂಬರ್(ಸ) ರವರ ಭವಿಷ್ಯವಾಣಿಗಳು ಪೂರ್ಣವಾಗಿವೆ. ಅವರ ಅಸ್ತಿತ್ವ ಸತ್ಯತೆಯ ಕುರುಹು ಆಗಿದೆ. ಆ ಮೂಲಕ ನಾವು ವಿರೋಧಿಗಳ ಮೇಲೆ ನ್ಯಾಯತೀರ್ಪುಕರಣಗೊಳಿಸುತ್ತೇವೆ. ಅದೇ ರೀತಿ ನಾವು ಬೈಅತ್ ಮಾಡದವರ ಬಂದುಗಳಿಗೆ ಹೇಳುವುದೇನೆಂದರೆ: ಅಲ್ಲಾಹನು ಹಝ್ರತ್ ಫಝ್ಲೆ ಉಮರ್(ರ) ಅವರ ಮೂಲಕ ಹಝ್ರತ್ ಮಸೀಹ್ ಮೌಊದ್(ಅ) ರವರ ಒಂದು ಮಹೋನ್ನತವಾದ ಭವಿಷ್ಯವಾಣಿ ಪೂರ್ಣಗೊಂಡಿದೆ. ಮತ್ತು ಇದು ಅವರ ಸತ್ಯತೆಯ ಒಂದು ಬಹುದೊಡ್ಡ ದೃಷ್ಟಾಂತ ಪ್ರಕಟವಾದಂತಾಗಿದೆ. ಆದ್ದರಿಂದ ಹಝ್ರತ್ ಮಸೀಹ್ ಮೌಊದ್(ಅ) ರವರ ಮೇಲೆ ವಿಶ್ವಾಸ ತಂದ ನೀವು, ಅವರ ಸತ್ಯತೆಯ ಈ ದೃಷ್ಟಾಂತವನ್ನು ನಂಬುವುದು ನಿಮ್ಮ ಕರ್ತವ್ಯವಾಗಿರುತ್ತದೆ. ಲೋಕಕ್ಕೆ ತಿಳಿಸಿರಿ, ನೋಡಿ ಯಾವ ರೀತಿ ಹಝ್ರತ್ ಮಸೀಹ್ ಮೌಊದ್ (ಅ) ರವರ ಭವ್ಯವಾದ ಭವಿಷ್ಯವಾಣಿಯನ್ನು ಪವಾಡದೃಶ್ಯ ರೂಪದಲ್ಲಿ ಪೂರ್ಣಗೊಳಿಸಿ ಅವರ ಸತ್ಯತೆಗೆ ಒಂದು ಬಹುದೊಡ್ಡ ಸಾಕ್ಷ್ಯವನ್ನು ಒದಗಿಸಿದೆ. ಇದರ ಮುಂದೆ ಪ್ರತಿಯೊಬ್ಬ ದೇವಭಯಯುಳ್ಳವರ ಮತ್ತು ಯೋಚನಾಶಕ್ತಿಯುಳ್ಳವನಿಗೆ ತಲೆಬಾಗುವಂತೆ ಮಾಡುತ್ತದೆ. ಆದರೆ ನೀವು ಹಟ ಮತ್ತು ದ್ವೇಷಭಾವದಿಂದಾಗಿ ಹಝ್ರತ್ ಮಸೀಹ್ ಮೌಊದ್ (ಅ) ರವರ ಈ ಪ್ರಜ್ವಲಿಸುವ ದೃಷ್ಟಾಂತವನ್ನು ಧಿಕ್ಕರಿಸಿದರೆ ಅದೇ ರೀತಿ ಅಲ್ಲಾಹನ ದೃಷ್ಟಿಯಲ್ಲಿ ಅಪರಾದಿಗಳಾಗುವಿರಿ. ಯಾವ ರೀತಿ ಅಹ್ಮದಿಯೇತರರು ಹಝ್ರತ್ ಮಸೀಹ್ ಮೌಊದ್ (ಅ) ರವರನ್ನು ದಿಕ್ಕರಿಸಿ, ಅವರ ಮೂಲಕ ಪವಿತ್ರ ಪ್ರವಾದಿರವರ ಭವಿಷ್ಯವಾಣಿ ಪೂರ್ಣಗೊಂಡಿತ್ತು. ಅವರ ಅಸ್ತಿತ್ವ ಹಝ್ರತ್ ಪೈಗಂಬರ್(ಸ) ಅವರ ಸತ್ಯತೆಯ ಪ್ರತೀಕವಾಗಿತ್ತು. ಅಲ್ಲಾಹನ ದೃಷ್ಟಿಯಲ್ಲಿ ಅಪರಾಧಿಗಳಾಗಿದ್ದಾರೆ.

...*...*...*...

## ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ವಾರಪತ್ರಿಕೆ "ಬದರ್" ಇದೀಗ ಕನ್ನಡದಲ್ಲಿ ಪ್ರಕಟಗೊಳ್ಳುತ್ತಿದೆ.

ಈ ಪತ್ರಿಕೆಯ ಹೆಸರು **"ಬದರ್"** ಎಂದಾಗಿದೆ. ಪೂರ್ಣ ಚಂದ್ರ ಎಂದರ್ಥ. ಇದು ಜಮಾಅತೆ ಅಹ್ಮದಿಯದ ಒಂದು ಧಾರ್ಮಿಕ ಪತ್ರಿಕೆ ಆಗಿದೆ ಅದರ ಮೂಲ ಉದ್ದೇಶ ಜಮಾಅತ್ತಿನ ಸದಸ್ಯರ ತರಬೇತಿ, ಶಿಕ್ಷಣ, ಒಳ್ಳೆ ನೈತಿಕತೆ ಕಲಿಸುವುದಾಗಿದೆ.

ನಮ್ಮ ಎರಡು ಉದ್ದೇಶಗಳಿವೆ. ಒಂದು ಅಲ್ಲಾಹನ ಹಕ್ಕನ್ನು ನಿಭಾಯಿಸುವುದು ಇನ್ನೊಂದು ದಾಸರ ಹಕ್ಕನ್ನು ನಿಭಾಯಿಸುವುದಾಗಿದೆ.

ಅಲ್ಲಾಹನ ಹಕ್ಕು ಏನಾಗಿದೆ ಎಂದರೆ ಅವನನ್ನು ಆರಾಧಿಸುವುದು ಅವನು ಎಲ್ಲಾ ಸ್ತುತಿ ಸರ್ವ ಲೋಕಗಳ ಪರಿಪಾಲಕನಾಗಿದ್ದಾನೆ ಮತ್ತು ಅವನ ಉಪಕಾರಗಳನ್ನು ನೆನಪಿಸಿಕೊಂಡು ಅವನಿಗೆ ವಿಧೇಯತೆ ತೋರಿಸುವುದಾಗಿದೆ.

ಇನ್ನೊಂದು ದಾಸರ ಹಕ್ಕನ್ನು ನಿಭಾಯಿಸುವುದಾಗಿದೆ. ದಾಸರ ಹಕ್ಕುಗಳೇನಂದರೆ ಅಗತ್ಯವುಳ್ಳವರನ್ನು ಸಹಾಯ ಮಾಡುವುದು, ಯಾರನ್ನು ದುಃಖ, ತೊಂದರೆ ಅಥವಾ ಸಂಕಷ್ಟ ಕೊಡಬಾರದು, ರಾಷ್ಟ್ರದಲ್ಲಿ ಕಿಡಿಗೇಡಿತನ ಹುಟ್ಟಿಸಬಾರದು, ಸ್ವದೇಶ ಪ್ರೇಮ ಈಮಾನಿನ ಒಂದು ಭಾಗವಾಗಿದೆ ಹಾಗೂ ಸ್ವದೇಶದ ಅಭಿವೃದ್ಧಿಗಾಗಿ ಶ್ರಮವಹಿಸುವುದಾಗಿದೆ.

ಈ ಪತ್ರಿಕೆಯು 100 ವರ್ಷಕ್ಕಿಂತ ಹೆಚ್ಚು ಕಾಲಾವಧಿಯಿಂದ ಈ ಉದ್ದೇಶದ ಪ್ರಕಾರ ಜಮಾಅತ್ತಿನ ಸದಸ್ಯರ ಶೈಕ್ಷಣಿಕವಾಗಿ ತರಬೇತಿ ಮಾಡುತ್ತಾ ಬಂದಿದೆ. ಅದರ ಪ್ರತಿ ಫಲವಾಗಿ ನಮಗೆ ಅಲ್ಲಾಹನ ಅನುಗ್ರಹದಿಂದ ಶಾಂತಿಯುತ ಪಂಗಡ ಎಂದು ವಿಶ್ವದಾದ್ಯಂತ ಪರಿಗಣಿಸುತ್ತಾರೆ.

ಅಕ್ಟೋಬರ್ 1902ರಲ್ಲಿ ಜಾಗತಿಕ ಅಹ್ಮದಿಯ ಮಯಸ್ಲಿಮ್ ಜಮಾಅತ್ತಿನ ಸಂಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖದಿಯಾನಿ(ಅಲೈಹಿಸ್ಸಲಾಮ್) ಅವರು ಈ ಪತರಿಕೆಯನ್ನು ಉರ್ದು ಭಾಷೆಯಲ್ಲಿ ಉದ್ಘಾಟಿಸಿದರು. ಇಂದು ಈ ಪತ್ರಿಕೆಯು ಭಾರತದ ಏಳು ಭಾಷೆಗಳಲ್ಲಿ ಭಾಷಾಂತರವಾಗಿ ಪ್ರಕಟಗೊಳ್ಳುತ್ತಿದೆ. ಉರ್ದುವನ್ನು ಬಿಟ್ಟು ಹಿಂದಿ, ತಮಿಳು, ತೆಲುಗು, ಬಾಂಗ್ಲ, ಒಡಿಯಾ, ಮಳಯಾಳಂ ಹಾಗೂ ಕನ್ನಡ. ಕಳೆದ 4 ವರ್ಷದಿಂದ ಕನ್ನಡ ಭಾಷೆಯಲ್ಲಿಯು ಈ ಪತ್ರಿಕೆಯು ಪ್ರಕಟಗೊಳ್ಳುತ್ತಿರುವುದು ಬಹಳ ಸಂತೋಷದ ವಿಷಯವಾಗಿದೆ. ಈ ಪತ್ರಿಕೆಯು ಧಾರ್ಮಿಕ ಪತ್ರಿಕೆ ಆದ್ದರಿಂದ ರಾಜಕೀಯ ನಿಟ್ಟಿನಲ್ಲಿ ಯಾವ ಸಂಬಂಧವೂ ಇಲ್ಲ.

ಈ ಪತ್ರಿಕೆಯಲ್ಲಿ ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್‌ರವರ ಶುಕ್ರವಾರದ ಪ್ರವಚನ (ಖುತ್‌ಬ ಜುಮುಅ) ವಿಶೇಷವಾಗಿರುತ್ತದೆ. ಆ ಖುತ್‌ಬದಲ್ಲಿ ಅವರು ಪವಿತ್ರ ಖುರ್‌ಆನ್ ಹಾಗೂ ಹದೀಸ್‌ಗಳ ಶಿಕ್ಷಣಗಳ ಪ್ರಕಾರ ತಮ್ಮ ಜಮಾಅತ್ತಿನ ಸದಸ್ಯರನ್ನು ಸಂಬೋಧಿಸುತ್ತಾರೆ. ನಿಮ್ಮ ಈ ಪ್ರವಚನವೂ ಎಂ.ಟಿ.ಎ ಎಂಬ ಚ್ಯಾನಲ್‌ನಲ್ಲಿ ಪ್ರತಿ ಶುಕ್ರವಾರ ನೇರವಾಗಿ ಪ್ರಸಾರವಾಗುತ್ತದೆ. ಅದನ್ನು ಇಡೀ ವಿಶ್ವದಾದ್ಯಂತ ಕೇಳ ಹಾಗೂ ನೋಡಬಹುದು. ತದನಂತರ ಈ ಖುತ್‌ಬ ಪತ್ರಿಕೆಯಲ್ಲಿ ಪಕಟಗೊಳ್ಳುತ್ತದೆ. ಖಲೀಫರ ಖುತ್‌ಬ ಈ ಪತ್ರಿಕೆಯ ಪ್ರಾಣವಾಗಿದೆ.

ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ವಾಗ್ದಾತ್ತ ಮಹೀಹರ 5ನೇ ಖಲೀಫರಾಗಿದ್ದಾರೆ ಅವರು ಲಂಡನ್‌ನಲ್ಲಿ ವಾಸವಾಗಿದ್ದಾರೆ. ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಇಮಾಮರಾಗಿದ್ದಾರೆ. ಅದಲ್ಲದೆ ಈ ಪತ್ರಿಕೆಯಲ್ಲಿ ಖಲೀಫರ ಪ್ರವಾಸಗಳ ವರದಿಗಳು ಪ್ರಕಟಗೊಳ್ಳುತ್ತದೆ ಅವೂ ಬಹಳ ಕುತೂಹಲಕಾರಿ ಆಗಿರುತ್ತದೆ. ಈ ವರದಿಗಳು ಜಮಾಅತ್ತಿನ ಸದಸ್ಯರ ಜ್ಞಾನ ಅಭಿವೃದ್ಧಿಯಲ್ಲಿ ವಿಶೇಷವಾಗಿ ಕಾರ್ಯ ನಿರ್ವಹಿಸುತ್ತದೆ. ಇದಲ್ಲದೆ ಜಮಾಅತ್ತಿನ ಕಾರ್ಯಗಳ ವರದಿಗಳು ಮತ್ತು ಆಧ್ಯಾತ್ಮಿಕ ಹಾಗೂ ಶೈಕ್ಷಣಿಕ ಅಭಿಮೃದ್ಧಿಸುವಂತಹ ಜ್ಞಾನ ಭರಿತ ಲೇಖನಗಳು ಪ್ರಕಟಗೊಳ್ಳುತ್ತದೆ.

ಹೀಗಾಗಿ ಈ ಪತ್ರಿಕೆಯು ಮಹತ್ವಪೂರ್ಣವಾದ ಪತ್ರಿಕೆ ಆಗಿದೆ.

ಎಲ್ಲಾ ಓದುಗರಲ್ಲಿ ಈ ಪತ್ರಿಕೆಯನ್ನು ಕೊಂಡುಕೊಳ್ಳಬೇಕಾಗಿ ವಿನಂತಿಸಲಾಗುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: +91 99153 79255, 9902678609, 9866358609 (ವ್ಯವಸ್ಥಾಪಕರು)


## ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್‌ನ ಸಂಸ್ಥೆಗಳಲ್ಲಿ ಸೇವೆಸಲ್ಲಿಸಲು ಆಸಕ್ತಿ ಹೊಂದಿದವರು ಗಮನಿಸಬೇಕು

### ದಾರುಸ್ಸನಾತ್ ಖಾದಿಯಾನ್‌ನಲ್ಲಿ AC & Refrigerator ನ ಅಧ್ಯಾಪಕದ ಬಗ್ಗೆ ಜಾಹೀರಾತು

**ಷರತ್ತುಗಳು:**

(1) ಅಭ್ಯರ್ಥಿಯ ಶಿಕ್ಷಣವು **Air Conditioning & Refregeration Engineering**ನಲ್ಲಿ ಪದವಿ/ಡಿಪ್ಲೊಮಾ ಆಗಿರಬೇಕು ಅಥವಾ ಸರ್ಕಾರದ ಅಧಿಕೃತ ಸಂಸ್ಥೆಯಿಂದ ತತ್ಸಮಾನವಾಗಿರಬೇಕು ಮತ್ತು ಕೋರ್ಸ್ ಅನ್ನು ಪೂರ್ಣಗೊಳಿಸಿದ ನಂತರ 6 ತಿಂಗಳ ಅನುಭವವನ್ನು ಪಡೆದಿರಬೇಕು.

(2) ಅಭ್ಯರ್ಥಿಗೆ ಉರ್ದು, ಹಿಂದಿ ಭಾಷೆಯಲ್ಲಿ ಸಂಬಂಧಿತ ವಿಷಯವನ್ನು ವಿದ್ಯಾರ್ಥಿಗಳಿಗೆ ಬೋಧಿಸುವ ಸಾಮರ್ಥ್ಯವನ್ನು ಹೊಂದಿರಬೇಕು ಮತ್ತು ಪ್ರಾಯೋಗಿಕ ಕೌಶಲ್ಯಗಳನ್ನು ಉತ್ತಮ ರೀತಿಯಲ್ಲಿ ಪ್ರದರ್ಶಿಸಬೇಕು.

(3) ಬದರ್ ವಾರಪ್ತರಿಕೆಯಲ್ಲಿ ಪ್ರಕಟವಾದ ಕೊನೆಯ ಪ್ರಕಟದ ನಂತರ 2 ತಿಂಗಳೊಳಗೆ ಸ್ವೀಕರಿಸಲಾಗುವ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.

(4) ಸಂದರ್ಶನದಲ್ಲಿ ಯಶಸ್ವಿನ ಸಂದರ್ಭದಲ್ಲಿ, ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯನ್‌ನಲ್ಲಿ ವೈದ್ಯಕೀಯ ತಪಾಸಣೆಗೆ ಒಳಗಾಗಬೇಕಾಗುತ್ತದೆ ಮತ್ತು ನೂರ್ ಆಸ್ಪತ್ರೆ ಸಮಿತಿಯ ವರದಿಯ ಪ್ರಕಾರ ಯಾರು ಆರೋಗ್ರವಂತಿರುತ್ತಾರೊ ಆ ಅಭ್ಯರ್ಥಿಗಳು ಮಾತ್ರ ಸೇವೆಸಲ್ಲಿಸಲು ಅರ್ಹರಾಗಿರುತ್ತಾರೆ.

(5) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಖಾದಿಯಾನ್‌ನಲ್ಲಿ ತನ್ನ ಸ್ವಂತ ವಸತಿಯನ್ನು ವ್ಯವಸ್ಥೆಗೊಳಿಸಬೇಕಾಗುತ್ತದೆ.

(6) ಖಾದಿಯಾನ್ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯ ಸ್ವಂತ ಜವಾಬ್ದಾರಿಯಗಿರುತ್ತದೆ.

**ಗಮನಿಸಿ: ಅಭ್ಯರ್ಥಿಗಳಿಗೆ ಸಂದರ್ಶನದ ದಿನಾಂಕವನ್ನು ನಂತರ ತಿಳಿಸಲಾಗುವುದು.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

ನಝಾರತ್ ದೀವಾನ್ ಸ್ ಅಂಜುಮನ್ ಅಹ್ಮದಿಯಾ
ಖಾದಿಯಾನ್-143516
ಮೊಬೈಲ್: 09646351280, 09682587713,
ಕಛೇರಿ: 01872-501130
ಈ-ಮೇಲ್: diwan@qadian.in

# ಸಮಾಧಿಗಳ ಮೇಲೆ ಹೂವುಗಳನ್ನು ಹಾಕುವುದು – ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ರವರ ಉಪದೇಶ ಮತ್ತು ಆ ಉಪದೇಶದ ಬುದ್ಧಿವಂತಿಕೆ

(ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂಎ(ರ))

ಕೆಲವು ದಿನಗಳ ಮುಂಚೆ, ನಝಾರತ್ ಇಸ್ಲಾಹ್ ವ ಇರ್ಶಾದ್ ರಬ್ವಾಹ್‌ದ ವತಿಯಿಂದ ದಿನಾಂಕ 12 ಆಗಸ್ಟ್ ನಲ್ಲಿ ಅಲ್‌ಫಝಲ್‌ನಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ರವರ ಸಮಾಧಿಗಳ ಮೇಲೆ ಹೂವುಗಳನ್ನು ಇಡುವ ಕುರಿತು ಒಂದು ಫತ್ವವನ್ನು ಪ್ರಕಟಿಸಲಾಗಿತ್ತು. ಈ ಫತ್ವ ಅದರ ಸ್ಥಿತಿಯಲ್ಲಿ ತುಂಬಾ ಉತ್ತಮವಾಗಿದೆ, ಆದರೆ ಈ ಫತ್ವಾವನ್ನು ಕೇವಲ ಒಂದು ನಿರ್ದಿಷ್ಟ ಅಂಶವನ್ನು ಗಮನದಲ್ಲಿಟ್ಟುಕೊಂಡು ನೀಡಲಾಗಿತ್ತು. ಏಕೆಂದರೆ ಫತ್ವ ಕೇಳಿದ ವ್ಯಕ್ತಿಯು ಕೇವಲ ಮೃತನ ಆತ್ಮವನ್ನು ಸಾಂತ್ವನಗೊಳಿಸುವ ಉದ್ದೇಶಕ್ಕಾಗಿ ಖಬರ್‌ಗಳ ಮೇಲೆ ಹೂವುಗಳನ್ನು ಹಾಕಬಹುದೇ ಎಂದು ಮಾತ್ರ ಕೇಳಿದ್ದನು ಅದಕ್ಕಾಗಿ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ರವರು ಅದನ್ನು ನಾವೀನ್ಯವೆಂದು ಘೋಷಿ ಅದನ್ನು ಕಾನೂನುಬಾಹಿರ ಮತ್ತು ಷರೀಅತ್ ವಿರುದ್ಧವಾಗಿದೆ ಎಂದು ಹೇಳಿದರು. ಆದರೆ ಈ ಫತ್ವದ ನಂತರವು ಈ ಸಮಸ್ಯೆಯ ಈ ಅಂಶವನ್ನು ವಿವರಿಸುವ ಅಗತ್ಯವಿರುತ್ತದೆ ಅದೇನೆಂದರೆ ಆತ್ಮಕ್ಕೆ ಸಾಂತ್ವಾನಗೊಳಿಸುವ ಉದ್ದೇಶದ ಹೊರತು ಸಮಾದಿಗಳ (ಖಬರ್) ಅಲಂಕಾರ ಇತ್ಯಾದಿಗಳ ಉದ್ದೇಶದಿಂದ ಖಬರ್ ಮೇಲೆ ಹೂವುಗಳನ್ನು ಇರಿಸಬಹುದೇ? ಆದ್ದರಿಂದ, ಈ ಬಗ್ಗೆ, ನಾನು ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ರವರ ಒಂದು ಅಧ್ಯಾಪನೆಯನ್ನು ನೆನಪಿಸಿಕೊಳ್ಳುತ್ತೇನೆ, ಅದರಲ್ಲಿ ಸಮಸ್ಯೆಯ ಈ ಅಂಶವೂ ಬೆಳಕು ಚೆಲ್ಲುತ್ತದೆ, ಅದರ ವಿವರಣೆ ಹೀಗಿದೆ:

1938 ರಲ್ಲಿ (ಬಹುಶಃ ಅದು ವರ್ಷ 38ನೇ ಆಗಿರಬಹುದು) ಮಿರ್ಝಾ ಅಝೀಝ್ ಅಹ್ಮದ್ ಸಾಹಿಬ್ ಎಂಎ ಅವರ ದಿವಂಗತ ಪುತ್ರ ಅಝೀಝ್ ಸಈದ್ ಅಹ್ಮದ್ ಅವರ ಶವಪೆಟ್ಟಿಗೆಯು ಲಂಡನ್‌ನಿಂದ ಬಂದಿತು. ಅವರನ್ನು ಮಕ್ಕಳ ರುದ್ರಭೂಮಿಯಲ್ಲಿ ದಫನ್ ಮಾಡಲಾಗುತ್ತಿತ್ತು. ಆ ಸಂದರ್ಭದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ಅತಬಿಅ)ರವರು ಜನಾಝದೊಂದಿಗೆ ರುದ್ರಭೂಮಿಯ ತನಕ ಹೋದರು. ಖಬರ್ ಸಿದ್ಧವಾದಾಗ, ಅಲ್ಲಿನ ಸ್ನೇಹಿತರಲ್ಲಿ ಒಬ್ಬರು ಅಲಂಕಾರ ಮತ್ತು ಗೌರವದ ಕಲ್ಪನೆಯೊಂದಿಗೆ ಖಬರ್ ಮೇಲೆ ಕೆಲವು ಹೂವುಗಳನ್ನು ಚೆಲ್ಲಲು ಬಯಸಿದ್ದರು, ಆದರೆ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಸಾನಿ(ರಅತಬಿಅ)ರವರು ಅವನನ್ನು ತಡೆದು ಹೀಗೆ ಹೇಳಿದರು (ಬಹುಶಃ ಇದೇ ರೀತಿಯ ಪದಗಳಿದ್ದವು):

"ಇದು ಧರ್ಮಸಮ್ಮತವಲ್ಲ ಹೀಗೆ ಮಾಡುವುದರಿಂದ ನಾವೀನ್ಯತೆಗೆ ದಾರಿ ತೆರೆಯುತ್ತದೆ."

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ರವರ ಮೇಲೆ ವಿವರಿಸಲಾದ ಫತ್ವದೊಂದಿಗೆ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ)ರವರ ಈ ಫತ್ವವನ್ನು ಜೋಡಿಸಿದರೆ ಸಂಪೂರ್ಣ ಫತ್ವವಾಗುತ್ತದೆ. ಇದರಲ್ಲಿ ಈ ಸಮಸ್ಯೆಯ ಎಲ್ಲಾ ಅಂಶಗಳು ಒಳಗೊಂಡಿರುತ್ತದೆ ಮತ್ತು ವಾಸ್ತವವೆಂದರೆ ಖಬರ್ ಮೇಲೆ ಹೂವುಗಳನ್ನು ಹಾಕುವುದರಲ್ಲಿ ಬಾಹ್ಯವಾಗಿ ಮುಗ್ಧವಿಷಯ ಎಂದು ತೋರುತ್ತದೆ ಮತ್ತು ಇದು ಸತ್ತವರನ್ನು ಗೌರವಿಸುವಂತೆ ತೋರುತ್ತದೆ, ಆದರೆ ಚಿಂತನಶೀಲ ವ್ಯಕ್ತಿಯು ಅದರಲ್ಲಿ ಎರಡು ರೀತಿಯ ತಪ್ಪುಗಳ ದೊಡ್ಡ ಅಪಾಯವಿದೆ ಎಂದು ಅರ್ಥಮಾಡಿಕೊಳ್ಳಬಹುದು.

(1) ಮೊದಲನೆಯದು ಈ ರೀತಿಯಲ್ಲಿ ಬಹುದೇವತಾವಾದದ ಮಾರ್ಗವು ಕ್ರಮೇಣ ತೆರೆದುಕೊಳ್ಳುತ್ತದೆ ಮತ್ತು ಆರಂಭದಲ್ಲಿ ಅದು ಸಾಮಾನ್ಯ ಗೌರವದ ಉದ್ದೇಶದಿಂದ ಪ್ರಾರಂಭವಾಗುತ್ತದೆ ಮತ್ತು ಅಂತಿಮವಾಗಿ ಸಮಾಧಿಗಳಿಗೆ ಅಸಾಮಾನ್ಯ ಗೌರವದ ಮಟ್ಟವನ್ನು ತಲುಪುತ್ತದೆ, ಬದಲಿಗೆ ಸಮಾಧಿ ಪೂಜೆಗೆ ವಿಷಯ ತಲುಪುತ್ತದೆ. ಆದ್ದರಿಂದ, ಈ ಯುಗದಲ್ಲಿ, ಲಕ್ಷಾಂತರ ಮುಸ್ಲಿಮರು ಸಮಾಧಿಗಳಿಗೆ ಸಜದಗಳನ್ನು (ಸಾಷ್ಟಾಂಗ ನಮಸ್ಕಾರ) ಮಾಡುವ ಮೂಲಕ ತಮ್ಮ ಭವಿಷ್ಯವನ್ನು ನಾಶಪಡಿಸುತ್ತಾರೆ, ಆದರೆ ಸಾಷ್ಟಾಂಗವೆರಗುವ ಹಿರಿಯರ ಸಮಾಧಿಗಳು ಈ ವಿಧಾನಕ್ಕೆ ಸಾಕ್ಷಿಯಾಗಿರಲಿಲ್ಲ ಮತ್ತು ಅದರ ಅಂತ್ಯವು ಒಳ್ಳೆಯದಲ್ಲ ಎಂದು ತಿಳಿದಿದ್ದರು. ನಮ್ಮ ಪವಿತ್ರ ಪ್ರವಾದಿ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ರವರು ಅಮಲು ಪದಾರ್ಥಗಳ ವಿಷಯದಲ್ಲಿ ಎಂತಹ ಬುದ್ಧಿವಾದ ಹೇಳಿದ್ದಾರೆ,

**ಮಾ ಅಸ್ಕರ ಕಸೀರುಹೂ ಫಖಲೀಲುಹೂ ಹರಾಮುನ್** "ಅಂದರೆ ಯಾವ ಪದಾರ್ಥವು ಹೆಚ್ಚಿನ ಪ್ರಮಾಣದಲ್ಲಿ ಮಾದಕತೆಯನ್ನು ಉಂಟುಮಾಡುತ್ತದೆಯೊ ಅದರಲ್ಲಿ ಸ್ವಲ್ಪ ಪ್ರಮಾಣವೂ ಹರಾಮ್ ಆಗಿದೆ."

ಈ ಸೂಕ್ಷ್ಮವಾದ ಉಪದೇಶದಲ್ಲಿನ ಬುದ್ಧಿವಂತಿಕೆ ಏನೆಂದರೆ ವಿಷಯಗಳ ಆರಂಭವು ತೋರಿಕೆಯಲ್ಲಿ ಚಿಕ್ಕದಾಗಿರುತ್ತದೆ ಮತ್ತು ಅತ್ಯಲ್ಪವಾಗಿರುತ್ತದೆ ಮತ್ತು ವಿಷಯವು ಸಂಪೂರ್ಣವಾಗಿ ಮುಗ್ಧವಾಗಿ ಕಾಣುತ್ತದೆ, ಆದರೆ ಅವರ ಸಂಪತ್ತು ಮತ್ತು ಅಂತ್ಯವು ವಿನಾಶಕಾರಿಯಾಗಿರುವುದರಿಂದ ಮತ್ತು ಮಾನವರು ಸ್ವಭಾವತಃ ದುರ್ಬಲ ಮನಸ್ಸಿನವರಾಗಿರುವುದರಿಂದ, ಅವರು ಪ್ರಾರಂಭಿಸುವ ಮೂಲಕ ಒಂದು ಹೆಜ್ಜೆ ಮುಂದಿಡುತ್ತಾನೆ. ಒಂದು ಸಣ್ಣ ವಿಷಯದೊಂದಿಗೆ, ಇದು ಮುಂದುವರಿಯುವ ಪ್ರವೃತ್ತಿಯನ್ನು ಹೊಂದಿದೆ, ಆದ್ದರಿಂದ ಶರಿಯತ್ ಪರಿಪೂರ್ಣ ಬುದ್ಧಿವಂತಿಕೆಯಿಂದ ಬೇರಿನ ಮೇಲೆ ತನ್ನ ಕೈಯನ್ನು ಇರಿಸಿ ಅದರ ಸ್ಪಷ್ಟವಾದ ಮುಗ್ಧ ಭಾಗವನ್ನು ನಿಷೇಧಿಸಿದೆ, ಇದರಿಂದಾಗಿ ಜನರು ಎಲ್ಲಾ ರೀತಿಯ ಸಂಭಾವ್ಯ ಎಡವಟ್ಟುಗಳನ್ನು ತಪ್ಪಿಸಬಹುದು. ಆದ್ದರಿಂದ, ಹಝ್ರತ್ ಪೈಗಂಬರ್(ಸ) ಅವರು ಮರಣಾ ಸನ್ನಾಸ್ಥಿತಿಯಲ್ಲಿ ಹೇಳಿದರು, "ನೋಡಿ ನನ್ನ ನಂತರ ನನ್ನ ಖಬರ್ ಅನ್ನು (ಸಜದಗಾಹ್) ಸಾಷ್ಟಾಂಗವನ್ನಾಗಿ ಮಾಡಬೇಡಿ." ಹಝ್ರತ್ ಪೈಗಂಬರ್(ಸ) ಅವರಿಗೆ ತಿಳಿದಿತ್ತು ನಿಮ್ಮ ಸಹಾಬರವರು ಇಂತಹ ಕೃತ್ಯ ಮಾಡುವುದಿಲ್ಲ ಎಂದು ಆದರೆ ನೀವು ದೂರದ ಅಪಾಯಗಳನ್ನು ನೋಡುತ್ತಿದ್ದರು.

ಈ ಹೇಳಿಕೆಯಲ್ಲಿನ ಎರಡನೇ ಮಾನಸಿಕ ಅಂಶವೆಂದರೆ, ಮರಣ ಹೊಂದಿದವನು ಅಲ್ಲಾಹನ ಅನುಗ್ರಹದಿಂದ ಸಜ್ಜನವ್ಯಕ್ತಿ ಮತ್ತು ಸ್ವರ್ಗೀಯ ವ್ಯಕ್ತಿಯಾಗಿದ್ದರೆ ಆತನ ಖಬರ್ ಮೇಲೆ ಹೂವುಗಳನ್ನು ಇಡುವುದರಲ್ಲಿ ಯಾವುದೇ ವಾಸ್ತವವಿಲ್ಲ, ಏಕೆಂದರೆ ಆತ್ಮವು ಸ್ವರ್ಗವನ್ನು ತಲುಪಿದೆ ಮತ್ತು ಸ್ವರ್ಗದ ಪರಮ ಅನುಗ್ರಹಗಳಿಗೆ ಪ್ರವೇಶಿಸಿದೆ ಅಥವಾ ಕನಿಷ್ಟಪಕ್ಷ ಈ ಹಾದಿಯಲ್ಲಿ ಹೋಗಿದೆ ಇದಕ್ಕೆ ಈ ಐಹಿಕ ಹೂವುಗಳ ವಾಸ್ತವತೆ ಏನು? ಮತ್ತು ಈ ಹೂವುಗಳಿಂದ ಅವನಿಗೆ ಏನು ಸಂತೋಷ ಲಭಿಸುತ್ತದೆ! ಬದಲಿಗೆ, ಅದು ಈ ಹೂವುಗಳನ್ನು ಸ್ವರ್ಗದ ಹೂವುಗಳ ಮುಂದೆ ತನಗೆ ಅವಮಾನದ ಮೂಲವೆಂದು ಪರಿಗಣಿಸುತ್ತದೆ. ಮತ್ತೊಂದೆಡೆ, ಒಂದುವೇಳೆ ದೇವರ ಇಚ್ಛೆಯಿಂದ ಸಾಯುವ ವ್ಯಕ್ತಿಯು ನರಕವಾಸಿಯಾಗಿದ್ದರೆ, ಹೂವುಗಳು ಅವನಿಗೆ ಒಂದು ತುಣುಕಿನ ಪ್ರಯೋಜನವು ನೀಡುವುದಿಲ್ಲ, ಆದರೆ ಅವನ ಆತ್ಮವು (ಅದು ತಿಳಿದಿದ್ದರೆ) ನನ್ನ ಆತ್ಮೀಯರು ಮತ್ತು ನನ್ನ ವಾರಸುದಾರರು ನನ್ನನ್ನು ನೋಡಿ ನಗುತ್ತಿದ್ದಾರೆ ಎಂದು ಭಾವಿಸುತ್ತದೆ. ನಾನು ನರಕದ ಬೆಂಕಿಯಲ್ಲಿ ಉರಿಯುತ್ತಿದ್ದೇನೆ ಮತ್ತು ಅವರು ನನ್ನ ಮೇಲೆ ಹೂವುಗಳನ್ನು ಎಸೆಯುತ್ತಿದ್ದಾರೆ!!! ಆದ್ದರಿಂದ, ಯಾವುದೇ ನಿಟ್ಟಿನಿಂದ ನೋಡಿದರೂ, (ಖಬರ್) ಸಮಾಧಿಯ ಮೇಲೆ ಹೂಗಳನ್ನು ಹಾಕುವುದು ಅಥವಾ ಇಡುವುದು ಒಂದು ಬಿದ್‌ಅತ್ ನಾವೀನ್ಯತೆ ಆಗಿದೆ. ಅದರ ಯಾವುದೇ ಪ್ರಯೋಜನವಿಲ್ಲ ಬದಲಿಗೆ ಅದು ಸಂಪೂರ್ಣವಾಗಿ ಹಾನಿಕಾರಕವಾಗಿದೆ ಏಕೆಂದರೆ ಒಂದೆಡೆ ಅದು ಸತ್ತವರಿಗೆ ಚಿತ್ರಹಿಂಸೆಯ ಮೂಲವಾಗಿದೆ ಮತ್ತು ಮತ್ತೊಂದೆಡೆ, ಅದು ಶಿರ್ಕ್‌ಗೆ ದಾರಿ ತೆರೆಯುತ್ತದೆ. ಹಝ್ರತ್ ಪೈಗಂಬರ್(ಸ) ಅವರ ಕಾಲದಲ್ಲಿ ಮತ್ತು ಈಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಮಯದಲ್ಲಿ ಯಾವುದೇ ಸತ್ಯವಿಶ್ವಾಸಿಯು ಅಂತಹ ಯಾವುದೇ ವಿಷಯವು ಹೇಳಲಿಲ್ಲ.

ನಿಸ್ಸಂದೇಹವಾಗಿ, ಇಸ್ಲಾಮಿನಲ್ಲಿ ಸಮಾಧಿಗಳಿಗೆ ಕಡ್ಡಾಯವಾದ ಗೌರವದ ಆಜ್ಞೆಯಿದೆ ಮತ್ತು ಅವುಗಳ ಮೇಲೆ ಕುಳಿತುಕೊಳ್ಳುವುದನ್ನು ಅಥವಾ ನಿಮ್ಮ ಪಾದಗಳನ್ನು ಇಡುವುದನ್ನು ತಡೆಯಲು ಸೂಚನೆ ನೀಡಲಾಗಿದೆ ಮತ್ತು ಅವುಗಳನ್ನು ಸಾಧ್ಯವಾದಷ್ಟು ಸ್ವಚ್ಛವಾಗಿ ಮತ್ತು ಅಚ್ಚುಕಟ್ಟಾಗಿ ಮಾಡಬಹುದು, ಆದರೆ ಅದು ಕೇವಲ ಸತ್ತವರನ್ನು ಅವಮಾನಿಸಬಾರದು ಮತ್ತು ಅವರ ಸಂಬಂಧಿಕರು ಮತ್ತು ಪ್ರೀತಿಪಾತ್ರರ ಭಾವನೆಗಳನ್ನು ನೋಯಿಸಬಾರದು ಎಂದು ಕಡ್ಡಾಯ ಗೌರವದ ಪ್ರಮಾಣವಾಗಿದೆ. ಅದಕ್ಕಿಂತ ಹೆಚ್ಚಿನದು ಮತ್ತು ಅದಕ್ಕೂ ಮೀರಿ ಹೋಗುವುದು ಸತ್ತವರ ಬಗ್ಗೆ ಗೌರವವಿಲ್ಲದ ಬಿದ್‌ಅತ್‌ಗೆ ಪ್ರವೇಶಿಸುವುದಾಗಿದೆ ಆದರೆ ನಾನು ಮೇಲೆ ವಿವರಿಸಿದಂತೆ, ಅದು ನಿಜವಾಗಿ ಅವರ ಹೃದಯವನ್ನು ನೋಯಿಸುತ್ತದೆ ಮತ್ತು ಅಂತಹ ಬಿದ್‌ಅತ್‌ಗಳು ಎಂದಿಗೂ ಉತ್ತಮವಾಗಿ ಕೊನೆಗೊಳ್ಳುವುದಿಲ್ಲ. ಸಮಾಧಿಗಳಿಗೆ ಭೇಟಿ ನೀಡುವ ಏಕೈಕ ಉದ್ದೇಶವು ಮೃತರ ಮಗ್‌ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ಪ್ರಾರ್ಥಿಸುವುದು

ಆಗಿರಬೇಕು. ಒಳ್ಳೆಯ ಉದ್ದೇಶಗಳ ಯಶಸ್ಸಿಗಾಗಿ ಒಬ್ಬರ ಸ್ವರ್ಗೀಯ ಯಜಮಾನನ ಮುಂದೆ ಕೈಗಳನ್ನು ಚಾಚಬೇಕು. ಆತನ ಸಂತತಿಗಳ ರಕ್ಷಣೆ ಹಗೂ ಅಭಿವೃದ್ಧಿಗಾಗಿ ಅಲ್ಲಾಹನಲ್ಲಿ ದುಆ ಮಾಡಬೇಕು. ಮತ್ತು ತನ್ನ ಮರಣದ ಬಗ್ಗೆ ನೆನಪಿಸಿಕೊಂಡು ತಮ್ಮ ಒಳ್ಳೆಯ ಅಂತ್ಯಕ್ಕಾಗಿ ದೀರ್ಘ ದುಆವನ್ನು ಮಡಬೇಕು.

ಹೌದು, ಸಮಾಧಿಗಳಿಗೆ ಭೇಟಿ ನೀಡುವ ರಾಜಕೀಯ ಉದ್ದೇಶವೂ ಒಂದಿದೆ. ಮತ್ತು ವಿವಿಧ ಸಮುದಾಯಗಳು ತಮ್ಮ ಸಂಸ್ಥಾಪಕರು ಮತ್ತು ವಿಶೇಷ ನಾಯಕರ ಸಮಾಧಿಗಳನ್ನು ಎಂತಹ ಬಣ್ಣದಲ್ಲಿ ನಿರ್ಮಿಸುತ್ತಾರೆ ಎಂದರೆ ಇತರ ಸಮುದಯಗಳ ಜನರು ಅಲ್ಲಿಗೆ ಹೋಗಿ ಅವರ ಭಕ್ತಿ ಮತ್ತು ಗೌರವದ ಹೂವುಗಳನ್ನು ಅರ್ಪಿಸುತ್ತಾರೆ. ಮತ್ತು ಈ ವಿಧಾನವು ಸಮುದಾಯಗಳ ಪರಸ್ಪರ ಸಂಬಂಧಗಳನ್ನು ಸುಧಾರಿಸಲು ಸಹಾಯ ಮಾಡುತ್ತದೆ ಎಂದು ನಂಬಲಾಗಿದೆ. ಆದರೆ ಈ ರೀತಿಯ ತೀರ್ಥಯಾತ್ರೆಯ ಮುಖ್ಯ ಉದ್ದೇಶವು ದುಆ ಇರುವುದಿಲ್ಲ (ಬದಲಿಗೆ, ಹೆಚ್ಚಿನ ಯಾತ್ರಿಕರು ಪ್ರಾರ್ಥನೆಯ ಬಗ್ಗೆ ಮನವರಿಕೆಯಾಗದ ಜನರು) ಮತ್ತು ರಾಷ್ಟ್ರೀಯ ಮತ್ತು ರಾಜಕೀಯ ಬಣ್ಣದಲ್ಲಿ ಗೌರವ ಮತ್ತು ಪರಸ್ಪರ ಮೆಚ್ಚುಗೆಯ ಅಭಿವ್ಯಕ್ತಿ ಮಾತ್ರ ಉದ್ದೇಶಿಸಲಾಗಿದೆ ಎಂಬುದು ಸ್ಪಷ್ಟವಾಗಿದೆ. ಇಂತಹ ಸಂದರ್ಭದಲ್ಲಿ ದೊಡ್ಡ ದೊಡ್ಡವರು ಹೊರ ದೇಶಕ್ಕೆ ಹೋದಾಗ ಆ ದೇಶದ ಸಂಸ್ಥಾಪಕರ ಅಥವಾ ಇನ್ನಾವುದೇ ನಿರ್ದಿಷ್ಟ ನಾಯಕರ ಸಮಾಧಿಗೆ ತೆರಳಿ ಪುಷ್ಪಾರ್ಚನೆ ಮಾಡುವುದು ಜಗತ್ತಿನ ವಾಡಿಕೆಯಾಗಿದೆ. ಹಾಗಾಗಿ ಇದೊಂದು ರಾಜಕೀಯ ವಿಧಾನ ಇದಾಗಿದ್ದು, ಈ ಧಾರ್ಮಿಕ ಫತ್ವಾಕ್ಕೆ ಯಾವುದೇ ಸಂಬಂಧವಿಲ್ಲ, ದೇವರೇ ಬಲ್ಲವನು.

**(ಅಲ್-ಫಝ್ಲ್, ಆಗಸ್ಟ್ 28, 1958)**

...*...*...*...

*(ಪುಟ ಸಂಖ್ಯೆ 23ರ ಉಳಿದ ಭಾಗ)*

ಮಾನಸಿಕ ಸಾಮರ್ಥ್ಯಗಳ ಒಡೆಯನಾಗಿದ್ದಾರೆ. ಈ ವಾಕ್ಯದ ನಂತರ ಮೌನವು ಆವರಿಸಿತು, ಅವರ ಕಣ್ಣುಗಳು ಸ್ಥಿರವಾಗಿ ಒಂದು ಕಡೆ ನೋಡುತ್ತಿದ್ದವು, ಅವರ ಕಣ್ಣುಗಳು ಮನೆಯ ಟೇಬಲ್ ಮೇಲೆ ಇರಿಸಲಾಗಿದ್ದ ಹಝ್ರತ್ ಮುಸ್ಲೆಹ್ ಮೌಊದ್ ಖಲೀಫತುಲ್ ಮಸೀಹ್ ಸಾನಿ(ರ) ರವರ ಫೋಟೊ ಮೇಲೆ ಸ್ಥಿರವಾಗಿ ನಿಂತಿತ್ತು, ಬಹುಶಃ ಅದನ್ನು ಅವರು ನನ್ನ ಮನೆಗೆ ಬಂದಾಗ ಗಮನಿಸಿರಲಿಲ್ಲ, ನಾನು ಅವರ ಮೌನವನ್ನು ಮುರಿದು ಕೇಳಿದೆ, ಏನಾಯಿತು? ಅದಕ್ಕೆ ಅವರು ಹೇಳಿದರು: ಮಾವೋ ಝೆಡಂಗ್ ಅವರು ಮಹಾನ್ ವ್ಯಕ್ತಿತ್ವ ನಿಜ, ಆದರೆ ನಾನು ನನ್ನ ಜೀವಿತಾವಧಿಯಲ್ಲಿ ಒಮ್ಮೆ ಮಾತ್ರ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್ ಸಾಹಿಬ್ ಅವರನ್ನು ಭೇಟಿ ಮಾಡಿದ್ದೇನೆ, ಅದನ್ನು ನಾನು ಕೊನೆಯವರೆಗೂ ಮರೆಯಲು ಸಾಧ್ಯವಿಲ್ಲ. ಅಂತಹ ಬುದ್ಧಿಶಾಲಿ ವ್ಯಕ್ತಿಯು ಇಡೀ ಭೂಮಿಯಲ್ಲಿ ಕಂಡುಬರುವುದಿಲ್ಲ, ಆದರೆ ಉದ್ಯೋಗ ಘಟಕವು ಬಹಳ ಬೇಗ ನಮ್ಮನ್ನು ತೊರೆದಿದೆ. (ಸವಾನೆಹ್ ಫಝ್ಲೆ ಉಮರ್, ಸಂಪುಟ-5, ಪುಟ-551)

ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ: "ನಾನು ಮರಣ ಹೊಂದಬಹುದು, ಆದರೆ ನನ್ನ ಹೆಸರು ಶಾಶ್ವತವಾಗಿ ಉಳಿಯುವುದು. ಲೋಕದಲ್ಲಿ ನನ್ನ ಹೆಸರನ್ನು ಮತ್ತು ನನ್ನ ಕೆಲಸವನ್ನು ಅವನು ಎತ್ತಿಹಿಡಿಯುತ್ತಾನೆ ಎಂಬುದು ಆಕಾಶದಲ್ಲಿ ಸರ್ವಶಕ್ತನಾದ ಅಲ್ಲಾಹನ ನಿರ್ಧರಿಸಿದ್ದಾನೆ." (ಇಖ್ತೆತಾಮಿ ಖಿತಾಬ್ ಜಲ್ಸ ಸಾಲಾನ 1961)

ಮಿಲ್ಲತ್ ಕೆ ಇಸ್ ಫಿದಾಯಿ ಪೆ ರಹ್ಮತ್ ಖುದಾ ಕರೆ.

ವಆಖಿರುದ್ದಾವನಾ ಅನಿಲ್ ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್.

**(ಮನ್ಸೂರ್ ಅಹ್ಮದ್ ಮಸ್ರೂರ್)**

...*...*...*...

**ಝಕಾತ್ ಒಂದು ಕಡ್ಡಾಯ ಪ್ರಮುಖ ಕರ್ಮವಾಗಿದೆ. ಅದರ ಪಾಲನೆಯ ಕಡೆ ವಿಶೇಷ ಗಮನವಹಿಸಬೇಕು!**

ಜಮಾಅತ್ ಬಂಧುಗಳು ತಿಳಿದವರೇ ಆಗಿದ್ದಾರೆ. ಪವಿತ್ರ ಖುರ್‌ಆನ್‌ನಲ್ಲಿ ನಮಾಝ್ ನಿರ್ವಹಣೆ ಜೊತೆ ಜೊತೆಯಲ್ಲಿ ಝಕಾತಿನ ನಿರ್ದೇಶನವಿದೆ. ಆದುದರಿಂದ ಎಲ್ಲಾ ಅರ್ಹ ಬಂಧು ಭಗಿನಿಯರಲ್ಲಿ ವಿನಂತಿಸಿ ಕೊಳ್ಳುವುದೇನೆಂದರೆ ಅವರು ಈ ಪ್ರಮುಖ ಕಡ್ಡಾಯ ನಿರ್ವಹಣೆಯತ್ತ ಗಮನ ಹರಿಸಬೇಕಾಗಿದೆ.

ಝಕಾತ್ ಇಸ್ಲಾಮಿನ ಮೂಲಭೂತ ಸಿದ್ಧಾಂತವಾಗಿದೆ. ಅದು ಎಲ್ಲಾ ನಿಗದಿತ ಅರ್ಹ ಜನರಿಗೆ ಕಡ್ಡಾಯವಾಗಿದೆ. ಆ ಪೈಕಿ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಓ ಎಲ್ಲಾ ನನ್ನ ಜಮಾಅತಿಗೆ ಸೇರಿದವರೆಂದು ಹೇಳುವ ಜನರೇ! ನೀವು ಆಕಾಶದಲ್ಲಿ ನಿಜವಾಗಿಯೂ ಭಯಭಕ್ತಿಯ ಮಾರ್ಗಗಳಲ್ಲಿ ನಡೆದವರಾದಾಗ ಮಾತ್ರ ನನ್ನ ಜಮಾಅತಿಗೆ ಸೇರಿದವರಾಗುವಿರಿ. ಆದುದರಿಂದ ತನ್ನ ಐದು ಹೊತ್ತಿನ ನಮಾಝುಗಳನ್ನು ಎಂಥ ಭಯ ಮತ್ತು ಆತ್ಮೀಯವಾಗಿ ನಿರ್ವಹಿಸಬೇಕೆಂದರೆ, ಅಲ್ಲಾಹನು ನಿಮ್ಮನ್ನು ನೋಡುತ್ತಿದ್ದಾನೆ ಎಂದಾಗಿರಬೇಕು. ಅಂತೆಯೇ ತನ್ನ ಉಪವಾಸಗಳನ್ನು ಅಲ್ಲಾಹನಿಗೋಸ್ಕರ ಪೂರ್ಣ ಶ್ರದ್ಧೆಯಿಂದ ಪಾಲಿಸುವವರಾಗಿರಿ. ಝಕಾತ್‌ಗೆ ಅರ್ಹರಾದ ಪ್ರತಿಯೊಬ್ಬರು ಝಕಾತ್ ನೀಡಬೇಕು.

**(ಕಿಶ್ತಿ ನೂಹ್, ರೂಹಾನಿ ಖಝಾಇನ್, ಸಂಪುಟ-19, ಪುಟ-15)**

ಆಭರಣಗಳ ಝಕಾತ್ ನೀಡುವಿಕೆ ಕುರಿತು ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನೀವು ಉಪಯೋಗಿಸುವ ಆಭರಣಗಳು ಮತ್ತು ಒಮ್ಮೊಮ್ಮೆ ಬಡ ಸ್ತ್ರೀಯರಿಗೆ ಉಪಯೋಗಿಸಲು ನೀಡುವ ಆಭರಣಗಳು ಕುರಿತು ಕೆಲವರು ಭಾವಿಸುವುದೇನಂದರೆ ಅದರ ಮೇಲೆ ಝಕಾತ್ ಕಡ್ಡಾಯವಲ್ಲ ಎಂದು. ಮತ್ತು ಯಾವ ಆಭರಣಗಳು ಉಪಯೋಗಿಸಲಾಗುತ್ತದೆಯೋ ಮತ್ತು ಇತರರಿಗೆ ಬಳಸಲು ಕೊಡುವುದಿಲ್ಲವೋ ಆ ಆಭರಣಗಳ ಮೇಲೆ ಝಕಾತ್ ಕೊಡಬೇಕಾಗಿದೆ ಎಂದು. ಏಕೆಂದರೆ ಅದು ತನ್ನ ಸ್ವಂತಕ್ಕಾಗಿ ಬಳಸಲ್ಪಡುತ್ತದೆ. ನಮ್ಮ ಮನೆಗಳಲ್ಲಿ ಅದೇ ತರಹ ಕ್ರಮಬದ್ಧರಾಗಿರುತ್ತಾರೆ. ಮತ್ತು ಪ್ರತಿ ವರ್ಷ ತನ್ನ ಆಭರಣಗಳ ಝಕಾತನ್ನು ನೀಡುತ್ತಾರೆ. ಮತ್ತು ಯಾವ ಆಭರಣಗಳು ರೂಪಾಯಿಗಳಂತೆ ಜಮಾ ಮಾಡಿ ಇಡುತ್ತಾರೋ. ಅದರ ಝಕಾತ್ ಕೊಡುವುದರಲ್ಲಿ ಯಾರಿಗೂ ತಕರಾರು ಇಲ್ಲ.

**(ಅಲ್-ಹಕಮ್ 17 ನವೆಂಬರ್ 1905, ಪುಟ 11)**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ನೆನಪಿಡಬೇಕಾದ ವಿಷಯವೇನೆಂದರೆ ಈ ತೆರಿಗೆಯನ್ನು ನಾವು 'ಝಕಾತ್' ಎನ್ನುತ್ತೇವೆ. ಇದು ಆದಾಯದ ಮೇಲೆ ನಿರ್ಧಾರವಲ್ಲ. ಬದಲಿಗೆ ಬಂಡವಾಳ ಹಾಗೂ ಲಾಭ ಎಲ್ಲವೂ ಸೇರಿಸಿ ನೀಡಲಾಗುತ್ತದೆ. ಅದೇ ರೀತಿ 2.50% ವಾಸ್ತವದಲ್ಲಿ ಕೆಲ ಸಂಧರ್ಭಗಳಲ್ಲಿ ಲಾಭದ 50% ದಷ್ಟಾಗುತ್ತದೆ"

**(ಅಹ್ಮದಿಯತ್ ಯಾನಿ ಹಖೀಖಿ ಇಸ್ಲಾಮ್, ಅನ್ವಾರುಲ್ ಉಲೂಮ್, ಸಂಪುಟ-8, ಪುಟ-306)**

ಆಭರಣಗಳು ಮತ್ತು ನಗದು ರೂಪಾಯಿಯ ಝಕಾತಿಗೆ ನಿರ್ಧರಿತ ಕ್ರಮದ ಕುರಿತು ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಅಲ್-ಖಾಮಿಸ್(ಅಬಿಅ) ಹೇಳುತ್ತಾರೆ. ಬೆಳ್ಳಿಗ್ಗೆ ಬೆಳ್ಳಿ ಮತ್ತು ಚಿನ್ನಕ್ಕೆ ಚಿನ್ನವೇ ನಿರ್ಧರಿತ ಕ್ರಮವಾಗಿರುವುದು. ಅದು ರಸೂಲುಲ್ಲಾಹ್(ಸ) ರವರ ಪರಿಶುದ್ಧ ಕಾಲದಲ್ಲಿ ರಸೂಲುಲ್ಲಾಹ್(ಸ) ಸ್ವಯಂ ಜಾರಿಗೆ ತಂದಿದ್ದರು. ಎಲ್ಲಿಯವರೆಗೆ ನಗದು ರೂಪಾಯಿಗಳ ನಿರ್ಧರಿತ ಕ್ರಮದ ಪ್ರಶ್ನೆ ಇದೆಯೋ ಅದನ್ನು ಪ್ರಸಕ್ತ ಸಮಯ ಲೋಕವು ಚಿನ್ನವನ್ನೇ ಬಂಡವಾಳ ಎಂದು ಒಪ್ಪಿಕೊಂಡಿದೆ. ಆದುದರಿಂದ ನಗದು ರೂಪಾಯಿಗಳ ಝಕಾತ್ ಕೂಡ ಚಿನ್ನದ ಮಾನದಂಡದಂತೆಯೇ ಕೊಡಲಾಗುತ್ತದೆ. (ಮಕ್ತೂಬ್ ಹುಝೂರ್(ಅತಬಿಅ) ಬನಾಮ್ ಸದರ್ ಸಾಹಿಬ್ ಮಜ್ಲಿಸ್ ಇಫ್ತಾಹ್)

ರಸೂಲುಲ್ಲಾಹ್(ಸ) ಬೆಳ್ಳಿಗೋಸ್ಕರ 52 ವರೆ ತೊಲ (52.5) ಚಿನ್ನಕ್ಕೋಸ್ಕರ ಏಳುವರೆ ತೊಲ (7.5) ನಿಗದಿಪಡಿಸಲಾಗಿದೆ.

* ಯಾರ ಬಳಿ ಐವತ್ತೆರಡುವರೆ (52.5) ತೊಲ 612 ಗ್ರಾಂ ಬೆಳ್ಳಿ ಇದೆಯೋ ಮತ್ತು ಅದು ಅವರ ಬಳಿ ಒಂದು ವರ್ಷ ಆದರೆ. ಆಗ ಅದರ 1/40 ಭಾಗ ಅಂದರೆ ಎರಡುವರೆ ಪ್ರತಿಶತ ಝಕಾತ್ ನೀಡುವುದು ಕಡ್ಡಾಯವಾಗಿರುತ್ತದೆ.

ಅದೇ ರೀತಿ ಯಾರ ಬಳಿ ಏಳುವರೆ (7.5) ತೊಲ 87 ಗ್ರಾಂ ಚಿನ್ನವಿರುತ್ತದೆ. ಅಥವಾ ಅದಕ್ಕೆ ಸಮನಾದ ನಗದು ಹಣದ ರಾಶಿಯಿರುತ್ತದೆ. ಅದರ ಮೇಲೆ ಒಂದು ವರ್ಷ ಅವಧಿ ಕಳೆದರೆ ಆಗ ಅದರ ಮೇಲೆಯೂ 1/40 ಭಾಗ ಅಂದರೆ ಎರಡುವರೆ ಪ್ರತಿಶತ ಝಕಾತ್ ನೀಡುವುದು ಫರ್ಝ್ (ಕಡ್ಡಾಯ) ಆಗಿರುತ್ತದೆ.

* ಝಕಾತ್ ರೂಪದಲ್ಲಿ ಪಡೆದ ಒಟ್ಟು ಮೊತ್ತ ಕೇಂದ್ರಕ್ಕೆ ರವಾನಿಸುವುದು ಅವಶ್ಯಕವಾಗಿದೆ.

ಅಲ್ಲಾಹನು ನಮಗೆಲ್ಲರಿಗೂ ಈ ಪ್ರಮುಖ ಕರ್ತವ್ಯವನ್ನು ಪಾಲಿಸಲು ಭಾಗ್ಯ ದಯಪಾಲಿಸಲಿ ಮತ್ತು ಜಮಾಅತಿನ ಎಲ್ಲಾ ಬಂಧುಗಳ ಸಂಪತ್ತು ಹಾಗೂ ಆತ್ಮಗಳಲ್ಲಿ ತನ್ನ ಅನುಗ್ರಹ ದಯಪಾಲಿಸಲಿ. **ಆಮೀನ್**

**(ಪತ್ರಿಕಾಂಗ)**

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

# ತನಿಖಾ ನ್ಯಾಯಾಲಯದಲ್ಲಿ ಸಯ್ಯಿದುನಾ ಹಝ್ರತ್ ಮುಸ್ಲಿಹ್ ಮೌಊದ್ ಖಲೀಫತುಲ್ ಮಸೀಹ್ ಸಾನಿ(ರ)ರವರ ಹೇಳಿಕೆ

ಜನವರಿ 13, 14, 15, 1954 ರಂದು ಪಾಕಿಸ್ತಾನದ ತನಿಖಾ ನ್ಯಾಯಾಲಯದಲ್ಲಿ ದಾಖಲಾದ ಸೈಯ್ಯದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಹೇಳಿಕೆಯನ್ನು ಕೆಳಗೆ ನೀಡಲಾಗಿದೆ. ಹುಝೂರ್(ರ) ಅವರ ಈ ಹೇಳಿಕೆಯು ಬಹಳ ಮುಖ್ಯವಾದ ಮತ್ತು ಸರಿಯಾದ ಇಸ್ಲಾಮಿಕ್ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆ ಮತ್ತು ಅದೇ ಸಮಯದಲ್ಲಿ ಜಮಾಅತ್ ಬಗ್ಗೆ ಅಹ್ಮದಿಯೇತರರು ಮತ್ತು ಇಸ್ಲಾಂ ಧರ್ಮದ ಬಗ್ಗೆ ಮುಸ್ಲಿಮೇತರರ ತಪ್ಪು ತಿಳುವಳಿಕೆಯನ್ನು ತೆರವುಗೊಳಿಸುತ್ತದೆ. ಸ್ನೇಹಿತರು ಇದರಿಂದ ಸಂಪೂರ್ಣ ಪ್ರಯೋಜನ ಪಡೆಯುತ್ತಾರೆ ಎಂದು ಭಾವಿಸುತ್ತೇವೆ. **(ಸಂಸ್ಥೆ)**

**ಪ್ರಶ್ನೆ:** ರಸೂಲ್ ಯಾರಾಗಿರುತ್ತಾರೆ?

**ಉತ್ತರ:** ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಮನುಕುಲಕ್ಕೆ ಮಾರ್ಗದರ್ಶನ ನೀಡಲು ಅಲ್ಲಾಹನಿಂದ ನೇಮಿಸಲ್ಪಟ್ಟವರನ್ನು ರಸೂಲ್ ಎಂದು ಕರೆಯುತ್ತಾರೆ.

**ಪ್ರಶ್ನೆ:** ಪ್ರವಾದಿ (ನಬಿ) ಮತ್ತು ಸಂದೇಶವಾಹಕರ (ರಸೂಲ್) ನಡುವೆ ಏನಾದರೂ ವ್ಯತ್ಯಾಸವಿದೆಯೇ?

**ಉತ್ತರ:** ವೈಶಿಷ್ಟಗಳ ವಿಷಯದಲ್ಲಿ ಇವೆರಡರ ನಡುವೆ ಯಾವುದೇ ಗಮನಾರ್ಹ ವ್ಯತ್ಯಾಸವಿಲ್ಲ. ಅದೇ ವ್ಯಕ್ತಿ ಸರ್ವಶಕ್ತನಾದ ಅಲ್ಲಾಹನಿಂದ ಸಂದೇಶವನ್ನು ತರುತ್ತಾನೆ ಎಂಬರ್ಥದಲ್ಲಿ, ಸಂದೇಶವಾಹಕ (ರಸೂಲ್) ಎಂದು ಕರೆಯಲ್ಪಡುತ್ತಾನೆ, ಆದರೆ ಅವನು ಯಾರಿಗೆ ದೈವಿಕ ಸಂದೇಶವನ್ನು ತರುತ್ತಾನೆಯೋ, ಅವರನ್ನು ಪ್ರವಾದಿ (ನಬಿ) ಎಂದು ಕರೆಯಲಾಗುತ್ತದೆ. ಈ ರೀತಿಯಾಗಿ, ಒಂದೇ ವ್ಯಕ್ತಿಯು ಸಂದೇಶವಾಹಕ ಮತ್ತು ಪ್ರವಾದಿಯಾಗುತ್ತಾನೆ.

**ಪ್ರಶ್ನೆ:** ನಿಮ್ಮ ಪ್ರಕಾರ, ಆದಮ್(ಅ) ರಿಂದ ಇದುವರೆಗೆ ಎಷ್ಟು ಸಂದೇಶವಾಹಕರು ಅಥವಾ ಪ್ರವಾದಿಗಳು ಹಾದುಹೋಗಿದ್ದಾರೆ?

**ಉತ್ತರ:** ಬಹುಶಃ ಇದರ ಬಗ್ಗೆ ಖಚಿತವಾಗಿ ಏನನ್ನೂ ಹೇಳಲಾಗುವುದಿಲ್ಲ. ಹದೀಸ್‌ಗಳಲ್ಲಿ, ಅವರ ಸಂಖ್ಯೆ ಒಂದು ಲಕ್ಷ ಇಪ್ಪತ್ತು ಸಾವಿರ ಎಂದಾಗಿದೆ.

**ಪ್ರಶ್ನೆ:** ಆದಮ್(ಅ), ನೂಹ್(ಅ), ಇಬ್ರಾಹೀಮ್(ಅ), ಮೂಸಾ(ಅ) ಮತ್ತು ಈಸಾ(ಅ) ರವರೆಲ್ಲರು ಸಂದೇಶವಾಹಕರೇ?

**ಉತ್ತರ:** ಆದಮ್ ಬಗ್ಗೆ ಭಿನ್ನಾಭಿಪ್ರಾಯವಿದೆ. ಕೆಲವರು ಆತನನ್ನು ಪ್ರವಾದಿ ಎಂದು ನಂಬುತ್ತಾರೆಯೇ ಹೊರತು ಸಂದೇಶವಾಹಕರಾಗಿ ಅಲ್ಲ. ಆದರೆ ನನಗೆ, ಅವರೆಲ್ಲರೂ ಸಂದೇಶವಾಹಕರು ಮತ್ತು ಪ್ರವಾದಿಗಳು.

**ಪ್ರಶ್ನೆ:** ವಲಿ ಎಂದು ಯಾರನ್ನು ಕರೆಯುತ್ತಾರೆ?

**ಉತ್ತರ:** ಯಾರು ಸರ್ವಶಕ್ತನಾದ ಅಲ್ಲಾಹನಿಗೆ ಪ್ರಿಯನಾಗಿರುತ್ತಾನೊ ಅವನು.

**ಪ್ರಶ್ನೆ:** ಮುಹದ್ದಿಸ್ ಯಾರು?

**ಉತ್ತರ:** ಯಾರೊಂದಿಗೆ ಅಲ್ಲಾಹನು ಸಂಭಾಷಣೆ ನಡೆಸುತ್ತಾನೊ.

**ಪ್ರಶ್ನೆ:** ಮುಜದ್ದಿದ್ ಎಂದು ಯಾರನ್ನು ಕರೆಯುತ್ತಾರೆ?

**ಉತ್ತರ:** ಸುಧಾರಣೆ ಮಾಡುವ ಮತ್ತು ನವೀಕರಿಸುವ ವ್ಯಕ್ತಿ. ಮುಹದ್ದಿಸ್‌ನ ಇನ್ನೊಂದು ಹೆಸರು ಮುಜದ್ದಿದ್ ಆಗಿದೆ.

**ಪ್ರಶ್ನೆ:** ವಲಿ, ಮುಹದ್ದಿಸ್ ಅಥವಾ ಮುಜದ್ದಿದ್‌ಗೆ ದೈವವಾಣಿ ಅವತರಿಸುತ್ತದೆಯೇ?

**ಉತ್ತರ:** ಹೌದು.

**ಪ್ರಶ್ನೆ:** ಅವರ ಮೇಲೆ ದೈವವಾಣಿ ಹೇಗೆ ಅವತರಿಸುತ್ತದೆ?

**ಉತ್ತರ:** ವಹಿ (ದೈವವಾಣಿ) ಅಂದರೆ ಅಲ್ಲಾಹನ ನುಡಿಯಾಗಿದೆ, ವಹಿ ವಿವಿಧ ರೀತಿಯಲ್ಲಿ ಪ್ರಕಟವಾಗುತ್ತದೆ. ವಹಿ ಅವತರಿಸುವಿಕೆಯ ಒಂದು ಮಾರ್ಗವೆಂದರೆ ಯಾರಿಗೆ ವಹಿ ಅವತರಿಸುತ್ತದೆಯೊ ದೇವದೂತನು ಆತನ ಮುಂದೆ ಕಾಣಿಸಿಕೊಳ್ಳುತ್ತಾನೆ. ಎರಡನೆಯ ವಿಧಾನವೆಂದರೆ ಯಾರ ಮೇಲೆ ವಹಿ ಅವತರಿಸುತ್ತದೆಯೊ ಆ ವ್ಯಕ್ತಿಯು ಕೆಲವು ಪದಗಳನ್ನು ಮಾತ್ರ ಕೇಳುತ್ತಾನೆ ಆದರೆ ಮಾತನಾಡುವವನನ್ನು ನೋಡುವುದಿಲ್ಲ. ವಹಿಯ ಮೂರನೇ ವಿಧಾನವೆಂದರೆ ಹಿಜಾಬ್‌ನ ಹಿಂದಿನಿಂದ (ಮುಸುಕಿನ ಹಿಂದೆ) ಅಂದರೆ ದೈವದರ್ಶನದ ಮೂಲಕ.

**ಪ್ರಶ್ನೆ:** ದೇವದೂತರ ಸರದಾರರಾದ ಹಝ್ರತ್ ಜಿಬ್ರೀಲ್ ಅವರು ಯಾವುದಾದರು ವಲಿ, ಮುಹದ್ದಿಸ್ ಅಥವಾ ಮುಜದ್ದಿದ್ ಮೇಲೆ ದೈವವಾಣಿ ತರಬಹುದೇ?

**ಉತ್ತರ:** ಹೌದು, ಆದರೆ ಮೇಲೆ ತಿಳಿಸಿದ ಜನರನ್ನು ಹೊರತುಪಡಿಸಿ ಇತರ ಜನರ ಮೇಲೂ ಸಹ ತರಬಹುದು.

**ಪ್ರಶ್ನೆ:** ಒಬ್ಬ ವಲಿ, ಮುಹದ್ದಿಸ್ ಅಥವಾ ಮುಜದ್ದಿದ್ ಮೇಲೆ ಅವತರಿಸುವಂತಹ ದೈವವಾಣಿಯ ವಿಷಯ ಏನಾಗಿರಬಹುದು?

**ಉತ್ತರ:** ಯಾರ ಮೇಲೆ ವಹಿ ಅವತರಿಸುತ್ತದೆಯೋ ಆತನಿಗಾಗಿ ಅಲ್ಲಾಹನ ಪ್ರೀತಿಯ ಅಭಿವ್ಯಕ್ತಿ ಅಥವಾ ಭವಿಷ್ಯದ ಘಟನೆಗಳ ಸುದ್ದಿ ಅಥವಾ ಮೊದಲು ಅವತರಿಸಿದಂತಹ ಪುಸ್ತಕದ ಪಠ್ಯದ ವಿವರಣೆ.

**ಪ್ರಶ್ನೆ:** ನಮ್ಮ ಪ್ರವಾದಿ ಹಝ್ರತ್ ಪೈಗಂಬರ್(ಸ) ಅವರ ಮೇಲೆ ಜಿಬ್ರೀಲ್‌ರ ಮೂಲಕ ಮಾತ್ರ ವಹಿ ಅವತರಿಸಿದೆಯೇ?

**ಉತ್ತರ:** ಹಝ್ರತ್ ಪೈಗಂಬರ್(ಸ) ಅವರಿಗೆ ಜಿಬ್ರೀಲ್ ಮಾತ್ರ ವಹಿ ತರುತ್ತಿದ್ದರು ಎಂಬುದು ಸರಿಯಲ್ಲ. ಹೌದು, ಪ್ರವಾದಿ (ನಬಿ) ಅಥವಾ ವಲಿ ಅಥವಾ ಮುಹದ್ದಿಸ್ ಅಥವಾ ಮುಜದ್ದಿದ್‌ಗೆ ಅವತೀರ್ಣಗೊಂಡಿದ್ದರೂ ಅದು ಹಝ್ರತ್ ಜಿಬ್ರೀಲ್ ಅವರ ಮೇಲ್ವಿಚಾರಣೆಯಲ್ಲಿ ಅವತೀರ್ಣಗೊಳ್ಳುತ್ತಿತ್ತು ಎಂಬುದು ನಿಜ.

**ಪ್ರಶ್ನೆ:** ವಹಿ ಮತ್ತು ಇಲ್‌ಹಾಮ್‌ನ ನಡುವಿನ ವ್ಯತ್ಯಾಸವೇನು?

**ಉತ್ತರ:** ಯಾವುದೇ ವ್ಯತ್ಯಾಸವಿಲ್ಲ.

**ಪ್ರಶ್ನೆ:** ಹಝ್ರತ್ ಜಿಬ್ರೀಲ್ ಅವರು ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಅವರ ಮೇಲೆ ವಹಿ ತರುತ್ತಿದ್ದರು?

**ಉತ್ತರ:** ಹಝ್ರತ್ ಜಿಬ್ರೀಲ್ ಅವರ ಮೇಲ್ವಿಚಾರಣೆಯಲ್ಲಿ ಪ್ರತಿಯೊಂದು ವಹಿ ಅವತೀರ್ಣಗೊಳ್ಳುತ್ತದೆ ಎಂದು ನಾನು ಮೊದಲೇ ಹೇಳಿದ್ದೇನೆ. ಹಝ್ರತ್ ಮಿರ್ಝಾ ಸಾಹಿಬ್ ಅವರಿಗೆ ಇಲ್‌ಹಾಮ್‌ನಿಂದ ಹಝ್ರತ್ ಜಿಬ್ರೀಲ್‌ರವರು ಒಮ್ಮೆ ಗೋಚರ ರೂಪದಲ್ಲಿ ಕಾಣಿಸಿಕೊಂಡರು ಎಂದು ತಿಳಿದುಬಂದಿದೆ.

**ಪ್ರಶ್ನೆ:** ಮಿರ್ಝಾ ಸಾಹಿಬ್ ಅವರು ಸಿದ್ಧಾಂತದ ಅರ್ಥದಲ್ಲಿ ಪ್ರವಾದಿಯಾಗಿದ್ದಾರೆಯೇ?

**ಉತ್ತರ:** ಪ್ರವಾದಿಯ ಯಾವುದೇ ಸಿದ್ಧಾಂತದ ವ್ಯಾಖ್ಯಾನ ನನಗೆ ತಿಳಿದಿಲ್ಲ. ನಾನು ಈ ವ್ಯಕ್ತಿಯನ್ನು ಸರ್ವಶಕ್ತನಾದ ಅಲ್ಲಾಹನು ಪ್ರವಾದಿ ಎಂದು ಕರೆದ ಪ್ರವಾದಿ ಎಂದು ಪರಿಗಣಿಸುತ್ತೇನೆ.

**ಪ್ರಶ್ನೆ:** ಸರ್ವಶಕ್ತನಾದ ಅಲ್ಲಾಹನು ಮಿರ್ಝಾ ಸಾಹೇಬ್ ಅವರನ್ನು ಪ್ರವಾದಿ ಎಂದು ಕರೆದಿದ್ದಾನೆಯೇ?

**ಉತ್ತರ:** ಹೌದು.

**ಪ್ರಶ್ನೆ:** ಮಿರ್ಝಾ ಸಾಹಿಬ್ ಅವರು ಪ್ರವಾದಿ ಎಂದು ಮೊದಲ ಬಾರಿಗೆ ಹೇಳಿದ್ದು ಯಾವಾಗ? ದಯವಿಟ್ಟು ಅವರ ಇತಿಹಾಸವನ್ನು ನಮಗೆ ತಿಳಿಸಿ ಮತ್ತು ಈ ಬಗ್ಗೆ ಅವರ ಯಾವುದೇ ಬರಹಗಳನ್ನು ಉಲ್ಲೇಖಿಸಿ?

**ಉತ್ತರ:** ನನಗೆ ನೆನಪಿರುವಂತೆ ಅವರು 1891 ರಲ್ಲಿ ಪ್ರವಾದಿ ಎಂದು ಹೇಳಿಕೊಂಡರು.

**ಪ್ರಶ್ನೆ:** ಒಬ್ಬ ಪ್ರವಾದಿಯ ಆಗಮನದಿಂದ ಹೊಸ ಸಮುದಾಯವನ್ನು ರಚಿಸಲಾಗಿದೆಯೇ?

**ಉತ್ತರ:** ಇಲ್ಲ.

**ಪ್ರಶ್ನೆ:** ಅವರ ಬರುವಿಕೆಯಿಂದ ಹೊಸ ಜಮಾಅತ್ ಸೃಷ್ಟಿಯಾಗುವುದೇ?

**ಉತ್ತರ:** ಹೌದು.

**ಪ್ರಶ್ನೆ:** ಹೊಸ ಪ್ರವಾದಿಯನ್ನು ನಂಬುವುದು ಇತರ ಜನರಿಗೆ ಅವರ ಅನುಯಾಯಿಗಳ ಮನೋಭಾವದ ಮೇಲೆ ಪರಿಣಾಮ ಬೀರುವುದಿಲ್ಲವೇ?

**ಉತ್ತರ:** ಒಂದುವೇಳೆ ಮುಂಬರುವ ಪ್ರವಾದಿಯು ಶರೀಯತ್ ಉಳ್ಳವನಾಗಿದ್ದರೆ, ಈ ಪ್ರಶ್ನೆಗೆ ಉತ್ತರವು ಸಕಾರಾತ್ಮಕವಾಗಿದೆ, ಆದರೆ ಅವರು ಹೊಸ ಶರೀಯತ್ ಅನ್ನು ತರದಿದ್ದರೆ, ಇತರರ ಕಡೆಗೆ ಅವರ ಅನುಯಾಯಿಗಳ ವರ್ತನೆಯು ಹಾಗೂ ಇತರ ಜನರು ಅವರನ್ನು ಪರಿಗಣಿಸುವ ನಡವಳಿಕೆಯನ್ನು ಅವಲಂಬಿಸಿರುತ್ತದೆ.

**ಪ್ರಶ್ನೆ:** ಅಹ್ಮದಿಯರು ಬೇರೆ ಅರ್ಥದಲ್ಲಿ ಪ್ರತ್ಯೇಕ ವರ್ಗವಲ್ಲವೇ?

**ಉತ್ತರ:** ನಾವು ಯಾವುದೇ ಹೊಸ ಸಮುದಾಯವಲ್ಲ ಬದಲಿಗೆ ಮುಸ್ಲಿಮರ ಒಂದು ಪಂಗಡವಾಗಿದ್ದೇವೆ.

**ಪ್ರಶ್ನೆ:** ಒಬ್ಬ ಅಹ್ಮದಿಯ ಪ್ರಾಥಮಿಕ ನಿಷ್ಠೆಯು ಅವನ ರಾಷ್ಟ್ರಕ್ಕೆ ಇರುತ್ತದೆಯೊ ಅಥವಾ ಅವನ ಜಮಾತಿನ ಅಮೀರ್‌ಗೆ?

**ಉತ್ತರ:** ನಾವು ವಾಸಿಸುವ ದೇಶದ ಸರ್ಕಾರದ ಕಾನೂನನ್ನು ಪಾಲಿಸುವುದು ನಮ್ಮ ನಂಬಿಕೆಯ ಭಾಗವಾಗಿದೆ.

**ಪ್ರಶ್ನೆ:** 1891 ರ ಮೊದಲು, ಮಿರ್ಝಾ ಗುಲಾಮ್ ಅಹ್ಮದ್

ಸಾಹೇಬರು ತಾವು ಪ್ರವಾದಿಯಲ್ಲ ಮತ್ತು ಅವರ ವಹಿಯು ಪ್ರವಾದಿತ್ವದ ವಹಿಯಲ್ಲ ಬದಲಿಗೆ ವಹಿ ವಿಲಾಯತ್ ಆಗಿದೆ ಎಂದು ಪದೇ ಪದೇ ಹೇಳಲಿಲ್ಲವೇ?

**ಉತ್ತರ:** ಅವರು 1900 ರಲ್ಲಿ ಬರೆದರು, ಆ ಸಮಯದವರೆಗೆ, ಒಬ್ಬ ವ್ಯಕ್ತಿಯು ಹೊಸ ಶರೀಯತ್ ಅನ್ನು ತಂದರೆ ಮಾತ್ರ ಪ್ರವಾದಿಯಾಗಬಹುದು ಎಂದು ಅವರು ನಂಬಿದ್ದರು, ಆದರೆ ಪ್ರವಾದಿಯಾಗಲು ಶರೀಯತ್ ತರುವುದು ಅನಿವಾರ್ಯವಲ್ಲ ಎಂದು ಸರ್ವಶಕ್ತನಾದ ಅಲ್ಲಾಹನು ವಹಿಯ ಮೂಲಕ ಅವರಿಗೆ ತಿಳಿಸಿದನು. ಮತ್ತು ಹೊಸ ಶರೀಯತ್ ತರದೆ ವ್ಯಕ್ತಿ ಪ್ರವಾದಿಯಾಗಬಹುದು ಎಂದು ಹೇಳಿದನು.

**ಪ್ರಶ್ನೆ:** ಮಿರ್ಝಾ ಗುಲಾಮ್ ಅಹ್ಮದ್ (ಮಾಸೂಮ್) ಮುಗ್ಧರಾಗಿದ್ದಾರೆಯೇ?

**ಉತ್ತರ:** (ಮಾಸೂಮ್) ಮುಗ್ಧತೆ ಎಂಬ ಪದದ ಅರ್ಥ ಪ್ರವಾದಿ (ನಬಿ) ಎಂದಿಗೂ ಯಾವುದೇ ತಪ್ಪನ್ನು ಮಾಡಲಾರರು ಎಂದಾದರೆ ಈ ಅರ್ಥದ ವಿಷಯದಲ್ಲಿ ಯಾವುದೇ ಮಾನವನು ಮುಗ್ಧನಲ್ಲ. ಈ ಅರ್ಥಗಳ ವಿಷಯದಲ್ಲಿ ನಮ್ಮ ಪ್ರವಾದಿ ಹಝ್ರತ್ ಪೈಗಂಬರ್(ಸ) ಅವರು ಕೂಡ ಮುಗ್ಧರಾಗಿರಲಿಲ್ಲ. ಮಾಸೂಮ್ ಎಂಬ ಪದ ಪ್ರವಾದಿಗೆ ಬಳಸಿದರೆ ಅದರ ಅರ್ಥ ಅವರು ಬದ್ಧರಾಗಿರುವ ಶರಿಯತ್‌ನ ಯಾವುದೇ ಆಜ್ಞೆಯನ್ನು ಉಲ್ಲಂಘಿಸಲು ಸಾಧ್ಯವಿಲ್ಲ ಎಂದಾಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಅವರು ಯಾವುದೇ ರೀತಿಯ ಪಾಪದಲ್ಲಿ ಅದು ದೊಡ್ಡದಾಗಿರಲಿ ಅಥವಾ ಚಿಕ್ಕದಾಗಿರಲಿ ಅದರಲ್ಲಿ ತೊಡಗುವುದಿಲ್ಲ. ಅದೇ ರೀತಿ ಅವರು (ಮಕ್ರೂಹಾತ್) ಅಪ್ರೀಯವಾದ ವಿಷಯಗಳಲ್ಲಿ ತೊಡಗುವುದಿಲ್ಲ. ಯಾವುದೇ ಹೊಸ ಶರೀಯತ್ ಅನ್ನು ತರದ ಅನೇಕ ಪ್ರವಾದಿಗಳು ಹಾದುಹೋಗಿದ್ದಾರೆ. ಶರೀಯತ್‌ನೊಂದಿಗೆ ಸಂಬಂಧ ಇರದ ವಿಷಯಗಳ ಬಗ್ಗೆ ಪ್ರವಾದಿಯವರು ತಮ್ಮ (ಇಜ್ತಿಹಾದ್) ಅನ್ವೇಷಣೆಯಲ್ಲಿ ತಪ್ಪು ಮಾಡಬಹುದು. ಉದಾಹರಣೆಗೆ, ಒಂದು ಪ್ರಕರಣಕ್ಕೆ ಎರಡು ಪಕ್ಷಗಳ ನಡುವಿನ ವಿವಾದದಲ್ಲಿ ತಪ್ಪು ನಿರ್ಧಾರವನ್ನು ನೀಡುವುದು ಅಸಾಧ್ಯವೇನಲ್ಲ.

**ಪ್ರಶ್ನೆ:** ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಮುಗ್ಧ ಎಂಬ ಪ್ರಶ್ನೆಗೆ ನೀವು ಯಾವ ಬಣ್ಣದಲ್ಲಿ ಉತ್ತರಿಸಬಹುದು?

**ಉತ್ತರ:** ಅವರು ಮುಗ್ಧರಾಗಿದ್ದರು, ಅವರು ಯಾವುದೇ ಸಣ್ಣ ಅಥವಾ ದೊಡ್ಡ ಪಾಪಗಳನ್ನು ಮಾಡಲಾರರು.

**ಪ್ರಶ್ನೆ:** ಲೆಕ್ಕಾಚಾರದ ದಿನದಂದು ಮಿರ್ಝಾ ಸಾಹಿಬ್ ಅವರು ಸಾಮಾನ್ಯ ಮನುಷ್ಯರಂತೆ ಅವರ ಕಾರ್ಯಗಳಿಗೆ ಜವಾಬ್ದಾರರಾಗುತ್ತಾರೆ ಎಂದು ನೀವು ನಂಬುತ್ತೀರಾ?

**ಉತ್ತರ:** ಅವರಿಗೆ ಅವರ ಕಾರ್ಯಗಳಿಗೆ ಲೆಕ್ಕವನ್ನು ನೀಡಬೇಕಾಗುವುದಿಲ್ಲ ಎಂದು ಊಹಿಸುತ್ತೇವೆ, ನಮ್ಮ ಪ್ರವಾದಿ ಹಝ್ರತ್ ಪೈಗಂಬರ್(ಸ) ಅವರು ನಿಮ್ಮ ಉಮ್ಮತ್‌ನಲ್ಲಿ ಪ್ರವಾದಿಗಳಲ್ಲದ ಅನೇಕ ಜನರಿದ್ದಾರೆ, ಆದರೆ ಅವರು ಲೆಕ್ಕಾಚಾರದ ದಿನದಂದು ಖಾತೆಯಿಂದ ವಿನಾಯಿತಿ ಪಡೆಯುತ್ತಾರೆ ಎಂದು ಹೇಳಿದ್ದಾರೆ.

**ಪ್ರಶ್ನೆ:** ಮರಣದ ನಂತರ ಪ್ರವಾದಿಗಳಿಗೆ ಏನಾಗುತ್ತದೆ? ಅವರು ಲೆಕ್ಕಾಚಾರದ ದಿನದವರೆಗೆ ಇತರ ಮಾನವರಂತೆ ಖಬರ್‌ಗಳಲ್ಲಿ ಇರುತ್ತಾರೆಯೇ ಅಥವಾ ಅವರು ನೇರವಾಗಿ ಫಿರ್ದೌಸ್ ಅಥವಾ ಅರಾಫ್‌ಗೆ ಹೋಗುತ್ತಾರೆಯೇ?

**ಉತ್ತರ:** ನನ್ನ ಪ್ರಕಾರ, ಪ್ರವಾದಿಗಳು ಮರಣದ ನಂತರ ನೇರವಾಗಿ ಫಿರ್ದೌಸ್ ಅಥವಾ ಅರಾಫ್‌ಗೆ ಹೋಗುತ್ತಾರೆ ಎಂಬುದು ಸರಿಯಲ್ಲ, ಆದರೆ ಅವರನ್ನು ಅಲ್ಲಾಹನಿಗೆ ಹತ್ತಿರವಿರುವ ವಿಶೇಷ ಸ್ಥಾನಕ್ಕೆ ಕರೆತರುವುದು ಸರಿಯಾಗಿದೆ, ಏಕೆಂದರೆ ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಪ್ರವಾದಿಯಾಗಿದ್ದರು, ಆದ್ದರಿಂದ ಸರ್ವಶಕ್ತನಾದ ಅಲ್ಲಾಹನು ಅವರನ್ನು ಸಾಮಾನ್ಯ ಅಹ್ಮದೀಯರಂತೆ ವರ್ತಿಸುವುದಿಲ್ಲ ಬದಲಿಗೆ ಅವರೊಂದಿಗೆ ವಿಶೇಷವಾಗಿ ವರ್ತಿಸುತ್ತಾನೆ.

**ಪ್ರಶ್ನೆ:** ಒಬ್ಬ ವ್ಯಕ್ತಿಯು ಮರಣ ಹೊಂದಿದಾಗ, ಮುನ್ಕರ್ ಮತ್ತು ನಕೀರ್ ಅವನ ಬಳಿ ಬರುತ್ತಾರೆ ಎಂದು ನೀವು ನಂಬುತ್ತೀರಾ?

**ಉತ್ತರ:** ಮುನ್ಕರ್ ಮತ್ತು ನಕೀರ್ ಇಬ್ಬರು ದೇವದೂತರಾಗಿದ್ದಾರೆ, ಆದರೆ ಸಮಾಧಿಯಲ್ಲಿ ಮೃತರನ್ನು ಪ್ರಶ್ನೆಗಳನ್ನು ಕೇಳಲು ಅವರು ಭೌತಿಕ ರೂಪದಲ್ಲಿ ಕಾಣಿಸಿಕೊಳ್ಳುತ್ತಾರೆ ಎಂದು ನಾನು ನಂಬುವುದಿಲ್ಲ.

**ಪ್ರಶ್ನೆ:** ಮುನ್ಕರ್ ಮತ್ತು ನಕೀರ್ ಸಮಾಧಿಗಳಿಗೆ ಏಕೆ ಬರುತ್ತಾರೆ?

**ಉತ್ತರ:** ಸಾಯುತ್ತಿರುವ ವ್ಯಕ್ತಿಗೆ ಅವನ ಹಿಂದಿನ ಕಾರ್ಯಗಳ ಬಗ್ಗೆ ತಿಳಿಸಲು.

**ಪ್ರಶ್ನೆ:** ಮುನ್ಕರ್ ಮತ್ತು ನಕೀರ್ ಕೂಡ ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಅವರ ಖಬರ್‌ಗೆ ಬಂದಿದ್ದರು ಎಂದು ನೀವು ಭಾವಿಸುತ್ತೀರಾ?

**ಉತ್ತರ:** ಇದನ್ನು ಖಚಿತಪಡಿಸಿಕೊಳ್ಳಲು ನನ್ನ ಬಳಿ ಯಾವುದೇ ಮಾರ್ಗವಿಲ್ಲ.

**ಪ್ರಶ್ನೆ:** ಸರ್ವಶಕ್ತನಾದ ಅಲ್ಲಾಹನು ಆದಮರನ್ನು ಕ್ಷಮಿಸಿದ ನಂತರ ಅವರಿಗೆ ನೀಡಿದ ಪ್ರಕಾಶವನ್ನು ಮಿರ್ಝಾ ಸಾಹಿಬ್ ಸಹ ಪಡೆದಿದ್ದಾರೆಯೇ?

**ಉತ್ತರ:** ಅಂತಹ ಯಾವುದೇ ಸಿದ್ಧಾಂತದ ಬಗ್ಗೆ ನನಗೆ ತಿಳಿದಿಲ್ಲ, ಪವಿತ್ರ ಖುರ್‌ಆನ್ ಅಥವಾ ಯಾವುದೇ ಅಧಿಕೃತ ಹದೀಸ್‌ನಲ್ಲಿ ಅಂತಹ ಯಾವುದೇ ಘಟನೆಯ ಉಲ್ಲೇಖವಿಲ್ಲ.

**ಪ್ರಶ್ನೆ:** ಪವಿತ್ರ ಖುರ್‌ಆನ್‌ನಲ್ಲಿ ಮೆಸೀಹ್ ಅಥವಾ ಮಹದಿಯ ಬಗ್ಗೆ ಯಾವುದೇ ಸ್ಪಷ್ಟ ಭವಿಷ್ಯವಾಣಿಯಿದೆಯೇ?

**ಉತ್ತರ:** ಪವಿತ್ರ ಖುರ್‌ಆನ್‌ನಲ್ಲಿ ಅವರ ಹೆಸರನ್ನು ಉಲ್ಲೇಖಿಸಲಾಗಿಲ್ಲ.

**ಪ್ರಶ್ನೆ:** ಹದೀಸ್‌ಗಳು ಮಸೀಹ್ ಮತ್ತು ಮಹದಿಯ ಆಗಮನವನ್ನು ಒಪ್ಪುತ್ತದೆಯೇ?

**ಉತ್ತರ:** ಯಾವುದೇ ಮಸೀಹ್ ಆಗಮಿಸುವುದಿಲ್ಲ ಎಂದು ಹೇಳುವ ಯಾವುದೇ ಹದೀಸ್ ಇಲ್ಲ. ಮಹದಿಗೆ ಸಂಬಂಧಿಸಿದಂತೆ, ಕೆಲವು ಹದೀಸ್‌ಗಳು ಅವರು ಮತ್ತು ಮಸೀಹರು ಒಂದೇ ಎಂದು ತೋರಿಸುತ್ತವೆ.

**ಪ್ರಶ್ನೆ:** ಎಲ್ಲಾ ಮುಸ್ಲಿಮರು ಈ ಹದೀಸ್‌ಗಳನ್ನು ಸರ್ವಾನುಮತದಿಂದ ನಂಬುತ್ತಾರೆಯೇ?

**ಉತ್ತರ:** ಇಲ್ಲ.

**ಪ್ರಶ್ನೆ:** ಈ ಹದೀಸ್‌ಗಳಿಂದ ಮಸೀಹ್ ಮತ್ತು ಮಹದಿ ಇಬ್ಬರು ಪ್ರತ್ಯೇಕ ವ್ಯಕ್ತಿಗಳಾಗಿರುತ್ತಾರೆ ಎಂದು ಕಾಣಿಸುವುದಿಲ್ಲವೇ?

**ಉತ್ತರ:** ಹೌದು, ಇದು ಕೆಲವು ಹದೀಸ್‌ಗಳಿಂದ ಕಂಡುಬರುತ್ತದೆ.

**ಪ್ರಶ್ನೆ:** ಮಸೀಹ್ ಮತ್ತು ಮಹದಿಯ ಆಗಮನದ ಕುರಿತು ಮುನ್ಸೂಚಿಸಲಾಗಿರುವ ಹದೀಸ್‌ಗಳ ಪ್ರಕಾರ ದಜ್ಜಾಲ್‌ನ ವಧೆ ಮತ್ತು ಯಾಜೂಜ್ ಮತ್ತು ಮಾಜೂಜ್‌ನ ನಾಶದ ಎಷ್ಟು ಸಮಯದ ನಂತರ ಇಸ್ರಾಫೀಲ್ ತನ್ನ ತುತ್ತೂರಿಯನ್ನು ಊದುತ್ತಾನೆ?

**ಉತ್ತರ:** ನಾನು ಈ ಹದೀಸ್‌ಗಳಿಗೆ ಯಾವುದೇ ಪ್ರಾಮುಖ್ಯತೆಯನ್ನು ನೀಡುವುದಿಲ್ಲ.

**ಪ್ರಶ್ನೆ:** ಹದೀಸ್‌ಗಳಲ್ಲಿ ದಜ್ಜಾಲ್ ಮತ್ತು ಯಜೂಜ್ ಮತ್ತು ಮಾಜೂಜ್ ಬಗ್ಗೆ ಉಲ್ಲೇಖಿಸಲಾಗಿದೆ ಎಂದು ನೀವು ನಂಬುತ್ತೀರಾ?

**ಉತ್ತರ:** ಈ ಪ್ರಶ್ನೆಗೆ ಉತ್ತರಿಸಲು ನಾನು ಈ ಹದೀಸ್‌ಗಳನ್ನು ಪರಿಶೀಲಿಸಬೇಕು. ಪವಿತ್ರ ಖುರ್‌ಆನ್‌ನಲ್ಲಿ ದಜ್ಜಾಲ್ ಅಥವಾ ಯಾಜೂಜ್ ಮಾಜೂಜ್ ಅನ್ನು ಉಲ್ಲೇಖಿಸಲಾಗಿದೆ.

**ಪ್ರಶ್ನೆ:** ಮಸೀಹ್ ಮತ್ತು ಮಹದಿಗೆ ನಬಿಯ ಪದವಿ ಲಭಿಸುವುದೇ?

**ಉತ್ತರ:** ಹೌದು.

**ಪ್ರಶ್ನೆ:** ಅವರು ಲೌಕಿಕ ರಾಜರಾಗುತ್ತಾರೆಯೇ?

**ಉತ್ತರ:** ನನ್ನ ಪ್ರಕಾರ ಇಲ್ಲ.

**ಪ್ರಶ್ನೆ:** ಜಿಹಾದ್ ಅಥವಾ ಜಿಜ್ಯಾಗೆ ಸಂಬಂಧಿಸಿದ ಕಾನೂನನ್ನು ಮಸೀಹ್ ರದ್ದುಗೊಳಿಸುತ್ತಾರೆ ಎಂಬುದಕ್ಕೆ ಯಾವುದೇ ಹದೀಸ್ ಇದೆಯೇ?

**ಉತ್ತರ:** ಒಂದು ಹದೀಸ್ ಜಿಜ್ಯಾಗೆ ಸಂಬಂಧಿಸಿದಂತೆ ಇದೆ ಮತ್ತು ಇನ್ನೊಂದು ಜಿಹಾದ್‌ಗೆ ಸಂಬಂಧಿಸಿದಂತೆ ಇದೆ. ನಾವು ಜಿಜ್ಯಾ ಕುರಿತ ಹದೀಸ್‌ಗೆ ಆದ್ಯತೆ ನೀಡುತ್ತೇವೆ ಮತ್ತು ಇನ್ನೊಂದನ್ನು ಅದರ ವಿವರಣೆಯಾಗಿ ಪರಿಗಣಿಸುತ್ತೇವೆ. ಹದೀಸ್‌ನಲ್ಲಿ ಬಳಸಲಾದ ಪದಗಳಿಗೆ ರದ್ದುಗೊಳಿಸುವ ಅರ್ಥವಿದೆ ಎಂದು ನಾವು ಭಾವಿಸುವುದಿಲ್ಲ, ಪದಕ್ಕೆ ಮುಂದೂಡುವುದು ಎಂಬ ಅರ್ಥವಿದೆ ಎಂದು ನಾವು ಭಾವಿಸುತ್ತೇವೆ.

**ಪ್ರಶ್ನೆ:** ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಅವರು ಮಸೀಹ್ ಮತ್ತು ಮಹದಿ ಎಂದು ಹೇಳಿಕೊಂಡಿದ್ದಾರೆಯೇ?

**ಉತ್ತರ:** ಹೌದು.

**ಪ್ರಶ್ನೆ:** ಮಸೀಹ್ ಅಥವಾ ಮಹದಿಯ ಆಗಮನವನ್ನು ನಂಬುವುದು ಮುಸ್ಲಿಂ ನಂಬಿಕೆಯ ಅತ್ಯಗತ್ಯ ಭಾಗವೇ?

**ಉತ್ತರ:** ಹೌದು. ಒಬ್ಬ ವ್ಯಕ್ತಿಯು ಈ ವಾದವು ನಿಜವೆಂದು ಅರ್ಥಮಾಡಿಕೊಂಡರೆ, ಅದನ್ನು ಒಪ್ಪಿಕೊಳ್ಳುವುದು ಅವನ ಮೇಲೆ ಕಡ್ಡಾಯವಾಗುತ್ತದೆ.

**ಪ್ರಶ್ನೆ:** ಇಸ್ಲಾಂ ಒಂದು ರಾಜಕೀಯ ಧಾರ್ಮಿಕ ವ್ಯವಸ್ಥೆಯೇ?

**ಉತ್ತರ:** ಇದು ಒಂದು ಧಾರ್ಮಿಕ ವ್ಯವಸ್ಥೆಯಾಗಿದೆ. ಆದರೆ ಇದು ಈ ಧಾರ್ಮಿಕ ವ್ಯವಸ್ಥೆಯ ಭಾಗವಾಗಿರುವ ಕೆಲವು ರಾಜಕೀಯ ನಿಯಮಗಳನ್ನು ಹೊಂದಿದೆ ಮತ್ತು ಇತರ ನಿಯಮಗಳಂತೆ ಪಾಲಿಸುವುದು ಮುಖ್ಯವಾಗಿದೆ.

**ಪ್ರಶ್ನೆ:** ಈ ವ್ಯವಸ್ಥೆಯಲ್ಲಿ ಅವಿಶ್ವಾಸಿಗಳ ಸ್ಥಿತಿ ಏನಾಗಿದೆ?

**ಉತ್ತರ:** ಅವಿಶ್ವಾಸಿಗಳಿಗೆ ಮುಸಲ್ಮಾನರಷ್ಟೇ ಸ್ಥಾನಮಾನ

ದೊರೆಯಲಿದೆ.

**ಪ್ರಶ್ನೆ:** ಕಾಫಿರ್ ಎಂದು ಯಾರಿಗೆ ಕರೆಯಲಾಗುತ್ತದೆ?

**ಉತ್ತರ:** ಕಾಫಿರ್ ಮತ್ತು ಮು'ಮಿನ್ ಮತ್ತು ಮುಸ್ಲಿಂ ಸಾಪೇಕ್ಷ ಪದಗಳಾಗಿವೆ ಮತ್ತು ಪರಸ್ಪರ ಸಮಂಜಸವಾಗಿವೆ. ಅವುಗಳಿಗೆ ಪ್ರತ್ಯೇಕ ನಿರ್ದಿಷ್ಟ ಅರ್ಥವಿಲ್ಲ. ಪವಿತ್ರ ಖುರ್‌ಆನ್‌ನಲ್ಲಿ, ಕಾಫಿರ್ ಎಂಬ ಪದವನ್ನು ಸರ್ವಶಕ್ತನಾದ ಅಲ್ಲಾಹನಿಗೆ ಸಂಬಂಧಿಸಿದಂತೆಯೂ ಇದೆ ಮತ್ತು ತಾಗೂತ್‌ಗೆ ಸಂಬಂಧಿಸಿದಂತೆಯೂ ಬಳಸಲಾಗಿದೆ. ಅದೇ ರೀತಿಯಲ್ಲಿ ಮುಮಿನ್ ಪದವನ್ನು ತಾಗೂತ್‌ಗೆ ಸಂಬಂಧಿಸಿದಂತೆ ಬಳಸಲಾಗಿದೆ.

**ಪ್ರಶ್ನೆ:** ಇಸ್ಲಾಮಿನ ವ್ಯವಸ್ಥೆಯಲ್ಲಿ, ಅವಿಶ್ವಾಸಿಗಳು, ಅಂದರೆ ಮುಸ್ಲಿಮೇತರರು, ಶಾಸನ ಮತ್ತು ಕಾನೂನು ರಚನೆಯಲ್ಲಿ ಭಾಗವಹಿಸುವ ಹಕ್ಕನ್ನು ಹೊಂದಿದ್ದಾರೆಯೇ ಮತ್ತು ಅವರು ಹೆಚ್ಚಿನ ಆಡಳಿತಾತ್ಮಕ ಜವಾಬ್ದಾರಿಯ ಸ್ಥಾನಗಳನ್ನು ಪಡೆದುಕೊಳ್ಳಬಹುದೇ?

**ಉತ್ತರ:** ನನ್ನ ಪ್ರಕಾರ, ಪವಿತ್ರ ಖುರ್‌ಆನ್ ಶುದ್ಧ ಇಸ್ಲಾಮಿಕ್ ಸರ್ಕಾರ ಎಂದು ಕರೆದ ಸರ್ಕಾರದ ಸ್ಥಾಪನೆಯು ಪ್ರಸ್ತುತ ಪರಿಸ್ಥಿತಿಯಲ್ಲಿ ಅಸಾಧ್ಯ. ಇಸ್ಲಾಮಿಕ್ ಸರ್ಕಾರದ ಈ ವ್ಯಾಖ್ಯಾನದ ಪ್ರಕಾರ, ಪ್ರಪಂಚದ ಎಲ್ಲಾ ಮುಸ್ಲಿಮರು ರಾಜಕೀಯ ಏಕತೆಯಲ್ಲಿ ಒಂದಾಗುವುದು ಅವಶ್ಯಕವಾಗಿದೆ, ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ಈ ಪರಿಸ್ಥಿತಿಯು ಸಂಪೂರ್ಣವಾಗಿ ಅಪ್ರಾಯೋಗಿಕವಾಗಿದೆ.

**ಪ್ರಶ್ನೆ:** ಎಂದಾದರೂ ಇಸ್ಲಾಮಿಕ್ ಸರ್ಕಾರ ಸ್ಥಾಪನೆಯಾಗಿದೆಯೇ?

**ಉತ್ತರ:** ಹೌದು. ಹಝ್ರತ್ ಪೈಗಂಬರ್(ಸ)ರವರ ಖಲೀಫರ ಇಸ್ಲಾಮಿಕ್ ಪ್ರಜಾಪ್ರಭುತ್ವದ ಯುಗದಲ್ಲಿ.

**ಪ್ರಶ್ನೆ:** ಈ ಪ್ರಜಾಪ್ರಭುತ್ವದಲ್ಲಿ ಅವಿಶ್ವಾಸಿಗಳ ಸ್ಥಿತಿ ಹೇಗಿತ್ತು? ಅವರು ಶಾಸನ ಮತ್ತು ಕಾನೂನು ರಚನೆಯಲ್ಲಿ ಭಾಗವಹಿಸಬಹುದಾಗಿತ್ತೆ ಮತ್ತು ಅವರು ಹೆಚ್ಚಿನ ಆಡಳಿತಾತ್ಮಕ ಜವಾಬ್ದಾರಿಯ ಸ್ಥಾನಗಳನ್ನು ಹೊಂದಬಹುದೇ?

**ಉತ್ತರ:** ಆ ಸಮಯದಲ್ಲಿ ಈ ಪ್ರಶ್ನೆ ಉದ್ಭವಿಸಲಿಲ್ಲ, ಏಕೆಂದರೆ ಇಸ್ಲಾಮಿನ ಪ್ರಜಾಪ್ರಭುತ್ವದ ಅವಧಿಯಲ್ಲಿ, ಮುಸ್ಲಿಮರು ಮತ್ತು ಅವಿಶ್ವಾಸಿಗಳ ನಡುವೆ ನಿರಂತರ ಯುದ್ಧಗಳು ನಡೆಯುತ್ತಿತ್ತು ಮತ್ತು ಅವಿಶ್ವಾಸಿಗಳಿಂದ ವಿಜಯಶಾಲಿಯಾದರೆ ಇಸ್ಲಾಮಿನ ರಾಜ್ಯದಲ್ಲಿ ಮುಸ್ಲಿಮರಿಗೆ ಇದ್ದ ಹಕ್ಕುಗಳನ್ನು ಅವಿಶ್ವಾಸಿಗಳು ಸಮಾನವಾಗಿ ಪಡೆಯುತ್ತಿದ್ದರು. ಆ ದಿನಗಳಲ್ಲಿ ಇಂದಿನಂತೆ ಚುನಾಯಿತ ವಿಧಾನಸಭೆಗಳು ಇರಲಿಲ್ಲ.

**ಪ್ರಶ್ನೆ:** ಹಝ್ರತ್ ಪೈಗಂಬರ್(ಸ)ರ ಕಾಲಾವಧಿಯಲ್ಲಿ, ನ್ಯಾಯಾಂಗವನ್ನು ಪ್ರತ್ಯೇಕಿಸಲಾಗಿತ್ತೇ?

**ಉತ್ತರ:** ಆ ದಿನಗಳಲ್ಲಿ, ಸರ್ವಶ್ರೇಷ್ಠ ನ್ಯಾಯಾಂಗವು ಸ್ವತಃ ಹಝ್ರತ್ ಪೈಗಂಬರ್(ಸ) ಅವರೇ ಆಗಿದ್ದರು.

**ಪ್ರಶ್ನೆ:** ಇಸ್ಲಾಮಿಕ್-ಶೈಲಿಯ ಸರ್ಕಾರದಲ್ಲಿ, ಒಬ್ಬ ಅವಿಶ್ವಾಸಿಗೆ ತನ್ನ ಧರ್ಮವನ್ನು ಬಹಿರಂಗವಾಗಿ ಬೋಧಿಸುವ ಹಕ್ಕಿದೆಯೇ?

**ಉತ್ತರ:** ಹೌದು.

**ಪ್ರಶ್ನೆ:** ಇಸ್ಲಾಮಿನ ಆಡಳಿತದಲ್ಲಿ ಒಬ್ಬ ಮುಸಲ್ಮಾನನು ತುಲನಾತ್ಮಕವಾಗಿ ಅಧ್ಯಾಯನದ ನಂತರ ಇಸ್ಲಾಂ ಧರ್ಮವನ್ನು ನಿಷ್ಠೆಯಿಂದ ತ್ಯಜಿಸಿ ಅನ್ಯ ಧರ್ಮವನ್ನು ಸ್ವೀಕರಿಸಿಕೊಂಡರೆ, ಉದಾಹರಣೆಗೆ ಅವನು ಕ್ರಿಶ್ಚಿಯನ್ ಅಥವಾ ನಾಸ್ತಿಕನಾದರೆ ಅವನು ಆ ದೇಶದ ನಾಗರಿಕನ ಹಕ್ಕುಗಳನ್ನು ಕಳೆದುಕೊಳ್ಳುತ್ತಾನೆಯೇ?

**ಉತ್ತರ:** ನನ್ನ ಪ್ರಕಾರ ಇಲ್ಲ, ಆದರೆ ಇಸ್ಲಾಂನಲ್ಲಿ ಅಂತಹ ವ್ಯಕ್ತಿಗೆ ಮರಣದಂಡನೆ ಶಿಕ್ಷೆಯನ್ನು ನೀಡಬೇಕು ಎಂದು ನಂಬುವ ಇತರ ಪಂಥಗಳಿವೆ.

**ಪ್ರಶ್ನೆ:** ಒಂದುವೇಳೆ, ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಅವರ ವಾದವನ್ನು ಸರಿಯಾಗಿ ಪರಿಗಣಿಸಿದ ನಂತರ, ಒಬ್ಬ ವ್ಯಕ್ತಿಯು ಪ್ರಾಮಾಣಿಕವಾಗಿ ತನ್ನ ವಾದವು ಸುಳ್ಳು ಎಂದು ತೀರ್ಮಾನಕ್ಕೆ ಬಂದರೆ, ಅವನು ಇನ್ನೂ ಮುಸ್ಲಿಮನಾಗಿರುತ್ತಾನೆಯೇ?

**ಉತ್ತರ:** ಹೌದು. ಸಾಮಾನ್ಯ ಪರಿಭಾಷೆಯಲ್ಲಿ ಅವನನ್ನು ಇನ್ನೂ ಮುಸ್ಲಿಂ ಎಂದು ಪರಿಗಣಿಸಲಾಗುತ್ತದೆ.

**ಪ್ರಶ್ನೆ:** ತಪ್ಪು ಧಾರ್ಮಿಕ ವಿಚಾರಗಳು ಅಥವಾ ನಂಬಿಕೆಗಳನ್ನು ಹೊಂದಿರುವ ಆದರೆ ಪ್ರಾಮಾಣಿಕವಾಗಿ ಮಾಡುವವರನ್ನು ಸರ್ವಶಕ್ತನಾದ ಅಲ್ಲಾಹನು ಶಿಕ್ಷಿಸುತ್ತಾನೆ ಎಂದು ನೀವು ಭಾವಿಸುತ್ತೀರಾ?

**ಉತ್ತರ:** ನನ್ನ ಪ್ರಕಾರ, ಪ್ರತಿಫಲ ಮತ್ತು ಶಿಕ್ಷೆಯ ತತ್ವವು ಪ್ರಾಮಾಣಿಕತೆ ಮತ್ತು ಒಳ್ಳೆಯ ಉದ್ದೇಶಗಳನ್ನು ಆಧರಿಸಿದೆಯೇ ಹೊರತು ನಂಬಿಕೆಯ ಸಿಂಧುತ್ವದ ಮೇಲೆ ಅಲ್ಲ.

**ಪ್ರಶ್ನೆ:** ಎಲ್ಲಾ ಮುಸ್ಲಿಮರಿಂದ ಅಲ್ಲಾಹನ ಹಕ್ಕುಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಒಳಗೊಂಡಂತೆ ಪವಿತ್ರ ಖುರ್‌ಆನ್ ಮತ್ತು ಸುನ್ನತ್‌ನ ಎಲ್ಲಾ ನಿಯಮಗಳನ್ನು ನಿಷೇಧಿಸುವುದು ಇಸ್ಲಾಮಿಕ್ ಸರ್ಕಾರದ ಧಾರ್ಮಿಕ ಕರ್ತವ್ಯವಾಗಿದೆಯೇ?

**ಉತ್ತರ:** ಇಸ್ಲಾಂ ಧರ್ಮದ ಮೂಲ ತತ್ವವೆಂದರೆ ಪಾಪದ ಜವಾಬ್ದಾರಿಯು ವೈಯಕ್ತಿಕವಾಗಿದೆ ಮತ್ತು ಒಬ್ಬ ವ್ಯಕ್ತಿಯು ತಾನು ಮಾಡುವ ಪಾಪಗಳಿಗೆ ಮಾತ್ರ ಜವಾಬ್ದಾರನಾಗಿರುತ್ತಾನೆ, ಆದ್ದರಿಂದ, ಇಸ್ಲಾಮಿಕ್ ರಾಜ್ಯದಲ್ಲಿ ಒಬ್ಬ ವ್ಯಕ್ತಿಯು ಪವಿತ್ರ ಖುರ್‌ಆನ್ ಮತ್ತು ಸುನ್ನತ್ ಅನ್ನು ಉಲ್ಲಂಘಿಸಿದರೆ, ಅವನೇ ಜವಾಬ್ದಾರನಾಗಿರುತ್ತಾನೆ.

**ಪ್ರಶ್ನೆ:** ಪಾಪದ ಹೊಣೆಗಾರಿಕೆ ವೈಯಕ್ತಿಕವಾಗಿದೆ ಎಂದು ನೀವು ಹೇಳಿದಂತೆ, ನಾನು ಮುಸ್ಲಿಂ ಸರ್ಕಾರದ ಮುಸ್ಲಿಂ ನಾಗರಿಕನೆಂದು ಭಾವಿಸೋಣ ಮತ್ತು ಇನ್ನೊಬ್ಬ ವ್ಯಕ್ತಿ ಪವಿತ್ರ ಖುರ್‌ಆನ್ ಮತ್ತು ಸುನ್ನತ್ ಅನ್ನು ಉಲ್ಲಂಘಿಸುವುದನ್ನು ನಾನು ನೋಡುತ್ತೇನೆ, ಇದಕ್ಕಾಗಿ ಅವನನ್ನು ಈ ಉಲ್ಲಂಘನೆಯಿಂದ ತಡೆಯುವುದು ನನ್ನ ಧಾರ್ಮಿಕ ಕರ್ತವ್ಯವೇ? ಧಾರ್ಮಿಕ ಕರ್ತವ್ಯ ಎಂದರೆ ನಾನು ಅವನನ್ನು ಹಾಗೆ ಮಾಡದಂತೆ ತಡೆಯದಿದ್ದರೆ, ನಾನೇ ತಪ್ಪಿತಸ್ಥನಾಗುತ್ತೇನೆ?

**ಉತ್ತರ:** ಈ ವ್ಯಕ್ತಿಗೆ ಸಲಹೆ ನೀಡುವುದು ಮಾತ್ರ ನಿಮ್ಮ ಕರ್ತವ್ಯ.

**ಪ್ರಶ್ನೆ:** ಒಂದುವೇಳೆ, ನಾನು ಮೇಲ್ವಿಚಾರಕನಾಗಿದ್ದರೂ, ಹೀಗೆಯೇ ಆಗುತ್ತದೆಯೇ?

**ಉತ್ತರ:** ಆದರೂ, ಆ ವ್ಯಕ್ತಿಯನ್ನು ಹಾಗೆ ಮಾಡಲು ಒತ್ತಾಯ ಪೂರಕವಾಗಿ ತಡೆಯುವುದು ನಿಮ್ಮ ಧಾರ್ಮಿಕ ಕರ್ತವ್ಯವಲ್ಲ.

**ಪ್ರಶ್ನೆ:** ನಾನು ಮೇಲ್ವಿಚಾರಕನಾಗಿದ್ದರೆ, ಅಂತಹ ಉಲ್ಲಂಘನೆಗಳನ್ನು ಶಿಕ್ಷಿಸುವ ಲೌಕಿಕ ಕಾನೂನನ್ನು ರೂಪಿಸುವುದು ನನ್ನ ಕರ್ತವ್ಯವೇ?

**ಉತ್ತರ:** ಖಂಡಿತವಾಗಿಯೂ ಇಲ್ಲ, ಹಾಗೆ ಮಾಡುವುದು ನಿಮ್ಮ ಧಾರ್ಮಿಕ ಕರ್ತವ್ಯವಾಗುವುದಿಲ್ಲ, ಆದರೆ ಅಂತಹ ಕಾನೂನನ್ನು ಮಾಡುವ ಅಧಿಕಾರ ನಿಮಗೆ ಇರುತ್ತದೆ.

**ಪ್ರಶ್ನೆ:** ಒಬ್ಬ ನಿಜವಾದ ಪ್ರವಾದಿಯನ್ನು ತ್ಯಜಿಸುವುದು ಅಪನಂಬಿಕೆ ಅಲ್ಲವೇ?

**ಉತ್ತರ:** ಹೌದು ಇದು ಅಪನಂಬಿಕೆಯಾಗಿದೆ, ಆದರೆ ಅಪನಂಬಿಕೆ ಎರಡು ವಿಧವಾಗಿದೆ. ಒಬ್ಬ ವ್ಯಕ್ತಿಯು ರಾಷ್ಟ್ರದಿಂದ ವಂಚಿತನಾಗುವುದು ಒಂದು, ಇನ್ನೊಂದು ಅವನು ರಾಷ್ಟ್ರದಿಂದ ಹೊರಗಿಡದಿರುವುದು. ಕಲಿಮಾ ತಯ್ಯಬದ ನಿರಾಕರಣೆ ಮೊದಲ ವಿಧದ ಅಪನಂಬಿಕೆಯಾಗಿದೆ, ಎರಡನೆಯ ವಿಧದ ಅಪನಂಬಿಕೆಯು ಕಡಿಮೆ ಅಪನಂಬಿಕೆಗಳಿಂದ ಉಂಟಾಗುತ್ತದೆ.

**ಪ್ರಶ್ನೆ:** ಹಝ್ರತ್ ಪೈಗಂಬರ್(ಸ) ನಂತರ ಬಂದ ಪ್ರವಾದಿಯನ್ನು ನಂಬದ ವ್ಯಕ್ತಿಗೆ ಪರಲೋಕದಲ್ಲಿ ಶಿಕ್ಷೆಯಾಗುತ್ತದೆಯೇ?

**ಉತ್ತರ:** ಅಂತಹ ವ್ಯಕ್ತಿಯನ್ನು ನಾವು ಪಾಪಿ ಎಂದು ಪರಿಗಣಿಸುತ್ತೇವೆ, ಆದರೆ ಅಲ್ಲಾಹನು ಅವನನ್ನು ಶಿಕ್ಷಿಸುತ್ತಾನೆಯೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸುವುದು ದೇವರ ಕೆಲಸವಾಗಿದೆ.

**ಪ್ರಶ್ನೆ:** ನೀವು ಖಾತಮನ್ನಬೀಯೀನ್‌ನಲ್ಲಿ ಖಾತಮ್‌ನ "ತ" ವನ್ನು ಫತಾಹ್ ಅಥವಾ ಕಸ್ರ ಜೊತೆ ಪಠಿಸುತ್ತೀರಾ?

**ಉತ್ತರ:** ಎರಡೂ ರೀತಿಯಲ್ಲಿ ಸರಿ ಇದೆ.

**ಪ್ರಶ್ನೆ:** ಈ ಪದದ ಸರಿಯಾದ ಅರ್ಥವೇನು?

**ಉತ್ತರ:** ಇದನ್ನು "ತ" ಉಚ್ಚಾರಣೆಯೊಂದಿಗೆ ಓದಿದರೆ, ಒಂದು ಉಂಗುರವು ಒಬ್ಬ ವ್ಯಕ್ತಿಯ ಅಲಂಕಾರದಂತೆ ನಮ್ಮ ಪ್ರವಾದಿ ಹಝ್ರತ್ ಪೈಗಂಬರ್(ಸ) ರವರು ಇತರ ಪ್ರವಾದಿಗಳ ಅಲಂಕಾರವಾಗಿದ್ದಾರೆ ಎಂದು ಅರ್ಥೈಸುತ್ತದೆ. ಅದನ್ನು ಕಸ್ರಾದಿಂದ "ತಿ" ಓದಿದರೆ, ನಿಘಂಟಿನ ಪ್ರಕಾರ, ಆ ಸಂದರ್ಭದಲ್ಲಿಯೂ ಅದೇ ಅರ್ಥವನ್ನು ಹೊಂದಿರುತ್ತದೆ. ಆದರೆ ಅದರಿಂದ ಇದು ಅಂತ್ಯಕ್ಕೆ ಏನನ್ನಾದರೂ ತರುವ ವ್ಯಕ್ತಿ ಎಂದೂ ಅರ್ಥೈಸಬಹುದು. ಈ ಅರ್ಥದ ಪ್ರಕಾರ, ಖಾತಮ್ ಅಲ್-ನಬೀಯೀನ್ ಕೊನೆಯ ಪ್ರವಾದಿ ಎಂದು ಅರ್ಥವಾಗಿದೆ. ಆದರೆ ಈ ಸಂದರ್ಭದಲ್ಲಿ, ಅಲ್-ನಬೀಯೀನ್ ಎಂಬ ಪದದ ಅರ್ಥವು ಶರೀಯತ್ ಹೊಂದಿರುವ ಪ್ರವಾದಿ ಎಂದಾಗುತ್ತದೆ. ಅಂದರೆ, 'ಶರ್‌ಈ ನಬಿ' ಪ್ರವಾದಿ.

**ಪ್ರಶ್ನೆ:** ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಯಾವ ಅರ್ಥದಲ್ಲಿ ಪ್ರವಾದಿಯಾಗಿದ್ದರು?

**ಉತ್ತರ:** ಈ ಪ್ರಶ್ನೆಗೆ ನಾನು ಈ ಹಿಂದೆಯೇ ಉತ್ತರಿಸಿದ್ದೇನೆ. ಅವರು ಪ್ರವಾದಿಯಾಗಿದ್ದರು ಏಕೆಂದರೆ ಸರ್ವಶಕ್ತನಾದ ಅಲ್ಲಾಹನು ತನ್ನ ವಹಿಯಲ್ಲಿ ಅವರಿಗೆ ನಬಿ ಎಂದು ಹೆಸರಿಸಿದನು.

**ಪ್ರಶ್ನೆ:** ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಅವರ ಆಧ್ಯಾತ್ಮಿಕ ಪದವಿಯಂತೆ ಅನ್ಯ ವ್ಯಕ್ತಿಯು ನಂತರ ಆಗಮಿಸಬಹುದೇ?

**ಉತ್ತರ:** ಸಾಧ್ಯತೆ ಇದೆ, ಆದರೆ ಭವಿಷ್ಯದಲ್ಲಿ ಸರ್ವಶಕ್ತನಾದ ಅಲ್ಲಾಹನು ಅಂತಹ ವ್ಯಕ್ತಿಗಳನ್ನು ಕಳುಹಿಸುತ್ತಾನೆಯೇ ಅಥವಾ ಇಲ್ಲವೇ ಎಂದು ಹೇಳಲಾಗುವುದಿಲ್ಲ.

**ಪ್ರಶ್ನೆ:** ಮಹಿಳೆ ಪ್ರವಾದಿಯಾಗಬಹುದೇ?

**ಉತ್ತರ:** ಮಹಿಳೆ ಪ್ರವಾದಿಯಾಗಲು ಸಾಧ್ಯವಿಲ್ಲ ಎಂದು ಹದೀಸ್‌ನಿಂದ ತಿಳಿದುಬಂದಿದೆ.

**ಪ್ರಶ್ನೆ:** ನಿಮ್ಮ ಜಮಾಅತ್ತಿನಲ್ಲಿರುವ ಯಾವುದೇ ಮಹಿಳೆ ಈ ಸ್ಥಾನವನ್ನು ಪಡೆದಿದ್ದಾರೆ ಎಂದ ವಾದವನ್ನು ಮಂಡಿಸಿದ್ದಾರೆಯೇ?

**ಉತ್ತರ:** ನನ್ನ ಅರಿವಿನ ಪ್ರಕಾರ ಇಲ್ಲ.

**ಪ್ರಶ್ನೆ:** ನರಕವು ಶಾಶ್ವತವಾಗಿದೆಯೇ?

**ಉತ್ತರ:** ಇಲ್ಲ.

**ಪ್ರಶ್ನೆ:** ನರಕವು ಪ್ರಾಣಿಯೇ ಅಥವಾ ಚಲಿಸುವ ವಸ್ತುವೇ ಅಥವಾ ಸ್ಥಿರ ಸ್ಥಳವೇ?

**ಉತ್ತರ:** ನರಕ ಎಂಬುದು ಆತ್ಮಕ್ಕೆ ಸೇರಿದ ಸ್ಥಿತಿ ಮಾತ್ರ ಆಗಿದೆ.

**ಪ್ರಶ್ನೆ:** ಇಮಾಮ್ ಗಝ್ಝಾಲಿ(ರಹ್) ಅವರು ನರಕವನ್ನು ಪ್ರಾಣಿಗೆ ಹೋಲಿಸಿದ್ದಾರೆ, ಇದು ಸರಿಯೇ?

**ಉತ್ತರ:** ಈ ಪದವನ್ನು ಅಕ್ಷರಶಃ ಬಳಸಿದ್ದಾರೆಂದು ತೋರುತ್ತದೆ.

**ಪ್ರಶ್ನೆ:** ಇಸ್ಲಾಮಿನ ಕೆಲವು ವಿಮರ್ಶಿಗರು ಹೇಳುತ್ತಾರೆ, ಇಸ್ಲಾಮ್ ಧರ್ಮವನ್ನು ಒಂದು ಸಾಮಾನ್ಯ ದೇವತಾಶಾಸ್ತ್ರಜ್ಞರು ಅರ್ಥಮಾಡಿಕೊಂಡಂತೆ, ಮಾನಸಿಕ ಗುಲಾಮಗಿರಿಯನ್ನು ಶಾಶ್ವತಗೊಳಿಸುತ್ತದೆ ಏಕೆಂದರೆ ಅದು ಪ್ರಾಮಾಣಿಕತೆಯಿಂದ ವಿರೋಧಿಸುವವನನ್ನು ಆತನು ಎಷ್ಟೇ ಪ್ರಾಮಾಣಿಕನಾಗಿರಲಿ ಶಾಶ್ವತವಾಗಿ ನರಕಕ್ಕೆ ಖಂಡಿಸುತ್ತದೆ.

**ಉತ್ತರ:** ನನ್ನ ಅಭಿಪ್ರಾಯದಲ್ಲಿ, ನರಕವನ್ನು ಶಾಶ್ವತವೆಂದು ಪರಿಗಣಿಸದ ಏಕೈಕ ಧರ್ಮ ಇಸ್ಲಾಂ ಆಗಿದೆ.

**ಪ್ರಶ್ನೆ:** ಇದರರ್ಥ ಮುಸ್ಲಿಮರಲ್ಲದವರಿಗೆ ಅಲ್ಲಾಹನ ಕ್ಷಮೆ (ಮಗ್‌ಫಿರತ್) ವಿಸ್ತರಿಸುತ್ತದೆಯೇ?

**ಉತ್ತರ:** ಖಂಡಿತವಾಗಿ.

**ಪ್ರಶ್ನೆ:** ಒಂದು ರಾಷ್ಟ್ರದ ವಿವಿಧ ಧರ್ಮಗಳ ನಾಗರೀಕರು ಸಮಾನ ರಾಜಕೀಯ ಹಕ್ಕುಗಳನ್ನು ಅನುಭವಿಸುತ್ತಾರೆ ಎಂಬುದು ಝುಕಿಯಾ ರಾಷ್ಟ್ರದ ಪ್ರಸ್ತುತ ದೃಷ್ಟಿಕೋನವಾಗಿದೆ. ಇದು ಇಸ್ಲಾಂನಲ್ಲಿ ಕಂಡುಬರುತ್ತದೆಯೇ?

**ಉತ್ತರ:** ಖಂಡಿತವಾಗಿ.

**ಪ್ರಶ್ನೆ:** ಸರಕಾರವು ಪವಿತ್ರ ಖುರ್‌ಆನ್ ಮತ್ತು ಸುನ್ನತ್‌ಗೆ ವಿರುದ್ಧವಾದ ಕಾನೂನನ್ನು ಮಾಡಿದರೆ ಮುಸ್ಲಿಮೇತರ ಸರಕಾರದಲ್ಲಿ ಮುಸಲ್ಮಾನನ ಕರ್ತವ್ಯವೇನು?

**ಉತ್ತರ:** ಕಾನೂನನ್ನು ರಚಿಸುವಾಗ ಸರ್ಕಾರವು ಸರ್ಕಾರವಾಗಿ ಚಲಾಯಿಸಬಹುದಾದ ಅಧಿಕಾರವನ್ನು ಬಳಸಿದರೆ, ಮುಸ್ಲಿಮರು ಆ ಕಾನೂನನ್ನು ಪಾಲಿಸಬೇಕು, ಆದರೆ ಕಾನೂನು ವೈಯಕ್ತಿಕವಾಗಿದ್ದರೆ, ಉದಾಹರಣೆಗೆ, ಕಾನೂನು ಮುಸ್ಲಿಮರು ನಮಾಝನ್ನು ಮಾಡುವುದನ್ನು ತಡೆಯುತ್ತಿದ್ದರೆ, ಅದು ಬಹಳ ಮುಖ್ಯವಾದ ಪ್ರಶ್ನೆಯಾಗಿದೆ. ಆದ್ದರಿಂದ, ಮುಸ್ಲಿಮರು ಅಂತಹ ದೇಶವನ್ನು ತೊರೆಯಬೇಕು, ಆದರೆ ಪ್ರಶ್ನೆಯು ಚಿಕ್ಕದಾಗಿದ್ದರೆ, ಉದಾಹರಣೆಗೆ, ವಿರಾಸತ್, ಮದುವೆ ಇತ್ಯಾದಿಗಳ ವಿಷಯವಾಗಿದ್ದರೆ, ಮುಸ್ಲಿಮರು ಈ ಕಾನೂನನ್ನು ಒಪ್ಪಿಕೊಳ್ಳಬೇಕು.

**ಪ್ರಶ್ನೆ:** ಒಬ್ಬ ಮುಸ್ಲಿಮನು ಮುಸ್ಲಿಮೇತರ ಸರ್ಕಾರಕ್ಕೆ ನಿಷ್ಠನಾಗಿರಬಹುದೇ?

**ಉತ್ತರ:** ಖಂಡಿತವಾಗಿ.

**ಪ್ರಶ್ನೆ:** ಆತನು ಮುಸ್ಲಿಮೇತರ ಸರ್ಕಾರದ ಸೈನ್ಯದಲ್ಲಿದ್ದರೆ ಮತ್ತು ಮುಸ್ಲಿಂ ಸರ್ಕಾರದೊಂದಿಗೆ ಹೋರಾಡಲು ಕೇಳಿದರೆ, ಆ ಸಂದರ್ಭದಲ್ಲಿ ಅವನ ಕರ್ತವ್ಯವೇನು?

**ಉತ್ತರ:** ಮುಸ್ಲಿಂ ರಾಜ್ಯ ಸರಿ ಇದೆಯೋ ಇಲ್ಲವೋ ಎಂದು ನೋಡುವುದು ಅವನ ಕೆಲಸವಾಗಿದೆ. ಮುಸ್ಲಿಮ್ ಸರ್ಕಾರವು ಸರಿಯಾಗಿದೆ ಎಂದು ಅವನು ಭಾವಿಸಿದರೆ, ಅಂತಹ ಯುದ್ಧದಲ್ಲಿ ಭಾಗಿಯಾಗಿರುವುದು ನನ್ನ ಆತ್ಮಸಾಕ್ಷಿಗೆ ವಿರುದ್ಧವಾಗಿದೆ ಎಂದು ಘೋಷಿಸಲು ಇತರ ಕೆಲವು ದೇಶಗಳಲ್ಲಿನ ಅಭ್ಯಾಸದಂತೆ ರಾಜೀನಾಮೆ ನೀಡುವುದು ಅವನ ಕರ್ತವ್ಯವಾಗಿರುತ್ತದೆ.

**ಪ್ರಶ್ನೆ:** ಹಝ್ರತ್ ಪೈಗಂಬರ್(ಸ) ಅವರನ್ನು (ಶಫೀ) ಮಧ್ಯವರ್ತಿ ಎಂದು ಪರಿಗಣಿಸುವ ಅದೇ ಅರ್ಥದಲ್ಲಿ ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಸಹ ಮಧ್ಯವರ್ತಿಯಾಗುತ್ತಾರೆ ಎಂದು ನೀವು ನಂಬುತ್ತೀರಾ?

**ಉತ್ತರ:** ಇಲ್ಲ.

**ಪ್ರಶ್ನೆ:** ನಿಮ್ಮ ಜಮಾಅತ್ತಿನಲ್ಲಿ ಅಲ್-ಫಝ್ಲ್‌ನ ಮಹತ್ವವೇನು ಮತ್ತು ಅದರೊಂದಿಗೆ ನಿಮ್ಮ ಸಂಬಂಧವೇನು?

**ಉತ್ತರ:** ಈ ಪತ್ರಿಕೆ ನನ್ನಿಂದ ಪ್ರಕಟವಾಗಿದ್ದು ನಿಜ, ಆದರೆ ಎರಡ್ಮೂರು ವರ್ಷಗಳ ನಂತರ ಅದರೊಂದಿಗಿನ ನನ್ನ ಸಂಪರ್ಕವನ್ನು ನಾನು ಕಡಿದುಕೊಂಡಿದ್ದೆ. ನಾನು ಇದನ್ನು ಬಹುಶಃ 1915 ಅಥವಾ 1916 ರಲ್ಲಿ ಮಾಡಿದ್ದೇನೆ. ಇದು ಈಗ ಸದರ್ ಅಂಜುಮನ್ ಅಹ್ಮದಿಯಾ ರಬ್ವಾ ಅವರ ಒಡೆತನದಲ್ಲಿದೆ.

**ಪ್ರಶ್ನೆ:** 1915-16 ರ ನಂತರ, ಅದರ ಪ್ರಕಟಣೆಯನ್ನು ನಿಲ್ಲಿಸುವುದು ನಿಮ್ಮ ಅಧಿಕಾರದಲ್ಲಿದೆಯೇ?

**ಉತ್ತರ:** ಹೌದು. ಜಮಾಅತ್ ನನಗೆ ನಿಷ್ಠರಾಗಿರುವ ಕಾರಣ ಮತ್ತು ಈ ಪತ್ರಿಕೆಯನ್ನು ಖರೀದಿಸಬೇಡಿ ಎಂದು ನಾನು ಅವರಿಗೆ ಹೇಳಿದರೆ, ಅದರ ಪ್ರಕಟಣೆ ಸ್ವಯಂಚಾಲಿತವಾಗಿ ನಿಲ್ಲುತ್ತದೆ.

**ಪ್ರಶ್ನೆ:** ಅದನ್ನು ಪ್ರಕಟಿಸುವುದನ್ನು ನಿಲ್ಲಿಸಲು ನೀವು ಅಂಜುಮನ್‌ಗೆ ಸಲಹೆ ನೀಡಬಹುದೇ?

**ಉತ್ತರ:** ಅದರ ಪ್ರಕಟಣೆಯನ್ನು ನಿಲ್ಲಿಸಲು ಅದರ ಮಾಲೀಕತ್ವದ ಅಂಜುಮನ್‌ಗೆ ನಾನು ಸಲಹೆ ನೀಡಬಹುದು.

**ಪ್ರಶ್ನೆ:** ಪ್ರಸ್ತುತ ಆಂದೋಲನ ಪ್ರಾರಂಭವಾಗುವ ಮೊದಲು, ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಅವರನ್ನು ನಂಬದ ಮುಸ್ಲಿಮರನ್ನು ಅವಿಶ್ವಾಸಿ (ಕಾಫಿರ್) ಮತ್ತು ಇಸ್ಲಾಮಿನ ವಲಯದಿಂದ ಹೊರಗಿಡಲ್ಪಟ್ಟವರು ಎಂದು ಕರೆಯಲಿಲ್ಲವೇ?

**ಉತ್ತರ:** ಹೌದು, ನಾನು ಇದನ್ನು ಹೇಳುತ್ತೇನೆ ಮತ್ತು ಅದೇ ಸಮಯದಲ್ಲಿ ನಾನು ಈ ಪದಗಳನ್ನು ಬಳಸಿರುವ "ಕಾಫಿರ್" ಮತ್ತು "ಇಸ್ಲಾಂನ ವಲಯದಿಂದ ಹೊರಗೆ" ಪದಗಳ ಅರ್ಥವನ್ನು ವಿವರಿಸುತ್ತಿದ್ದೇನೆ.

**ಪ್ರಶ್ನೆ:** ನೀವು ಪ್ರಸ್ತುತ ಆಂದೋಲನ ಪ್ರಾರಂಭವಾಗುವ ಮೊದಲು, ನೀವು ಅಹ್ಮದೀಯರಲ್ಲದ ಇಮಾಮ್‌ನ ಹಿಂದೆ ನಮಾಝ್ ನಿರ್ವಹಿಸಬೇಡಿ ಮತ್ತು ಅಹ್ಮದೀಯರಲ್ಲದವರ ಜನಾಝವನ್ನು ನಿರ್ವಹಿಸಬೇಡಿ ಮತ್ತು ನಿಮ್ಮ ಹೆಣ್ಣುಮಕ್ಕಳನ್ನು ಅಹ್ಮದೀಯರಲ್ಲದವರಿಗೆ ಮದುವೆ ಮಾಡಬೇಡಿ ಎಂದು ನಿಮ್ಮ ಜಮಾತ್ತಿಗೆ ಸಲಹೆ ನೀಡುತ್ತಿರುವುದು ಸರಿಯಲ್ಲವೇ?

**ಉತ್ತರ:** ಅಹ್ಮದಿಯೇತರ ವಿದ್ವಾಂಸರ ಇದೇ ರೀತಿಯ ಫತ್ವಾಗಳಿಗೆ ಪ್ರತಿಕ್ರಿಯೆಯಾಗಿ ನಾನು ಇದೆಲ್ಲವನ್ನೂ ಹೇಳುತ್ತಿದ್ದೇನೆ. ಬದಲಿಗೆ ಅವರು ಹೇಳಿದಕ್ಕೆ ಕಡಿಮೆಯಲ್ಲಿಯೇ ಹೇಳಿದ್ದೇಣೆ ಏಕೆಂದರೆ **ಜಝಾಉ ಸೈಯಿಅತಿನ್ ಮಿಸ್ಲುಹಾ.**

**ಪ್ರಶ್ನೆ:** ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಅವರನ್ನು ಒಳ್ಳೆಯ ಉದ್ದೇಶದಿಂದ ನಂಬದ ವ್ಯಕ್ತಿ ಇನ್ನೂ ಮುಸ್ಲಿಂ ಆಗಿಯೇ ಉಳಿದಿದ್ದಾನೆ ಎಂದು ನೀವು ಈಗ ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೀರಿ. ಮೊದಲಿನಿಂದಲೂ ಇದು ನಿಮ್ಮ ಅಭಿಪ್ರಾಯವೇ?

**ಉತ್ತರ:** ಹೌದು.

**ಪ್ರಶ್ನೆ:** ಅಹ್ಮದಿಯರು ಮತ್ತು ಅಹ್ಮದೀಯರಲ್ಲದವರ ನಡುವಿನ ವ್ಯತ್ಯಾಸಗಳು ಮೂಲಭೂತವಾಗಿದೆಯೇ?

**ಉತ್ತರ:** ಮೂಲಭೂತ ಪದವು ನಮ್ಮ ಸಂದೇಶವಾಹಕರು, ಹಝ್ರತ್ ಪೈಗಂಬರ್(ಸ) ರವರು ಈ ಪದಕ್ಕೆ ತೆಗೆದುಕೊಂಡಂತೆಯೇ ಅದೇ ಅರ್ಥವನ್ನು ಹೊಂದಿದ್ದರೆ, ಈ ವ್ಯತ್ಯಾಸಗಳು ಮೂಲಭೂತವಲ್ಲ.

**ಪ್ರಶ್ನೆ:** ಒಂದುವೇಳೆ ಮೂಲಭೂತ ಪದವನ್ನು ಅದರ ಸಾಮಾನ್ಯ ಅರ್ಥದಲ್ಲಿ ತೆಗೆದುಕೊಂಡರೆ ಏನು?

**ಉತ್ತರ:** ಸಾಮಾನ್ಯ ಅರ್ಥದಲ್ಲಿ, ಇದು "ಪ್ರಮುಖ" ಎಂದರ್ಥ, ಆದರೆ ಈ ಅರ್ಥದ ಪರಿಭಾಷೆಯಲ್ಲಿ ಸಹ ವ್ಯತ್ಯಾಸಗಳು ಮೂಲಭೂತವಲ್ಲ ಆದರೆ ದ್ವಿತೀಯಕ.

**ಪ್ರಶ್ನೆ:** ಪಾಕಿಸ್ತಾನದಲ್ಲಿರುವ ಅಹ್ಮದಿಗಳ ಸಂಖ್ಯೆ ಎಷ್ಟು?

**ಉತ್ತರ:** ಎರಡು ಮತ್ತು ಮೂರು ಲಕ್ಷದ ನಡುವೆ.

**ಪ್ರಶ್ನೆ:** ಸೆಪ್ಟೆಂಬರ್ 1902 ರಲ್ಲಿ ಪ್ರಕಟವಾದ ಪುಸ್ತಕ 'ತುಹ್‌ಫ ಗೊಲ್ಡವಿಯಾ' ಮಿರ್ಝಾ ಗುಲಾಮ್ ಅಹ್ಮದ್(ಅ) ಅವರ ಕರ್ತೃತ್ವವಾಗಿದೆಯೇ?

**ಉತ್ತರ:** ಹೌದು.

**ಪ್ರಶ್ನೆ:** ಈ ಕೆಳಗಿನ ಪ್ಯಾರಾಗ್ರಾಫ್‌ನಲ್ಲಿ ಉಲ್ಲೇಖಿಸಲಾದ ನಂಬಿಕೆಯು ಸಾಮಾನ್ಯ ಮುಸ್ಲಿಮರ ನಂಬಿಕೆಯಾಗಿದೆ ಎಂದು ನಿಮಗೆ ತಿಳಿದಿದೆಯೇ ಅಥವಾ ಇಲ್ಲವೇ, "ಒಬ್ಬ ಸತ್ಯವಿಶ್ವಾಸಿಯು ದೇವರ ಇತರ ಆಜ್ಞೆಗಳನ್ನು ನಂಬುವುದು ಹೇಗೆ ಕಡ್ಡಾಯವೋ, ಹಾಗೆಯೇ ಹಝ್ರತ್ ಪೈಗಂಬರ್(ಸ) ರವರ ಎರಡು ಆಗಮನಗಳಿವೆ ಒಂದು ಜಲಾಲಿ ಬಣ್ಣದಲ್ಲಿರುವ ಮುಹಮ್ಮದಿ ಆಗಮನ ಇನ್ನೊಂದು ಜಮಾಲಿ ಬಣ್ಣದಲ್ಲಿರುವ ಅಹ್ಮದಿ ಆಗಮನ ಎಂಬ ವಿಶ್ವಾಸವಿಡುವುದೂ ಕಡ್ಡಾಯವಾಗಿದೆ.

**ಉತ್ತರ:** ಸಾಮಾನ್ಯ ಮುಸ್ಲಿಮರ ಪ್ರಕಾರ, ಇದು ಹಝ್ರತ್ ಪೈಗಂಬರ್(ಸ) ಅವರಿಗೆ ಮಾತ್ರ ಅನ್ವಯಿಸುತ್ತದೆ, ಆದರೆ ನಮ್ಮ ಪ್ರಕಾರ, ಇದು ನಿಜವಾಗಿಯೂ ಹಝ್ರತ್ ಪೈಗಂಬರ್(ಸ) ಅವರಿಗೆ ಅನ್ವಯಿಸುತ್ತದೆ ಆದರೆ ಅದು ಸಾದೃಶರೂಪದಲ್ಲಿ ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಅವರ ಮೇಲೆಯೂ ಅನ್ವಯಿಸುತ್ತದೆ.

**ಪ್ರಶ್ನೆ:** ದಯಮಾಡಿ ಆಗಸ್ಟ್ 21, 1917 ರ ಅಲ್-ಫಝಲ್‌ನ ಪುಟ 7 ರ ಕಾಲಮ್ 1 ಅನ್ನು ನೋಡಿ, ಅಲ್ಲಿ ನೀವು ನಿಮ್ಮ ಜಮಾಅತ್ ಮತ್ತು ಅಹ್ಮದೀಯೇತರರ ನಡುವಿನ ವ್ಯತ್ಯಾಸವನ್ನು ವಿವರಿಸಿದ್ದೀರಿ ಮತ್ತು "ಇಲ್ಲದಿದ್ದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ. ಅವರ ಇಸ್ಲಾಂ ಬೇರೆ ಮತ್ತು ನಮ್ಮದು ಬೇರೆ. ಅವರ ದೇವರು ಬೇರೆ, ನಮ್ಮದು ಬೇರೆ. ನಮ್ಮ ಹಜ್ಜ್ ಬೇರೆ ಮತ್ತು ಅವರ ಹಜ್ಜ್ ಬೇರೆ. ಹಾಗೆಯೇ ಎಲ್ಲದರಲ್ಲೂ ಅವರೊಡನೆ ಭಿನ್ನಾಭಿಪ್ರಾಯವಿದೆ." ಇದು ಸರಿಯೇ?

**ಉತ್ತರ:** ಈ ಪತ್ರವನ್ನು ಪ್ರಕಟಿಸುವ ಸಮಯದಲ್ಲಿ ನನ್ನ ಬಳಿ ಯಾವುದೇ ಡೈರಿ ಟಿಪ್ಪಣಿಗಳು ಇರಲಿಲ್ಲ ಆದ್ದರಿಂದ ನಾನು ಹೇಳಿದ್ದು ಸರಿಯಾಗಿ ವರದಿಯಾಗಿದೆಯೇ ಅಥವಾ ಇಲ್ಲವೇ ಎಂದು ನಾನು ಖಚಿತವಾಗಿ ಹೇಳಲಾರೆ, ಆದ್ದರಿಂದ ನಾವು ಅದನ್ನು ವಾಸ್ತವ ವ್ಯಾಖ್ಯಾನವಾಗಿ ತೆಗೆದುಕೊಳ್ಳಬೇಕಾಗಿದೆ. ನಾವು ಹೆಚ್ಚು ಪ್ರಾಮಾಣಿಕವಾಗಿ ವರ್ತಿಸುತ್ತೇವೆ ಎಂಬುದು ನನ್ನ ಅರ್ಥವಾಗಿತ್ತು.

**ಪ್ರಶ್ನೆ:** ಅನ್ವರ್ ಖಿಲಾಫತ್‌ನ ಪುಟ 93 ರಲ್ಲಿ ನೀವು ಹೇಳಿರುವಿರಿ "ಈಗ ಮತ್ತೊಂದು ಪ್ರಶ್ನೆ ಉಳಿದಿದೆ, ಅಹ್ಮದಿಯೇತರರು ಹಝ್ರತ್ ಮಸೀಹ್ ಮೌಊದ್(ಅ) ಅವರನ್ನು ನಿರಾಕರಿಸುವವರಾಗಿದ್ದಾರೆ. ಆದ್ದರಿಂದ, ಅವರ ಜನಾಝವನ್ನು ನಿರ್ವಹಿಸಬಾರದು, ಆದರೆ ಅಹ್ಮದಿಯೇತರ ಸಣ್ಣ ಮಗು ಸತ್ತರೆ, ಅವನ ಜನಾಝವನ್ನು ಏಕೆ ನಿರ್ವಹಿಸಬಾರದು? ಅವನು ಮಸೀಹ್ ಮೌಊದ್ ಅವರನ್ನು ನಿರಾಕರಿಸಲಿಲ್ಲ. ಇದು ನಿಜವೇ ಆಗಿದ್ದರೆ ಹಿಂದೂ ಮತ್ತು ಕ್ರೈಸ್ತರ ಮಕ್ಕಳ ಜನಾಝವನ್ನು ಏಕೆ ನಿರ್ವಹಿಸುವುದಿಲ್ಲ ಎಂದು ಪ್ರಶ್ನಿಸುವವರನ್ನು ಕೇಳುತ್ತೇನೆ.

**ಉತ್ತರ:** ಹೌದು, ಆದರೆ ಅಹ್ಮದೀಯರಲ್ಲದ ವಿದ್ವಾಂಸರು ಅಹ್ಮದೀಯರ ಮಕ್ಕಳನ್ನು ಮುಸ್ಲಿಮರ ಸ್ಮಶಾನದಲ್ಲಿ ಹೂಳಲು ಬಿಡಬಾರದು ಎಂದು ಈ ಫತ್ವಾ ನೀಡಿದ್ದರಿಂದ ನಾನು ಇದನ್ನು ಹೇಳಿದೆ. ಘಟನೆಯೆಂದರೆ ಅಹ್ಮದಿ ಮಹಿಳೆಯರು ಮತ್ತು ಮಕ್ಕಳ ಮೃತ ದೇಹಗಳನ್ನು ಸಮಾಧಿಯಿಂದ ಕಿತ್ತು ಹೊರಗೆ ಎಸೆಯಲಾಯಿತು. ಆದಾಗ್ಯೂ, ಈಗ ನಾವು ಜಮಾಅತ್ತಿನ ಸಂಸ್ಥಾಪಕರ ಫತ್ವಾವನ್ನು ಪಡೆದುಕೊಂಡಿದ್ದೇವೆ ಅದರ ಪ್ರಕಾರ ಮೊದಲ ಫತ್ವಾವನ್ನು ಚರ್ಚೆಯ ನಂತರ ಮಾರ್ಪಡಿಸುವ ಸಾಧ್ಯತೆಯಿದೆ.

**ಪ್ರಶ್ನೆ:** ಮಿರ್ಝಾ ಗುಲಾಮ್ ಅಹ್ಮದ್(ಅ) ಅವರು ಹಖೀಖತುಲ್-ವಹಿಯ ಪುಟ 163 ರಲ್ಲಿ "ಇದನ್ನು ಹೊರತುಪಡಿಸಿ ಯಾರು ನನ್ನನ್ನು ನಂಬುವುದಿಲ್ಲವೊ ಅವನು ದೇವರು ಮತ್ತು ರಸೂಲ್(ಸ) ಅವರನ್ನೂ ನಂಬುವುದಿಲ್ಲ" ಎಂದು ಬರೆದಿರುವುದು ಸರಿಯಾಗಿದೆ.

**ಉತ್ತರ:** ಈ ಪದಗಳನ್ನು ಅವುಗಳ ಸಾಮಾನ್ಯ ಅರ್ಥದಲ್ಲಿ ಬಳಸಲಾಗಿದೆ.

**ಪ್ರಶ್ನೆ:** ನಿಮ್ಮ ಜಮಾಅತ್ತಿನಲ್ಲಿ ಯಾರಾದರೂ ಮುಲ್ಲಾ ಇದ್ದಾರೆಯೇ?

**ಉತ್ತರ:** "ಮುಲ್ಲಾ" ಪದವು "ಮೌಲ್ವಿ" ಗೆ ಸಮಾನಾರ್ಥಕವಾಗಿದೆ ಮತ್ತು ಈ ಪದವನ್ನು ತಿರಸ್ಕಾರಕ್ಕಾಗಿ ಬಳಸಲಾಗುವುದಿಲ್ಲ. ಮುಲ್ಲಾ ಅಲಿ ಖಾರಿ, ಮುಲ್ಲಾ ಶೂರ್ ಬಜಾರ್ ಮತ್ತು ಮುಲ್ಲಾ ಬಾಕಿರ್ ಎಂಬ ಪ್ರಸಿದ್ಧ ವ್ಯಕ್ತಿಗಳನ್ನು ಮುಲ್ಲಾ ಎಂದು ಕರೆಯಲಾಗುತ್ತದೆ ಮತ್ತು ಅದರ ಬಗ್ಗೆ ಹೆಮ್ಮೆ ಪಡುತ್ತಾರೆ ಅಥವಾ ಅದನ್ನು ಮುಂದುವರಿಸುತ್ತಾರೆ.

**ಪ್ರಶ್ನೆ:** ಅಲ್‌ಫಝಲ್‌ನಲ್ಲಿ 14 ಹಿಜ್ರತ್ ಎಂದು ಪ್ರಕಟವಾಗಿದೆ ಅದರ ಅರ್ಥವೇನು?

**ಉತ್ತರ:** ಅದರಿಂದ 14 ಮೇ ಎಂದರ್ಥ.

**ಪ್ರಶ್ನೆ:** ನೀವು ಈ ತಿಂಗಳನ್ನು ಹಿಜ್ರತ್ ಎಂದು ಏಕೆ ಕರೆಯುತ್ತೀರಿ?

**ಉತ್ತರ:** ಏಕೆಂದರೆ ಹಝ್ರತ್ ಪೈಗಂಬರ್(ಸ.ಅ) ರವರ ವಲಸೆಯು ಮೇ ತಿಂಗಳಲ್ಲಿ ನಡೆಯಿತು ಎಂದು ಇತಿಹಾಸವು ನಮಗೆ ತಿಳಿಸುತ್ತದೆ.

**ಪ್ರಶ್ನೆ:** ನೀವು ಸನ್ ಹಿಜ್ರಿ ಬಳಸುತ್ತೀರಾ ಅಥವಾ ಅದೇ ಕ್ರಿಶ್ಚಿಯನ್ ಕ್ಯಾಲೆಂಡರ್?

**ಉತ್ತರ:** ಹಝ್ರತ್ ಪೈಗಂಬರ್(ಸ)ರವರ ಜೀವನದಲ್ಲಿ ನಡೆದ ವಿವಿಧ ಘಟನೆಗಳ ಪ್ರಕಾರ ಸೌರ ಮಾಸಗಳಿಗೆ ವಿವಿಧ ಹೆಸರುಗಳನ್ನು ನೀಡಿದ್ದೇವೆ ಅಷ್ಟೆ.

**ಪ್ರಶ್ನೆ:** ಮಾರ್ಚ್ 1919 ರ ಜಲ್ಸ ಸಾಲಾನದ ಸಂದರ್ಭದಲ್ಲಿ ನಡೆದ ಸಭೆಯಲ್ಲಿ, ಇರ್ಫಾನ್ ಇಲಾಹಿ ಪತ್ರಿಕೆಯ ಪುಟ 93 ರಲ್ಲಿ ಸೇಡಿನ ಯುಗ ಎಂಬ ಶೀರ್ಷಿಕೆಯಡಿಯಲ್ಲಿ ಉಲ್ಲೇಖಿಸಲಾದ ಹೇಳಿಕೆಯನ್ನು ನೀಡಿದರು ಮತ್ತು ಅದರಲ್ಲಿ "ಈಗ ಕಾಲವು ಬದಲಾಗಿದೆ, ಮೊದಲು ಆಗಮಿಸಿದ ಮಸೀಹರನ್ನು ನೋಡಿ ಅವರು ಶತ್ರುಗಳಿಂದ ಶಿಲುಬೆಗೇರಿಸಲ್ಪಟ್ಟರು. ಆದರೆ ಈಗ ಮಸೀಹರು ತನ್ನ ವಿರೋಧಿಗಳನ್ನು ವಧಿಸಲು ಬಂದಿರುವರು."

**ಉತ್ತರ:** ಆದರೆ ಉಲ್ಲೇಖದೊಂದಿಗಿನ ಈ ನುಡಿಗಟ್ಟು ಪುಸ್ತಕದ 101-103 ಪುಟಗಳಲ್ಲಿ ವ್ಯಾಖ್ಯಾನಿಸಲಾಗಿದೆ, ಅಲ್ಲಿ ನಾನು ಹೇಳಿದ್ದೇನೆ: "ಆದರೆ ನಾವು ಇದಕ್ಕೆ ಉತ್ತರವನ್ನು ನೀಡಬಾರದು ಮತ್ತು ಈ ರಕ್ತಕ್ಕೆ ಪ್ರತೀಕಾರ ತೀರಿಸಿಕೊಳ್ಳಬಾರದು, ಆದರೆ ಅದೇ ರೀತಿಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ನಮಗೆ ಹೇಳಿದ್ದಾರೆ ಮತ್ತು ಕಾಬುಲ್ ಭೂಮಿಯಿಂದ ಅಹ್ಮದಿಯತ್ತಿನ ಒಂದು ಸಸ್ಯವನ್ನು ಕತ್ತರಿಸಿದರೆ, ಈಗ ಸರ್ವಶಕ್ತನಾದ ಅಲ್ಲಾಹನು ಅಲ್ಲಿ ಸಾವಿರಾರು ಸಸ್ಯಗಳನ್ನು ನೆಡುತ್ತಾನೆ. ಸೈಯದ್ ಅಬ್ದುಲ್ ಲತೀಫ್ ಸಾಹಿಬ್ ಶಹೀದ್ ಹತ್ಯೆಗೆ ಸೇಡು ತೀರಿಸಿಕೊಳ್ಳುವುದು ಆತನ ಹಂತಕರನ್ನು ಕೊಂದು ರಕ್ತ ಸುರಿಸುವುದು ನಮ್ಮ ಕೆಲಸವಲ್ಲ ಶತ್ರುಗಳನ್ನು ಕೊಲ್ಲುವುದಲ್ಲ. ಅವರ ಮತ್ತು ಅವರ ತಲೆಮಾರುಗಳ ಹೃದಯದಲ್ಲಿ ಅಹ್ಮದಿಯ್ಯತಿನ ಬೀಜವನ್ನು ಬಿತ್ತುವುದು ನಮ್ಮ ಕಾರ್ಯವಾಗಿದೆ ಮತ್ತು ಅವರಿಗೆ ಅಹ್ಮದೀಯರನ್ನಾಗಿ ಮಾಡುವುದಾಗಿದೆ ಮತ್ತು ಅವರು ಅಳಿಸಲು ಬಯಸಿದ್ದನ್ನು ಸ್ಥಾಪಿಸುವುದಾಗಿದೆ ...... ಆದರೆ ಈಗ ನಮ್ಮ ಕಾರ್ಯವು ಅವರ ರಕ್ತವನ್ನು ಸೇಡು ತೀರಿಸಿಕೊಳ್ಳುವುದಾಗಿದೆ ಮತ್ತು ಅವರ ಕೊಲೆಗಾರರು ನಾಶಮಾಡಲು ಬಯಸುವುದನ್ನು ಸ್ಥಾಪಿಸುವುದಾಗಿದೆ ಮತ್ತು ದೇವರು ಆರಿಸಿದ ಜಮಾಅತ್‌ಗಳನ್ನು ಸೇರುವವರಿಂದ ಅವರು ತಮ್ಮ ಶತ್ರುಗಳಿಗೆ ಹೇಗೆ ಕೃಪೆ ತೋರುತ್ತಾರೋ ಅದೇ ರೀತಿಯಲ್ಲಿ ಶಿಕ್ಷಿಸೋಣ.. ಸೈಯದ್ ಅಬ್ದುಲ್ ಲತೀಫ್ ಅವರ ಹಂತಕರನ್ನು ಪ್ರಪಂಚದಿಂದ ಅಳಿಸಿಹಾಕುವುದು ಮತ್ತು ಅವರನ್ನು ಕೊಲ್ಲುವುದು ಅಲ್ಲ, ಬದಲಿಗೆ ಅವರನ್ನು ಶಾಶ್ವತವಾಗಿ ಸ್ಥಾಪಿಸುವುದು. ಅವರನ್ನು ಶಾಶ್ವತ ಜೀವನದ ಮಾಲೀಕರಾಗಿ ಮಾಡುವುದು ಮತ್ತು ಅವರನ್ನು ಅಹ್ಮದೀಯರನ್ನಾಗಿ ಮಾಡುವುದು ವಿಧಾನವಾಗಿದೆ.

**ಪ್ರಶ್ನೆ:** ಈ ಸನ್ನಿವೇಶದಲ್ಲಿ ಅಹ್ಮದಿಯ್ಯತ್ ಎಂದರೆ ಏನು?

**ಉತ್ತರ:** ಅಹ್ಮದಿಯಾ ಜಮಾಅತ್‌ನ ಸ್ಥಾಪಕರು ನೀಡಿದ ಇಸ್ಲಾಂ ಧರ್ಮದ ವ್ಯಾಖ್ಯಾನವನ್ನು ಅಹ್ಮದಿಯಾ ಉಲ್ಲೇಖಿಸುತ್ತದೆ.

**ಪ್ರಶ್ನೆ:** ಈ ಸಂಪಾದಕೀಯದಲ್ಲಿ ಮುಲ್ಲಾಗಳು ಎಂದು ಉಲ್ಲೇಖಿಸಲಾದ ಧರ್ಮಗುರುಗಳು "ಅಹ್ಮದೀಯರು ಧರ್ಮಭ್ರಷ್ಟರು ಮತ್ತು ಅವರನ್ನು ಗಲ್ಲಿಗೇರಿಸಬೇಕು" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆಯೇ?

**ಉತ್ತರ:** ಮೌಲಾನಾ ಅಬುಲ್ ಅಲಾ ಮೌದೂದಿ ಈ ಅಭಿಪ್ರಾಯ ವ್ಯಕ್ತಪಡಿಸಿದ್ದು ಮಾತ್ರ ನನಗೆ ಗೊತ್ತು.

**ಪ್ರಶ್ನೆ:** ನಿಮ್ಮ ಜಮಾಅತ್ ಸಂಪೂರ್ಣವಾಗಿ ಧಾರ್ಮಿಕ ಜಮಾಅತ್ ಆಗಿದೆ ಆದರೆ ರಾಜಕೀಯ ಪಕ್ಷವಾಗಿದೆ?

**ಉತ್ತರ:** ವಾಸ್ತವವಾಗಿ, ಈ ಜಮಾಅತ್ ಧಾರ್ಮಿಕ ಜಮಾಅತ್ ಆಗಿದೆ, ಆದರೆ ಅದರ ಮುಂದೆ ರಾಜಕೀಯ ಸಮಸ್ಯೆ ಬಂದಾಗಲೆಲ್ಲಾ ಅದು ಸುಮ್ಮನೆ ಇರಲು ಸಾಧ್ಯವಿಲ್ಲ ಎಂಬಂತಹ ಮನಸ್ಥಿತಿಯನ್ನು ಸರ್ವಶಕ್ತನಾದ ಅಲ್ಲಾಹನು ಅವರಿಗೆ ನೀಡಿದ್ದಾನೆ.

**ಪ್ರಶ್ನೆ:** ನೀವು ನಿಮ್ಮ ಭಾಷಣದಲ್ಲಿ ಈ ಕೆಳಗಿನ ಪದಗಳನ್ನು ಹೇಳಿದಾಗ ಅದರ ಅರ್ಥವೇನಾಗಿತ್ತು?

"ನೆನಪಿಡಿ, ನಮ್ಮ ತಳಹದಿ ಬಲವಾಗಿರದ ಹೊರತು ಉಪದೇಶ (ತಬ್ಲೀಗ್) ಯಶಸ್ವಿಯಾಗುವುದಿಲ್ಲ. ಮೊದಲು ತಳಹದಿ ಬಲವಾಗಿದ್ದರೆ ಉಪದೇಶ (ತಬ್ಲೀಗ್) ಮಾಡಬಹುದು.

**ಉತ್ತರ:** ಈ ಪದಗಳು ಸ್ವತಃ ವ್ಯಾಖ್ಯಾನಿಸುತ್ತದೆ?

**ಪ್ರಶ್ನೆ:** ಬ್ರಿಟಿಷ್ ಸರ್ಕಾರದ ಬಗ್ಗೆ ಅಹ್ಮದಿಯಾ ಜಮಾಅತ್ ಸಂಸ್ಥಾಪಕರ ವರ್ತನೆ ಏನಾಗಿತ್ತು?

**ಉತ್ತರ:** ನಾನು ಮೊದಲೇ ಹೇಳಿದ್ದೇನೆ ಇಸ್ಲಾಮ್ ಧರ್ಮದ ಬೋಧನೆಗಳ ಪ್ರಕಾರ, ಒಬ್ಬ ವ್ಯಕ್ತಿಯು ಅವನು ವಾಸಿಸುವ ದೇಶದ ಸರ್ಕಾರಕ್ಕೆ ನಾನು ಮೊದಲು ವಿವರಿಸಿದಂತೆ ಷರತ್ತುಬದ್ಧನಾಗಿ ನಿಷ್ಠನಾಗಿರಬೇಕು.

**ಪ್ರಶ್ನೆ:** ಬ್ರಿಟಿಷರು ಬಾಗ್ದಾದ್ ವಶಪಡಿಸಿಕೊಂಡಾಗ ಖಾದಿಯಾನ್‌ನಲ್ಲಿ ಸಂಭ್ರಮಾಚರಣೆ ಮಾಡಿದ ಘಟನೆ ಸರಿಯೇ?

**ಉತ್ತರ:** ಇದು ಸಂಪೂರ್ಣವಾಗಿ ತಪ್ಪು.

**ಪ್ರಶ್ನೆ:** ನಿಮ್ಮ ಸಮುದಾಯದ ಜನರಿಗೆ ಅವರ ಸಮಾಜವು ಇತರ ಮುಸ್ಲಿಮರಿಗಿಂತ ಭಿನ್ನವಾಗಿರಬೇಕು ಎಂದು ನೀವು ಹೇಳುತ್ತಿದ್ದೀರಾ?

**ಉತ್ತರ:** ಇಲ್ಲ.

**ಪ್ರಶ್ನೆ:** ಮುಸೈಲಮಾ ಬಿನ್ ಅಲ್ ಹಬೀಬ್‌ನ ವಾದದ ಬಗ್ಗೆ ನಿಮ್ಮ ಅಭಿಪ್ರಾಯವೇನು?

**ಉತ್ತರ:** ಅವನ ವಾದವು ಸುಳ್ಳಾಗಿತ್ತು.

**ಪ್ರಶ್ನೆ:** ಅವನು ಕಲಿಮಾವನ್ನು ಪಠಿಸುತ್ತಾನೆಯೇ?

**ಉತ್ತರ:** ಇಲ್ಲ

**ಪ್ರಶ್ನೆ:** ನೀವು ಅಸ್ವಾದ್ ಅನ್ಸಿ ಸಜಾಹ್ ನಬಿಯಾಹ್ ಝುಬಾ ಮತ್ತು ತಾಲಿಹಾ ಅಸದಿ ಅವರ ಜೀವನ ಪರಿಸ್ಥಿತಿಗಳನ್ನು ಅಧ್ಯಯನ ಮಾಡಿದ್ದೀರಾ?

**ಉತ್ತರ:** ಹೌದು.

**ಪ್ರಶ್ನೆ:** ಮಹಿಳೆ ಸೇರಿದಂತೆ ಎಲ್ಲ ವ್ಯಕ್ತಿಗಳು ಪ್ರವಾದಿತ್ವವನ್ನು ಪ್ರತಿಪಾದಿಸಿದರು. ಇದರ ಪರಿಣಾಮವಾಗಿ ಮುಸ್ಲಿಮರು ಅವರ ವಿರುದ್ಧ ಯುದ್ಧ ಘೋಷಿಸಿದರು?

**ಉತ್ತರ:** ಇಲ್ಲ ಬದಲಿಗೆ ಪರಿಸ್ಥಿತಿಯು ಸಂಪೂರ್ಣವಾಗಿ ವಿರುದ್ಧವಾಗಿದೆ. ಈ ವ್ಯಕ್ತಿಗಳು, ಪ್ರತಿಯೊಬ್ಬರೂ ಪ್ರವಾದಿ ಎಂದು ಹೇಳಿಕೊಳ್ಳುತ್ತಿದ್ದರು, ಮುಸ್ಲಿಮರ ಮೇಲೆ ದಾಳಿ ಮಾಡಿದರು, ಅದಕ್ಕೆ ಮುಸ್ಲಿಮರು ಪ್ರತಿಕ್ರಿಯಿಸಿದರು ಮತ್ತು ಅವರನ್ನು ಸೋಲಿಸಿದರು.

**ಪ್ರಶ್ನೆ:** ನೀವು ತಶ್ರೀಇ ಮತ್ತು ಗೈರ್ ತಶ್‌ರೀಇ ಪ್ರವಾದಿಗಳ ನಡುವಿನ ವ್ಯತ್ಯಾಸವನ್ನು ವಿವರಿಸಿದ್ದೀರ, ದಯವಿಟ್ಟು ಝಿಲ್ಲಿ ನಬಿ ಮತ್ತು ಬುರೂಝಿ ನಬಿಯನ್ನು ಸಹ ವ್ಯಾಖ್ಯಾನಿಸಿ?

**ಉತ್ತರ:** ಈ ಪಾರಿಭಾಷಿಕ ಪದಗಳ ಪ್ರಕಾರ, ಈ ಪದಗಳನ್ನು ಬಳಸಿದ ಅಂತಹ ವ್ಯಕ್ತಿಯು ಕೆಲವು ನಿರ್ದಿಷ್ಟ ಗುಣಗಳನ್ನು ಹೊಂದಿರುವುದಿಲ್ಲ, ಬದಲಿಗೆ ಈ ಗುಣಗಳು ಅವನಲ್ಲಿ ಪ್ರತಿಫಲಿಸುತ್ತದೆ.

**ಪ್ರಶ್ನೆ:** ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಅವರು ತಶ್‌ರೀಇ (ಶರೀಯತ್ ಹೊಂದಿರುವ) ಪ್ರವಾದಿ ಎಂದು ಹೇಳಿಕೊಂಡಿದ್ದಾರೆಯೇ?

**ಉತ್ತರ:** ಇಲ್ಲ.

**ಪ್ರಶ್ನೆ:** ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಅವರು ಅಹ್ಮದಿ ಆದ ನಂತರ ತಮ್ಮ ನಂಬಿಕೆಯನ್ನು ತೊರೆದ ಜನರನ್ನು ಮುರ್‌ತದ್ (ಧರ್ಮಭ್ರಷ್ಟರು) ಎಂದು ಕರೆದಿದ್ದಾರೆಯೇ?

**ಉತ್ತರ:** ಮುರ್ತದ್ (ಧರ್ಮಭ್ರಷ್ಟ) ಎಂದರೆ ಹಿಂತಿರುಗಿ ಹೋಗುವ ವ್ಯಕ್ತಿ ಎಂದರ್ಥ. ಮೌಲಾನಾ ಮೌದುದಿ ಸಾಹಿಬ್ ಕೂಡ ಈ ಪದವನ್ನು ಬಳಸಿದ್ದಾರೆ.

**ಪ್ರಶ್ನೆ:** ಒಬ್ಬ ವ್ಯಕ್ತಿ ಮುಸ್ಲಿಮ್ ಎಂದು ಕರೆಸಿಕೊಳ್ಳಲು ಮಮೂರೀನ್ (ಧರ್ಮಸುಧಾರಕ) ಅನ್ನು ಒಪ್ಪಿಕೊಳ್ಳುವುದು ಅತ್ಯವಶ್ಯಕ, ನೀವು ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಅವರನ್ನು ಆ ಧರ್ಮಸುಧಾರಕರಲ್ಲಿ ಪರಿಗಣಿಸುತ್ತೀರಾ?

**ಉತ್ತರ:** ಈ ಪ್ರಶ್ನೆಗೆ ನಾನು ಹಿಂದೆಯೇ ಉತ್ತರಿಸಿದ್ದೇನೆ. ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಅವರನ್ನು ನಂಬದ ವ್ಯಕ್ತಿಯನ್ನು ಇಸ್ಲಾಂನ ವಲಯದಿಂದ ಹೊರಗಿಡಲಾಗುವುದಿಲ್ಲ.

**ಪ್ರಶ್ನೆ:** ಹಝ್ರತ್ ಪೈಗಂಬರ್(ಸ) ನಂತರ ಎಷ್ಟು ಇತರ ನಿಜವಾದ ಪ್ರವಾದಿಗಳು ಹಾದುಹೋಗಿದ್ದಾರೆ?

**ಉತ್ತರ:** ನನಗೆ ಗೊತ್ತಿಲ್ಲ ಆದರೆ ನಮ್ಮ ಪವಿತ್ರ ಪ್ರವಾದಿ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಅವರ ಹದೀಸ್ ಪ್ರಕಾರ, ಅವರ ಉಮ್ಮತ್ತಿನ ಹಿರಿಮೆ ಮತ್ತು ವೈಭವವು ಅವರ ಸಮುದಾಯದ ವಿದ್ವಾಂಸರಲ್ಲಿ ಪ್ರತಿಫಲಿಸುತ್ತದೆ, ನೂರಾರು ಮತ್ತು ಸಾವಿರಾರು ಇದ್ದಿರಬೇಕು.

**ಪ್ರಶ್ನೆ:** ನಮ್ಮ ಪವಿತ್ರ ಪ್ರವಾದಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರನ್ನು ಹೊರತುಪಡಿಸಿ ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಎಲ್ಲಾ ಪ್ರವಾದಿಗಳಿಗಿಂತ ಉತ್ತಮ ಎಂದು ನೀವು ನಂಬುತ್ತೀರಾ?

**ಉತ್ತರ:** ನಾವು ಅವರನ್ನು ಮಸೀಹ್ ನಾಸಿರಿಯವರಿಂದ ಮಾತ್ರ ಉತ್ತಮ ಎಂದು ಪರಿಗಣಿಸುತ್ತೇವೆ.

**ಪ್ರಶ್ನೆ:** ಪುನರುತ್ಥಾನದ ದಿನದ ಮೊದಲು ಈಸಬ್ನೆ ಮರ್ಯಮ್ ಮತ್ತೆ ಪುನಃ ಆಗಮಿಸುತ್ತಾರೆ ಎಂದು ಮುಸ್ಲಿಮರಲ್ಲಿ ಸರ್ವಾನುಮತದ ನಂಬಿಕೆಯಾಗಿದೆ. ಅದರ ಬಗ್ಗೆ ನಿಮ್ಮ ನಂಬಿಕೆ ಏನು?

**ಉತ್ತರ:** ಇದು ಮುಸಲ್ಮಾನರ ಒಮ್ಮತದ ನಂಬಿಕೆ ಎಂಬುದೇ ತಪ್ಪು. ಏಸುಕ್ರಿಸ್ತರು ಸಹಜ ಸಾವನ್ನು ಹೊಂದಿದ್ದಾರೆ ಎಂದು ನಂಬುವ ಮುಸ್ಲಿಂ ವಿಭಾಗವೂ ಇದೆ. ಹಝ್ರತ್ ಈಸಬ್ನೆ ಮರ್ಯಮ್ ಅವರನ್ನು ಮತ್ತೆ ಕಳುಹಿಸಲಾಗುವುದಿಲ್ಲ, ಆದರೆ ಅವರನ್ನು ಹೋಲುವ ಮತ್ತು ಅವರ ಗುಣಲಕ್ಷಣಗಳನ್ನು ಹೊಂದಿರುವ ಇನ್ನೊಬ್ಬ ವ್ಯಕ್ತಿ ಆಗಮಿಸುತ್ತಾರೆ ಎಂಬುದು ನಮ್ಮ ನಂಬಿಕೆಯಾಗಿದೆ.

**ಪ್ರಶ್ನೆ:** ಹಝ್ರತ್ ಈಸಾ ಅವರ ಕಾಲದಲ್ಲಿ ಯಹೂದಿಯರು ಮಸೀಹರಿಗಾಗಿ ಕಾಯುತ್ತಿದ್ದರೋ?

**ಉತ್ತರ:** ಹೌದು. ಅವರು ಮಸೀಹರ ಆಗಮನಕ್ಕಾಗಿ ಕಾಯುತ್ತಿದ್ದರು, ಆದರೆ ಅದಕ್ಕೂ ಮೊದಲು ಇಲಿಯಾಸ್ ಅದೇ ಐಹಿಕ ದೇಹದೊಂದಿಗೆ ಸ್ವರ್ಗದಿಂದ ಇಳಿಯಬೇಕಾಗಿತ್ತು.

**ಪ್ರಶ್ನೆ:** ಹಝ್ರತ್ ಈಸಾ ಅವರೇ ಈ ಮಸೀಹ್ ಆಗಿದ್ದಾರೆಯೇ?

**ಉತ್ತರ:** ನಮ್ಮ ನಂಬಿಕೆಯ ಪ್ರಕಾರ, ಅವರು ಮಸೀಹ್ ಆಗಿದ್ದರು, ಆದರೆ ಯಹೂದಿಯರ ನಂಬಿಕೆಯ ಪ್ರಕಾರ ಇಲ್ಲ.

**ಪ್ರಶ್ನೆ:** ಹಝ್ರತ್ ಈಸಾ ನಾಸರಿ ರವರು ಮಸೀಹ್ ಮೌಊದ್ ಎಂದು ಎಂದಾದರೂ ಹೇಳಿಕೊಂಡಿದ್ದಾರೆಯೇ?

**ಉತ್ತರ:** ಹೌದು.

**ಪ್ರಶ್ನೆ:** ಸಾಮಾನ್ಯ ಮುಸಲ್ಮಾನರು ಅಹ್ಮದೀಯರ ನಮಾಝೆ ಜನಾಝುವನ್ನು ನಿರ್ವಹಿಸುವುದಿಲ್ಲ ಏಕೆಂದರೆ ಅವರು ಅಹ್ಮದಿಯರನ್ನು ಕಾಫಿರ್ ಎಂದು ಪರಿಗಣಿಸುತ್ತಾರೆ, ದಯವಿಟ್ಟು ಹೇಳಿ, ಅಹ್ಮದಿಯರಲ್ಲದವರ ಜನಾಝುವನ್ನು ನಿರ್ವಹಿಸದ ಅಹ್ಮದಿಯರು, ನೀವು ಈಗಾಗಲೇ ಹೇಳಿದ್ದಕ್ಕಿಂತ ಬೇರೆ ಏನು ಕಾರಣ ಪ್ರತೀಕಾರದ ಕ್ರಮವನ್ನು ತೆಗೆದುಕೊಳ್ಳಲಾಗಿದೆ. ಈ ವಿಧಾನ ಯಾವುದು?

**ಉತ್ತರ:** ಎರಡನೆಯ ಕಾರಣವೇನೆಂದರೆ ನಾನು ಈಗಾಗಲೇ ಹೇಳಿದಂತೆ, ನಾವು ಅಹಮದಿಯೇತರರ ನಮಾಝೆ ಜನಝುವನ್ನು ನಿರ್ವಹಿಸುವುದಿಲ್ಲ ಏಕೆಂದರೆ ಅವರು ಅಹ್ಮದೀಯರ ಜನಾಝುವನ್ನು ನಿರ್ವಹಿಸುವುದಿಲ್ಲ... ಮತ್ತು ಎರಡನೆಯ ಕಾರಣ, ಇದು ವಾಸ್ತವವಾಗಿ ಮೊದಲ ಕಾರಣದ ಭಾಗವಾಗಿದೆ. ಒಮ್ಮತದ ಮತ್ತು ಸರಿಯಾದ ಹದೀಸ್ ಪ್ರಕಾರ ಇನ್ನೊಬ್ಬ ಮುಸ್ಲಿಮನನ್ನು ನಾಸ್ತಿಕ ಎಂದು ಕರೆಯುವ ವ್ಯಕ್ತಿಯು ಸ್ವತಃ ನಾಸ್ತಿಕನಾಗುತ್ತಾನೆ.

**ಪ್ರಶ್ನೆ:** ನೀವು ನಿಮ್ಮ ಜಮಾಅತ್ತಿಗೆ ಸಂಬಂಧಿಸಿದಂತೆ ಎಂದಾದರೂ ಉಮ್ಮತ್ ಎಂಬ ಪದವನ್ನು ಬಳಸಿದ್ದೀರಾ?

**ಉತ್ತರ:** ಅಹ್ಮದಿಯರು ಪ್ರತ್ಯೇಕ ಸಮುದಾಯವಲ್ಲ ಎಂದು ನಾವು ನಂಬುತ್ತೇವೆ. ಇಲ್ಲಿ ಅಹ್ಮದೀಯರಿಗೆ ಸಂಬಂಧಿಸಿದಂತೆ ಉಮ್ಮತ್ ಪದವನ್ನು ಬಳಸಿದರೆ, ಅದು ಅಜ್ಞಾನದಿಂದ ಬಂದಿರಬೇಕು ಮತ್ತು ಅದು ನಿಜವಾಗಿಯೂ ಜಮಾಅತ್ ಎಂದರ್ಥ.

**ಪ್ರಶ್ನೆ:** ಆಗಸ್ಟ್ 13, 1948 ರ ಅಲ್-ಫಝಲ್ ಅನ್ನು ನೋಡಿ. ಇದು ಈ ಕೆಳಗಿನ ಪಠ್ಯವನ್ನು ಹೊಂದಿದೆ:

ಸರ್ವಶಕ್ತನಾದ ಅಲ್ಲಾಹನು ನಮಗೆ ಒಪ್ಪಿಸಿದ ಕೆಲಸವನ್ನು ಬೇರೆ ಯಾವುದೇ ಉಮ್ಮತ್ತಿಗೆ ವಹಿಸಲಿಲ್ಲ. ಮೊದಲ ಪ್ರವಾದಿಗಳಲ್ಲಿ, ಒಬ್ಬ ಪ್ರವಾದಿಯು ನೂರು ಸಾವಿರಕ್ಕೆ ಬಂದನು. ಕೆಲವು ಪ್ರವಾದಿಗಳು ಎರಡು ಲಕ್ಷಕ್ಕೆ ಬಂದರು ಮತ್ತು ಕೆಲವರು ಹತ್ತು ಲಕ್ಷಕ್ಕೆ ಬಂದರು. ಹಝ್ರತ್ ಪೈಗಂಬರ್(ಸ) ಅವರ ಸಮುದಾಯವು ಒಂದುಕಾಲು ಲಕ್ಷದಾಗಿರಬಹುದು ಅಥವಾ ಬಹುಶಃ ಅವರ ಕಾಲದಲ್ಲಿ ಅರೇಬಿಯಾದ ಜನಸಂಖ್ಯೆಯು ಎರಡು ಮೂರು ಲಕ್ಷ ಆಗಿರಬಹುದು. ಆದ್ದರಿಂದ ಇವರು ನಿಮ್ಮ ಮೊದಲ ಸಂಬೋಧಿತರಾಗಿದ್ದರು, ಆದರೆ ನಾವು ಹೊರಟುಹೋದ ತಕ್ಷಣ 40 ಮಿಲಿಯನ್ ಸಂಬೋಧಿತರನ್ನು ಹೊಂದಿದ್ದೇವೆ."

ಇಲ್ಲಿ ಉಮ್ಮತ್ ಎಂಬ ಪದವನ್ನು ಯಾವ ಅರ್ಥದಲ್ಲಿ ಬಳಸಿದ್ದೀರಿ?

**ಉತ್ತರ:** ಇಲ್ಲಿ ನಾನು ಪ್ರವಾದಿಯವರ ಉಮ್ಮತ್ತಿಗೆ ಉಮ್ಮತ್ ಎಂಬ ಪದವನ್ನು ಬಳಸಿದ್ದೇನೆ.

**ಪ್ರಶ್ನೆ:** ಬ್ರಿಟಿಷರ ಆಳ್ವಿಕೆಯಲ್ಲಿ ನಿಮ್ಮ ನಿರ್ದಿಷ್ಟ ನಂಬಿಕೆಗಳು ಪ್ರವರ್ಧಮಾನಕ್ಕೆ ಬಂದಿದ್ದಕ್ಕಾಗಿ ನೀವು ಅವರಿಗೆ ಕೃತಜ್ಞರಾಗಿಲ್ಲವೇ, ಮತ್ತು ನೀವು ಅವರಿಗೆ ಕೃತಜ್ಞರಾಗಿರಲು ಸಾಧ್ಯವಿಲ್ಲವೇ?

**ಉತ್ತರ:** ಕೃತಜ್ಞತೆ ಅರ್ಪಿಸುವುದು ಒಂದು ನೈತಿಕ ಕರ್ತವ್ಯವಾಗಿದೆ ಮತ್ತು ರಾಜಕೀಯದೊಂದಿಗೆ ಅದರ ಯಾವುದೇ ಸಂಬಂಧವಿಲ್ಲ. ನಾವು ಅವರಿಗೆ ಕೃತಜ್ಞರಾಗಿರುತ್ತೇವೆ ಎಂಬುದು ನಿಜ ಮತ್ತು ಅವರು ನಮ್ಮನ್ನು ಒಳಗೊಂಡಂತೆ ಎಲ್ಲರಿಗೂ ತೋರಿದ ನ್ಯಾಯಯುತ ವರ್ತನೆಯಿಂದಾಗಿ.

**ಪ್ರಶ್ನೆ:** ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಬ್ರಿಟಿಷರಿಗೆ ಧನ್ಯವಾದ ಹೇಳಲು ಬಲಾದ್ ಇಸ್ಲಾಮಿಯಾದಲ್ಲಿ ಪ್ರಕಟಿಸುವ ಉದ್ದೇಶದಿಂದ ಜಿಹಾದ್ ವಿರುದ್ಧ ಇಷ್ಟು ಪುಸ್ತಕಗಳನ್ನು ಬರೆದಿಲ್ಲವೇ, ಅದು ಕನಿಷ್ಠ ಐವತ್ತು ಕಪಾಟುಗಳನ್ನು ತುಂಬುತ್ತದೆಯೇ?

**ಉತ್ತರ:** ಮಿರ್ಝಾ ಸಾಹಿಬ್ ಬರೆದದ್ದು ಇತರ ಧರ್ಮಗಳಲ್ಲಿ ಮುಸ್ಲಿಮರ ವಿರುದ್ಧ ಕಂಡುಬರುವ ತಪ್ಪುಗ್ರಹಿಕೆಯನ್ನು ತೆಗೆದುಹಾಕುವ ಉದ್ದೇಶದಿಂದ ಬರೆಯಲಾಗಿದೆ. ಈ ಕೃತಿಗಳು ಅನೇಕ ವಿಷಯಗಳ ಬಗ್ಗೆ ತಪ್ಪು ತಿಳುವಳಿಕೆಯನ್ನು ಒಳಗೊಂಡಿವೆ. ಇದಲ್ಲದೆ, ಅವರು ಜಿಹಾದ್ ಸಂಚಿಕೆಯನ್ನು ಸಹ ಸೇರಿಸಿದರು, ಆದರೆ ಈ ನಿರ್ದಿಷ್ಟ ಸಂಚಿಕೆಯಲ್ಲಿ ಅವರು ಕೆಲವೇ ಪುಟಗಳನ್ನು ಒಳಗೊಂಡಿರುವ ನಿಯತಕಾಲಿಕವನ್ನು ಬರೆದರು.

*(ಪುಟ ಸಂಖ್ಯೆ-09 ರಲ್ಲಿ ಮುಂದುವರಿಸಲಾಗಿದೆ)*

*(ಪುಟ ಸಂಖ್ಯೆ 02ರ ಉಳಿದ ಭಾಗ)*

ನಾನು ಸ್ಪರ್ಧೆಗೆ ಬರುವಂತೆ ಸವಾಲು ಹಾಕುತ್ತೇನೆ. ನೀವು ನಿಮ್ಮ ಕಡೆಯಿಂದ ಜನರು ಈ ಸ್ಪರ್ಧೆಗೆ ನಿಲ್ಲುವಂತೆ ಮಾಡಬೇಕು, ಆದರೆ ನಾನು ಸ್ಪರ್ಧಿಸುತ್ತೇನೆ ಎಂದು ಎಲ್ಲರೂ ಎದ್ದು ನಿಲ್ಲುವುದಲ್ಲ ಬದಲಿಗೆ ಯಾವುದೇ ಧರ್ಮ ಅಥವಾ ಪಂಥದ ಪ್ರತಿನಿಧಿಗಳು ಸ್ಪರ್ಧೆಗೆ ಬರಬೇಕು. ಆ ಸಮಯದಲ್ಲಿ, ದೇವರು ಯಾರ ಪ್ರಾರ್ಥನೆಯನ್ನು ಸ್ವೀಕರಿಸುತ್ತಾನೆ ಎಂದು ಜಗತ್ತು ತಿಳಿಯುತ್ತದೆ. ನಮ್ಮ ಪ್ರಾರ್ಥನೆಯನ್ನು ಸ್ವೀಕರಿಸಲಾಗುವುದು ಎಂದು ನಾನು ಹೇಳುತ್ತೇನೆ. ಈ ಸ್ಪರ್ಧೆಗೆ ವಿವಿಧ ಧರ್ಮದ ದೊಡ್ಡ ವ್ಯಕ್ತಿಗಳು ಬರಲು ಹೆದರುತ್ತಿರುವುದು ವಿಷಾದದ ಸಂಗತಿಯಾಗಿದೆ. ಪೈಪೋಟಿಗೆ ಬಂದರೆ ಸ್ಪರ್ಧಿಸುವ ಧೈರ್ಯವೇ ಇಲ್ಲ ಎನ್ನುವ ರೀತಿಯಲ್ಲಿ ಸೋಲನುಭವಿಸುತ್ತಾರೆ. (ಝಿಂದ ಮರ್ಝ್‌ಹಬ್, ಅನ್ವಾರುಲ್ ಉಲೂಮ್, ಸಂಪುಟ-3, ಪುಟ-612)

ಮತ್ತೆ ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ:

"ನಾನು ಅರ್ಥಮಾಡಿಕೊಳ್ಳದೆ ಇರುವ ಲೋಕದ ಯಾವುದೇ ತತ್ವ ಜ್ಞಾನವಿಲ್ಲ, ಸರ್ವಶಕ್ತನಾದ ಅಲ್ಲಾಹನು ನನಗೆ ಜ್ಞಾನವನ್ನು ನೀಡಿದ್ದಾನೆ ಮತ್ತು ನಾನು ಈ ವಿಜ್ಞಾನಗಳನ್ನು ಪವಿತ್ರ ಖುರ್‌ಆನ್‌ನ ಅಡಿಯಲ್ಲಿ ನೋಡುವುದರಿಂದ, ಯಾವಾಗಲೂ ಸರಿಯಾದ ಫಲಿತಾಂಶಕ್ಕೆ ತಲುಪುತ್ತೇನೆ ಮತ್ತು ಒಂದು ಸಲ ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ನಾನು ಒಂದು ತೀರ್ಮಾನಕ್ಕೆ ಬಂದರೆ, ನಂತರ ನನ್ನ ಅಭಿಪ್ರಾಯವನ್ನು ಬದಲಾಯಿಸುವ ಅವಶ್ಯಕತೆ ಇರುವುದಿಲ್ಲ."

(ಖುತ್‌ಬಾತೆ ಮಹ್ಮೂದ್, ಸಂಪುಟ-13, ಪುಟ-502)

ಅದೇ ರೀತಿ ಅವರು ಹೇಳುತ್ತಾರೆ: ಸರ್ವಶಕ್ತನಾದ ಅಲ್ಲಾಹನ ಅಲೀಮ್ (ಸರ್ವಜ್ಞ) ನ ಗುಣವನ್ನು ನಾನು ಪ್ರದರ್ಶಿಸಿದ ಉದಾಹರಣೆಯನ್ನು ನಾನು ಖಲೀಫರ ವರ್ಗದಲ್ಲಿ ಬೇರೆಲ್ಲಿಯೂ ಕಾಣುವುದಿಲ್ಲ. ನಾನು ನಿನ್ನೆಯ ಮಗು ಎಂದು ಕರೆಯಲ್ಪಟ್ಟವನು, ನಾನು ಮೂರ್ಖ ಮತ್ತು ಅಜ್ಞಾನಿ ಎಂದು ಕರೆಯಲ್ಪಟ್ಟವನು, ಆದರೆ ಖಿಲಾಫತ್ ಪದವಿಯನ್ನು ವಹಿಸಿಕೊಂಡ ನಂತರ, ಸರ್ವಶಕ್ತನಾದ ಅಲ್ಲಾಹನು ನನಗೆ ಪವಿತ್ರ ಖುರ್‌ಆನ್‌ನ ಜ್ಞಾನವನ್ನು ಹೇರಳವಾಗಿ ಬಹಿರಂಗಪಡಿಸಿದನು ಎಂದರೆ ಈಗ ಖಿಯಾಮತ್ ದಿನದವರೆಗೂ ಉಮ್ಮತೆ ಮುಸ್ಲಿಮ ನನ್ನ ಪುಸ್ತಕಗಳನ್ನು ಓದುವುದು ಮತ್ತು ಅವುಗಳಿಂದ ಪ್ರಯೋಜನ ಪಡೆಯುವುದು ಕಡ್ಡಾಯವಾಗಿದೆ. ಸರ್ವಶಕ್ತನಾದ ಅಲ್ಲಾಹನು ನನ್ನ ಮೂಲಕ ಇಸ್ಲಾಮಿನ ಯಾವ ವಿಷಯವನ್ನು ವಿವರಗಳೊಂದಿಗೆ ಬಹಿರಂಗಪಡಿಸಿಲ್ಲ? ಪ್ರವಾದಿತ್ವದ ಸಮಸ್ಯೆಯಾಗಿರಬಹುದು, ಕುಫ್ರ್ (ಅಪನಂಬಿಕೆ) ನ ಸಮಸ್ಯೆ, ಖಲೀಫತ್ ಸಮಸ್ಯೆ, ತಖ್ದೀರ್ (ವಿಧಿ) ನ ಸಮಸ್ಯೆ, ಪವಿತ್ರ ಖುರ್‌ಆನ್‌ನ ಅಗತ್ಯ ವಿಷಯಗಳ ಬಹಿರಂಗಪಡಿಸುವಿಕೆ, ಇಸ್ಲಾಮಿನ ಅರ್ಥಶಾಸ್ತ್ರ, ಇಸ್ಲಾಮಿನ ರಾಜಕೀಯ ವಿಜ್ಞಾನ ಮತ್ತು ಇಸ್ಲಾಮಿನ ಸಮಾಜ ಇತ್ಯಾದಿಗಳ ಬಗ್ಗೆ ಸಾವಿರದ ಮುನ್ನೂರು ವರ್ಷಗಳಿಂದ ವ್ಯಾಪಕವಾದ ಯಾವುದೇ ಲೇಖನ ಇರಲಿಲ್ಲ. ಅಲ್ಲಾಹನು ನನಗೆ ಧರ್ಮದ ಸೇವೆ ಮಾಡುವ ಅವಕಾಶವನ್ನು ನೀಡಿದನು ಮತ್ತು ನನ್ನ ಮೂಲಕ, ಈ ವಿಷಯಗಳ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನ್‌ನ ಜ್ಞಾನವನ್ನು ಬಹಿರಂಗಪಡಿಸಿದನು, ಇದನ್ನು ಇಂದು ಸ್ನೇಹಿತರು ಮತ್ತು ಶತ್ರುಗಳು ಎಲ್ಲರು ನಕಲಿಸುತ್ತಿದ್ದಾರೆ. ನನ್ನನ್ನು ಯಾರಾದರು ನಿಂದಿಸಲಿ, ಅಪಮಾನಿಸಲಿ ಆದರೆ ಯಾರು ಇಸ್ಲಾಂ ಧರ್ಮದ ಬೋಧನೆಗಳನ್ನು ಜಗತ್ತಿನಲ್ಲಿ ಹರಡಲು ಪ್ರಾರಂಭಿಸುತ್ತಾರೋ ಅವರು ನನ್ನೊಂದಿಗೆ ಬಂದು ಸೇರಬೇಕಾಗುತ್ತದೆ ಮತ್ತು ಅವರು ಎಂದಿಗೂ ನನ್ನ ಉಪಕಾರದಿಂದ ಸರಿಯಲು ಸಾಧ್ಯವಾಗುವುದಿಲ್ಲ, ಅವರು ಪೈಗಾಮಿಯೇ ಆಗಿರಲಿ ಅಥವಾ ಮಿಸರಿಯಾಗಿರಲಿ ಅಥವಾ ಅವರ ವಂಶಸ್ಥರು ಎಂದಾದರು ಧರ್ಮಕ್ಕೆ ಸೇವೆ ಸಲ್ಲಿಸಲು ಉದ್ದೇಶಿಸಿದರೆ ಅವರು ನನ್ನ ಪುಸ್ತಕಗಳನ್ನು ಓದಲು ಮತ್ತು ಅವುಗಳಿಂದ ಪ್ರಯೋಜನ ಪಡೆಯುವಂತೆ ಒತ್ತಾಯಿಸಲ್ಪಡುತ್ತಾರೆ, ಅದೇ ರೀತಿ, ಈ ವಿಷಯದಲ್ಲಿ ಎಲ್ಲಾ ಖಲೀಫರುಗಳಿಗಿಂತ ಹೆಚ್ಚಿನ ವಿಷಯಗಳನ್ನು ನನ್ನಿಂದ ಸಂಗ್ರಹಿಸಲಾಗಿದೆ ಎಂದು ನಾನು ಹೆಮ್ಮೆಯಿಲ್ಲದೆ ಹೇಳಬಲ್ಲೆ. ಆದುದರಿಂದ ಈ ಜನ ನನಗೆ ಏನೇ ಹೇಳಲಿ, ಎಷ್ಟೇ ಅವಮಾನಿಸಿದರೂ ಪವಿತ್ರ ಖುರ್‌ಆನ್‌ನ ಜ್ಞಾನ ಅವರ ತೊಟ್ಟಿಲಿನಲ್ಲಿ ಬೀಳುವುದಾದರೆ ಅದು ನನ್ನ ಮೂಲಕವೇ ಆಗುತ್ತೆ, ಜಗತ್ತು ಅವರಿಗೆ ಹೀಗೆ ಹೇಳಲು ಅಸಹಾಯಕವಾಗುತ್ತೇ, ಓ ಅಜ್ಞಾನಿಗಳೇ! ನಿಮ್ಮ ಜೋಳಿಗೆಯಲ್ಲಿ ಏನೆಲ್ಲ ತುಂಬಿದೆಯೋ, ಅದು ನೀವು ಅವರಿಂದ ತೆಗೆದುಕೊಂಡಿದ್ದೀರಿ. ಹೀಗಿರುವಾಗ ನೀವು ಯಾವ ಮುಖದಿಂದ ಅವರನ್ನು ವಿರೋಧಿಸುತ್ತಿದ್ದೀರಿ? (ಖಿಲಾಫತೆ ರಾಶಿದ, ಅನ್ವಾರುಲ್ ಉಲೂಮ್, ಸಂಪುಟ-15, ಪುಟ-587)

ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಮೂಲಕ ಇಡೀ ಜಗತ್ತಿನಲ್ಲಿ ಇಸ್ಲಾಮ್ ಧರ್ಮದ ಬೋಧನೆಯಾಯಿತು ಮತ್ತು ಜಮಾಅತ್ ಪ್ರಪಂಚದಾದ್ಯಂತ ಹರಡಿತು. 1944 ರಲ್ಲಿ, ಅವರ ಖಿಲಾಫತ್ ಇನ್ನೂ ಇಪ್ಪತ್ತು ವರ್ಷಗಳಿರುವಾಗ, ಅಹ್ಮದಿಯಾ ಜಮಾಅತ್ ಎಷ್ಟು ವಿಸ್ತರಿಸಿತ್ತು ಎಂದು ನೋಡಿ. ಅವರು(ರ) ಹೇಳುತ್ತಾರೆ:

"ನಾನು ಪ್ರಪಂಚದ ವಿವಿಧ ಭಾಗಗಳಲ್ಲಿ ಇಸ್ಲಾಂ ಮತ್ತು ಅಹ್ಮದಿಯತ್ ಅನ್ನು ಹರಡಲು ಮಿಷನ್‌ಗಳನ್ನು ಸ್ಥಾಪಿಸಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರು ನಿಧನ ಹೊಂದಿದಾಗ, ಅಹ್ಮದಿಯಾ ಜಮಾಅತ್ ಭಾರತದಲ್ಲಿ ಮತ್ತು ಸ್ವಲ್ಪ ಮಟ್ಟಿಗೆ ಅಫ್ಘಾನಿಸ್ತಾನದಲ್ಲಿ ಸ್ಥಾಪಿಸಲಾಗಿತ್ತು. ಅಹ್ಮದಿಯಾ ಮಿಷನ್ ಅನ್ನು ಬೇರೆಲ್ಲಿಯೂ ಸ್ಥಾಪಿಸಲಾಗಿರಲಿಲ್ಲ. ಆದರೆ ಅಲ್ಲಾಹನು ಭೂಮಿಯ ಅಂಚಿನವರೆಗೆ ಜಮಾತಿನ ಖ್ಯಾತಿಯನ್ನು ತಲುಪಿಸುತ್ತಾನೆ ಎಂದು ಭವಿಷ್ಯವಾಣಿಯಲ್ಲಿ ಹೇಳಿದಂತೆ, ಸರ್ವಶಕ್ತನಾದ ಅಲ್ಲಾಹನು ನನಗೆ ವಿವಿಧ ದೇಶಗಳಲ್ಲಿ ಅಹ್ಮದಿಯಾ ಮಿಷನ್ ಸ್ಥಾಪಿಸುವ ಅವಕಾಶವನ್ನು ನೀಡಿದ್ದಾನೆ. ಹಾಗಾಗಿ ನಾನು ನನ್ನ ಖಿಲಾಫತ್ ಅವಧಿಯ ಆರಂಭದಲ್ಲಿ ಇಂಗ್ಲೆಂಡ್, ಸಿಲೋನ್ ಮತ್ತು ಮಾರಿಷಿಯಸ್‌ನಲ್ಲಿ ಅಹ್ಮದಿಯಾ ಮಿಷನ್ಗಳನ್ನು ಸ್ಥಾಪಿಸಿದೆ. ನಂತರ ಸರಣಿ ಮುಂದುವರೆಯಿತು. ಆದ್ದರಿಂದ ಇರಾನ್, ರಷ್ಯಾ, ಇರಾಕ್, ಈಜಿಪ್ಟ್, ಸಿರಿಯಾ, ಪ್ಯಾಲೆಸ್ತೀನ್, ಲಾಗೋಸ್, ನೈಜೀರಿಯಾ, ಗೋಲ್ಡ್ ಕೋಸ್ಟ್, ಸಿಯೆರಾ ಲಿಯೋನ್, ಪೂರ್ವ ಆಫ್ರಿಕಾ, ಇಂಗ್ಲೆಂಡ್ ಹೊರತುಪಡಿಸಿ ಯುರೋಪ್‌ನಲ್ಲಿ, ಸ್ಪೇನ್, ಇಟಲಿ, ಜೆಕೊಸ್ಲೊವಾಕಿಯಾ, ಹಂಗೇರಿ, ಪೋಲ್ಯಾಂಡ್, ಯುಗೋಸ್ಲಾವಿಯಾ, ಅಲ್‌ಬಾನಿಯಾ, ಜರ್ಮನಿ, ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಅರ್ಜೆಂಟೈನ, ಜೀನಾ, ಜಾಪಾನ್, ಮಲಾಯಾ, ಅಟ್ರೀಟ್ಸ್ ಸೆಟಲ್ ಮಿಂಟ್ಸ್, ಸ್ಮಾರ್ಟರ್, ಜಾವಾ, ಸುರಾಬಾ, ಕಾಶ್ಗರ್ ಮುಂತಾದೆಡೆ ಮಿಷನ್‌ಗಳನ್ನು ಸ್ಥಾಪಿಸಲಾಯಿತು. ಈ ಮುಬಲ್ಲಿಗೀನರಲ್ಲಿ ಕೆಲವರು ಆ ಕಾಲದಲ್ಲಿ ಶತ್ರುಗಳ ಕೈಯಲ್ಲಿ ಸೆರೆಯಾಳಾದರು, ಕೆಲವರು ಕೆಲಸ ಮಾಡುತ್ತಿದ್ದಾರೆ ಮತ್ತು ಕೆಲವೆಡೆ ಎರಡನೇ ಯುದ್ಧದ ಕಾರಣದಿಂದಾಗಿ ತಾತ್ಕಾಲಿಕವಾಗಿ ಮುಚ್ಚಲ್ಪಟ್ಟಿದ್ದಾರೆ. ಆದ್ದರಿಂದ, ಇಂದು ಅಹ್ಮದಿಯಾ ಜಮಾಅತ್ತಿನ ಬಗ್ಗೆ ಪರಿಚಯವಿಲ್ಲದ ಯಾವುದೇ ರಾಷ್ಟ್ರವು ಜಗತ್ತಿನಲ್ಲಿ ಇಲ್ಲ. ಅಹ್ಮದಿಯಾ ಜಮಾಅತ್ ತಮ್ಮ ದೇಶಗಳ ಕಡೆಗೆ ಬರುತ್ತಿರುವ ಪ್ರವಾಹ ಎಂದು ಭಾವಿಸದ ಯಾವುದೇ ರಾಷ್ಟ್ರವು ಜಗತ್ತಿನಲ್ಲಿ ಇಲ್ಲ. ಸರ್ಕಾರಗಳು ಅದರ ಪರಿಣಾಮವನ್ನು ಅನುಭವಿಸುತ್ತಿವೆ ಆದರೆ ಕೆಲವು ಸರ್ಕಾರಗಳು ಅದನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿವೆ. ಆದ್ದರಿಂದ, ನಮ್ಮ ಮುಬಲ್ಲಿಗ್ (ಬೋಧಕ) ರಷ್ಯಾಗೆ ಹೋದಾಗ, ಅವರಿಗೆ ತೀವ್ರ ಚಿತ್ರಹಿಂಸೆ ನೀಡಿ, ಅವರನ್ನು ಹೊಡೆಯಲಾಯಿತು ಮತ್ತು ಅವರನ್ನು ದೀರ್ಘ ಕಾಲದವರೆಗೆ ಜೈಲಿನಲ್ಲಿ ಇರಿಸಲಾಯಿತು. ಆದರೆ ಅಲ್ಲಾಹನು ಈ ಜಮಅತ್ ಅನ್ನು ಹರಡಿ ನನ್ನ ಮೂಲಕ ಪ್ರಪಂಚದ ಅಂಚಿನವರೆಗೆ ಖ್ಯಾತಿಯನ್ನು ನೀಡುವುದಾಗಿ ಭರವಸೆ ನೀಡಿದ ಪ್ರಕಾರ, ಅವನು ತನ್ನ ಕೃಪೆ ಮತ್ತು ಅನುಗ್ರಹದಿಂದ ಈ ಎಲ್ಲಾ ಸ್ಥಳಗಳಿಗೆ ಅಹ್ಮದಿಯತ್ ಅನ್ನು ತಲುಪಿಸಿದನು. ಕೆಲವು ಸ್ಥಳಗಳಲ್ಲಿ ದೊಡ್ಡ ಜಮಅತ್‌ಗಳನ್ನು ಸ್ಥಾಪಿಸಿದನು.

(ದಾವಾ ಮುಸ್ಲೆ ಮೌಊದ್ ಕಡ ಮುತಲ್ಲಿಕ್ ಪುರ್ ಶೌಕತ್ ಎಲಾನ್, ಅನ್ವಾರುಲ್ ಉಲೂಮ್, ಸಂಪುಟ-17, ಪುಟ-155)

ಓರ್ವ ಅಹ್ಮದಿ, ಡಾ. ಲತೀಫ್ ಅಹ್ಮದ್ ಸಾಹಿಬ್ ಹೇಳುತ್ತಾರೆ: ಒಮ್ಮೆ ಕಾರ್ಮಿಕ ನಾಯಕರೊಬ್ಬರು ನನ್ನ ಬಳಿಗೆ ಬಂದರು, ಅವರು ಪ್ರಪಂಚ ಪ್ರಯಾಣದ ತಮ್ಮ ಪ್ರವಾಸದ ಅನುಭವಗಳ ಬಗ್ಗೆ ಹೇಳುತ್ತಿದ್ದರು, ನಾನು ಅಮೇರಿಕಾದ ಅಧ್ಯಕ್ಷ ನೆಕ್ಸನ್‌ರನ್ನು ಭೇಟಿಯಾದೆ, ಬ್ರಿಟನ್, ಫ್ರಾನ್ಸ್ ಮತ್ತು ಜರ್ಮನಿಯ ಅಧ್ಯಕ್ಷರನ್ನು ಭೇಟಿಯಾದೆ, ಚವಾಯಿನ್ ಲಾಯಿ ಅವರನ್ನು ನೋಡಿದೆ ಅವರೆಲ್ಲರಲ್ಲೂ, ಮಾವೋ ಝೆಡಾಂಗ್ ಅದ್ಭುತವಾದ

*(ಪುಟ ಸಂಖೆ 16 ರಲ್ಲಿ ಮುಂದುವರಿಸಲಾಗಿದೆ)*

"ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು ಆದರೆ ಹೃದಯಗಳನ್ನಲ್ಲ
ಬಲದಿಂದ ಶಿರಗಳನ್ನು ಬಾಗಿಸಬಹುದು ಆದರೆ ಮನಸ್ಸುಗಳನ್ನಲ್ಲ"
(ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಖಲೀಫತುಲ್ ಮಸೀಹ್ ರಾಬಿ(ರ))

ದುಆವಿನ ಆಕಾಂಕ್ಷಿ:
**M.B. Nasir Ahmed & Family, Bengaluru, Karnataka**

"ವಾಗ್ದಾನವನ್ನು ನೆರವೇರಿಸುವುದು ಸತ್ಯವಿಶ್ವಾಸದ ಅಂಶವಾಗಿದೆ"
(ಹಝ್ರತ್ ಮುಹಮ್ಮದ್ ಪೈಗಂಬರ್(ಸ))

ದುಆವಿನ ಆಕಾಂಕ್ಷಿ:
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.05, Thursday, 15-22 February 2023, Issue No. 07-08

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಹಝ್ರತ್ ಮುಸ್ಲಿಹ್ ಮೌಊದ(ರಝಿಯಲ್ಲಾಹು ಅನ್‌ಹು) ರವರ ಬಗ್ಗೆ ಭವಿಷ್ಯವಾಣಿ

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:**

**"ಬಿಇಲ್ಹಾಮಿಲ್ಲಾಹಿ ತಆಲಾ ವ ಇಲಾಮಿಹೀ ಅಝ್ಝವಜಲ್ಲ** ಕರುಣಾಮಯಿ ಹಾಗೂ ಗೌರವಾನ್ವಿತ ಹಾಗೂ ಶ್ರೇಷ್ಠ ಮತ್ತು ಎಲ್ಲಾ ವಿಷಯಗಳಲ್ಲಿಯು ಬಲಿಷ್ಠನಾದ ಅಲ್ಲಾಹನು (**ಜಲ್ಲ ಶನುಹೂ ವ ಅಝ್ಝ ಇಸ್‌ಮುಹೂ**) ನನಗೆ ತನ್ನ ದಿವ್ಯವಾಣಿಯ ಮೂಲಕ ಸಂಬೋಧಿಸಿ ಹೀಗೆ ನುಡಿದಿದ್ದಾನೆ: ನಾನು ನಿನಗೆ ನೀನು ನನ್ನೊಂದಿಗೆ ಬೇಡಿಕೊಂಡ ಹಾಗೆ ಒಂದು ಕರುಣೆಯ ಕುರುಹು ನೀಡುವೆನು. ನಾನು ನಿನ್ನ ವಿನಮ್ರತೆಯ ಪ್ರಾರ್ಥನೆಗಳನ್ನು (**ತಝರ್ರುಆತ್**) ಆಲಿಸಿ ತನ್ನ ಅನುಗ್ರಹದೊಂದಿಗೆ ಸ್ವೀಕೃತಿ ನೀಡಿದೆನು ಮತ್ತು ನಿನ್ನ ಪ್ರಯಾಣವನ್ನು (ಹೊಶ್ಯಾರ್‌ಪುರ ಮತ್ತು ಲುಧ್ಯಾನದ ಪ್ರಯಾಣ) ನಿನಗಾಗಿ ಶುಭಕರಗೊಳಿಸಿರುವೆನು. ಆದ್ದರಿಂದ ದೈವಶಕ್ತಿಯ ಮತ್ತು ಕರುಣೆ ಹಾಗೂ ಸಾಮಿಪ್ಯದ ಕುರುಹು ನಿನಗೆ ನೀಡಲಾಗುತ್ತಿದೆ. ಅನುಗ್ರಹ ಮತ್ತು ಉಪಕಾರದ ಕುರುಹು ನಿನಗೆ ನೀಡಲಾಗುತ್ತಿದೆ ಮತ್ತು ಗೆಲುವು(ಫತಹ್) ಹಾಗೂ ಸಫಲತೆಯ(ಝಫರ್) ಕೀಲಿಗೈ ನಿನಗೆ ಸಿಗುತ್ತಿದೆ. ಎಲೈ ಮುಝಫ್ಫರ್! ನಿನ್ನ ಮೇಲೆ ಶಾಂತಿ ಇರಲಿ. ಅಲ್ಲಾಹನು ಹೀಗೆ ಹೇಳಲು ಕಾರಣ ಜೀವಿಸಲು ಬಯಸುವರು ಮೃತ್ಯುವಿನ ದವಡೆಯಿಂದ ಮುಕ್ತಿ ಪಡೆಯಲಿ ಮತ್ತು ಗೋರಿಗಳಲ್ಲಿ ಹೂತಲ್ಪಟ್ಟವರು ಹೊರ ಬರಲಿ ಮತ್ತು ಇಸ್ಲಾಮ್ ಧರ್ಮದ ಗೌರವ ಮತ್ತು ಅಲ್ಲಾಹನ ದಿವ್ಯವಾಣಿಗಳ(ಪವಿತ್ರ ಖುರ್‌ಆನ್) ಪದವಿ ಜನರ ಮೇಲೆ ಸ್ಪಷ್ಟವಾಗಲಿ. ಹೀಗೆ ಸತ್ಯವು ತನ್ನ ಎಲ್ಲ ಅನುಗ್ರಹಗಳೊಂದಿಗೆ ಬರುವಂತಾಗಲಿ ಹಾಗೂ ಮಿಥ್ಯವೂ ತನ್ನ ಎಲ್ಲ ಅಪಶಕುನದೊಂದಿಗೆ ಪಲಾಯನ ಮಾಡಲಿ. ಹೀಗೆ ಜನರು ತಿಳಿಯುವರು ನಾನು ಎಲ್ಲಾ ಕಾರ್ಯಗಳಲ್ಲೂ ಸರ್ವ ಸಮರ್ಥನಾಗಿದ್ದೇನೆ (ಖಾದಿರ್). ನಾನು ಬಯಸಿದನ್ನೆಲ್ಲ ಮಾಡಬಲ್ಲೆನು ಮತ್ತು ನಾನು ನಿನ್ನೊಂದಿಗಿದ್ದೇನೆ ಎಂದು ಅವರಿಗೆ ಮನವರಿಕೆ ಆಗಲಿ ಮತ್ತು ಯಾರು ಅಲ್ಲಾಹನ ಅಸ್ತಿತ್ವವನ್ನು ನಿರಾಕರಿಸುವರೊ, ಅಲ್ಲಾಹ್ ಮತ್ತು ಅಲ್ಲಾಹನ ಧರ್ಮ, ಅವನ ಗ್ರಂಥ ಮತ್ತು ಅವನ ಪ್ರವಾದಿಯಾದ ಮುಹಮ್ಮದ್ ಮುಸ್ತಫಾ ಸಲಲ್ಲಾಹು ಅಲೈಹಿವಸಲ್ಲಮರನ್ನು ನಿರಾಕರಿಸುತ್ತಾರೆ ಮತ್ತು ಧಿಕ್ಕರಿಸುವ ದೃಷ್ಟಿಯಿಂದ ನೋಡುವರೋ ಅವರಿಗಾಗಿ ಒಂದು ಸ್ಪಷ್ಟವಾದ ಮಾರ್ಗ ದೊರೆಯುವಂತಾಗಲಿ ಮತ್ತು ಅಪರಾಧಿಗಳ ಮಾರ್ಗವು ಬಹಿರಂಗವಾಗಲಿ.

ಆದ್ದರಿಂದ ನಿನಗೆ ಶುಭವಾರ್ತೆ ಇದೆ. ಓರ್ವ ಗೌರವಾನ್ವಿತ ಹಾಗೂ ಪರಿಶುದ್ಧ ಬಾಲಕ ನಿನಗೆ ನೀಡಲಾಗುವುದು. ಓರ್ವ ಪವಿತ್ರ ದಾಸ(ಬಾಲಕ) ನಿನಗೆ ದಯಪಾಲಿಸಲಾಗುವುದು. ಆ ಬಾಲಕನು ನಿನ್ನ ಅಂಶದಿಂದಲೇ (ಬೀಜ) ನಿನ್ನ ವಂಶ ಹಾಗೂ ಜನಾಂಗದಿಂದಾಗುವುದು. ಸುಂದರವಾದ ಮತ್ತು ಪವಿತ್ರ ಬಾಲಕ ನಿಮ್ಮ ಅತಿಥಿಯಾಗಿ ಬರುವನು ಅವನ ಹೆಸರು **ಅನ್‌ಮವಾಯೀಲ್** ಮತ್ತು ಬಶೀರ್ ಸಹ ಆಗಿರುವುದು. ಅವನಿಗೆ ಪರಿಶುದ್ಧ ಆತ್ಮ ನೀಡಲಾಗಿದೆ ಮತ್ತು ಅವನು ಕೊಳಕಿನಿಂದ ಪರಿಶುದ್ಧನಾಗಿದ್ದಾನೆ. ಅವನು ಅಲ್ಲಾಹನ ಪ್ರಕಾಶ ಆಗಿದ್ದಾನೆ. ಆ ಸೌಭಾಗ್ಯನು ಆಕಾಶದಿಂದ ಬರುವನು. ಅಲ್ಲಾಹನ ಕೃಪೆ ಅವನೊಂದಿಗೆ ಇದೆ ಅದು ಅವನೊಂದಿಗೆ ಬರುವುದು. ಅವನ ವ್ಯಕ್ತಿತ್ವವು ಅದ್ಭುತ, ಶ್ರೇಷ್ಠ ಹಾಗೂ ಸಂಪತ್ಭರಿತವಾಗಿರುತ್ತದೆ. ಅವನು ಲೋಕಕ್ಕೆ ಪಾದರ್ಪಣೆ ಮಾಡುವನು ಮತ್ತು ತನ್ನ ಮಸೀಹನ ಆತ್ಮದೊಂದಿಗೆ ಮತ್ತು **'ರೂಹುಲ್‌ಹಖ್ಖಿನೊಂದಿಗೆ'** ಜಿಬ್ರೀಲ್‌ನ ಅನುಗ್ರಹಗಳಿಂದ ಹಲವರನ್ನು ರೋಗಗಳಿಂದ ಮುಕ್ತಗೊಳಿಸುವನು. ಅವನು **'ಕಲಿಮತುಲ್ಲಾಹ್'** ಅಲ್ಲಾಹನ ದಿವ್ಯವಾಣಿ ಆಗಿದ್ದಾನೆ ಏಕೆಂದರೆ ಅಲ್ಲಾಹನ ಕರುಣೆ ಮತ್ತು ಮಹಾಸ್ವಾಭಿಮಾನವು ಅವನನ್ನು **ಕಲಿಮ ತಮ್‌ಜೀದಿನ** ಪವಿತ್ರ ಆತ್ಮದೊಂದಿಗೆ ಕಳುಹಿಸಿದ್ದಾನೆ. ಅವನು ಅತ್ಯಂತ ಬುದ್ಧಿವಂತನೂ ಮತ್ತು ವಿವೇಕಶಾಲಿಯು ಆಗಿರುವನು ಮತ್ತು ಹೃದಯವೈಶಾಲ್ಯ ಹೊಂದಿರುವನು ಹಾಗೂ ಲೌಕಿಕ ಹಾಗೂ ಆಂತರಿಕ ಜ್ಞಾನದಿಂದ ಪರಿಪೂರ್ಣನಾಗಿರುವನು. ಅವನು ಮೂರನ್ನು ನಾಲ್ಕು ಮಾಡುವನಾಗಿರುವನು (ಇದರ ಅರ್ಥ ತಿಳಿದುಬರಲಿಲ್ಲ) ದೊಶುಂಬ(ಸೋಮವಾರ) ಶುಭಕರ ದೋಶುಂಬ(ಸೋಮವಾರ)ವಾಗಿದೆ. ಆತ್ಮೀಯ ಮಗು ಪ್ರೀಯ ಮಗು **ಮಝ್‌ಹರುಲ್ ಅವ್ವಲಿ ವಲ್ ಆಖಿರೆ– ಮಝ್‌ಹರುಲ್ ಹಖ್ಖೆ ವಲ್‌ಅಲಾಎ– ಕಅನ್ನಲ್ಲಹ ನಝುಲ ಮಿನಸ್ಸಮಾಯಿ.** ಅವನ ಆಗಮನವೂ ಬಹಳ ಅನುಗ್ರಹದಾಯಕವಾಗಿದೆ ಮತ್ತು ಅಲ್ಲಾಹನ ಪ್ರತಾಪ ಕಾಣಲು ಕಾರಣವಾಗಿದೆ. ಪ್ರಕಾಶವು ಆಗಮಿಸುತ್ತದೆ ಪ್ರಕಾಶವ ನೋಡಿರಿ. ಅವನನ್ನು ಅಲ್ಲಾಹನು ತನ್ನ ಸಂಪ್ರೀತಿಯ ಸುಗಂಧದಿಂದ ಸಮ್ಮಿಲಿತಗೊಳಿಸಿದ್ದಾನೆ. ನಾವು ಅವನಲ್ಲಿ ತನ್ನ ಆತ್ಮವನ್ನು ಹಾಕುವೆನು, ಅಲ್ಲಾಹನ ನೆರಳು ಅವನ ಶಿರದ ಮೇಲೆ ಇರುವುದು. ಅವನು ಅತಿ ಅತಿ ವೇಗವಾಗಿ ಬೆಳೆಯುವನು ಮತ್ತು ಕೈದಿಗಳನ್ನು ಬಿಡುಗಡಗೊಳಿಸಲು ಕಾರಣವಾಗುವನು ಮತ್ತು ಭೂಮಿಯ ಅಂಚುಗಳವರೆಗೆ ಖ್ಯಾತಿ ಪಡೆಯುವನು ಹಾಗೂ ಜನಾಂಗಗಳು ಇವನಿಂದ ಅನುಗ್ರಹ ಪಡೆಯುವರು. ಆಗ ತನ್ನ ಆತ್ಮ ಬಿಂದು ಆಕಾಶದೆಡೆ ಎತ್ತಲ್ಪಡುವುದು **ವಕಾನ ಅಮ್‌ರಮ್ಮಖ್ಝೀಯ."**

**(ಮಜ್‌ಮೂಆ ಇಶ್ತಿಹಾರಾತ್, ಸಂಪುಟ–1, ಪುಟ–100, ಇಶ್ತಿಹಾರ್ 20 ಫೆಬ್ರವರಿ 1886)**

## ದಿವ್ಯದೂತರು (ಮಲಾಯಿಕ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ."

*(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 12)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.